2330

ಭಾರತದಲ್ಲಿ
ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆ

ಕರ್ನಾಟಕದ ಮೇಲ್ಮೆ

ಮಹಾದೇವ ಬಣಕಾರ

ಮಹದೇವ ಬಣಕಾರ ವಚನಗಳು

(ವಿದ್ವಾಂಸರ ಅಭಿಪ್ರಾಯ)

ಶ್ರೀ ಬಣಕಾರರ ವಚನಗಳಲ್ಲಿ ಅಪೂರ್ವ ಓಜಸ್ಸಿದೆ. ಅನುಭವವಿದೆ, ಗಾಢಭಕ್ತಿ, ಲೋಕ ವ್ಯವಹಾರ ಜ್ಞಾನ, ಮಾನವನ ಕುಂದು ದೋಷಗಳಲ್ಲಿ ಅನುಕಂಪ, ದೈವ-ಗುರುಗಳಲ್ಲಿ ಭಕ್ತಿ, ಉನ್ನತ ಜೀವನ ಮೌಲ್ಯಗಳಿಗೆ ಕರೆ, ಇವೆಲ್ಲ ಇವೆ.

ಶ್ರೀ ಮಹದೇವ ಬಣಕಾರ ವಚನಗಳ ಗ್ರಂಥ, ಒಂದು ಅನರ್ಘ್ಯ ಭಂಡಾರ.

—ಗೊರೂರು ರಾಮಸ್ವಾಮಿ ಅಯ್ಯಂಗಾರ್

ಮಹದೇವ ಬಣಕಾರರ ವಚನಗಳನ್ನು ಓದುತ್ತಿರುವಾಗ ಮನಸ್ಸಿಗೆ ತುಂಬಾ ಸಂತೋಷವಾಗುತ್ತದೆ. ಕಾರಣ, ಅಲ್ಲಿ ನನಗೆ ಒಬ್ಬ ನಿಜವಾದ ಅನುಭಾವಿಯ ಸನ್ ಮನಸ್ಸಿನ ಸಂಪರ್ಕ ದೊರೆಯುತ್ತದೆ.

—ಪು. ತಿ. ನರಸಿಂಹಾಚಾರ್

ಬಸವ, ಅಲ್ಲಮ, ಸಿದ್ಧರಾಮಾದಿಗಳಿಂದ ರಚಿತವಾದ ವಚನವಾಙ್ಮಯವು ಹೇಗೆ ಅದ್ವಿತೀಯವೂ ಅಪೂರ್ವವೂ ಆಗಿದೆಯೋ ಹಾಗೆಯೇ ಬಣಕಾರರ ವಚನ ವಾಙ್ಮಯವೂ ಅಪೂರ್ವವಾಗಿದೆ. ಅದ್ವಿತೀಯವಾಗಿದೆ. ಇದು ಆತ್ಮಸಾಹಿತ್ಯ.

ಇವರ ವಚನಗಳ ರಚನೆಗಳ ಮೇಲೆ ಕಣ್ಣಾಡಿಸಿದರೆ ಸಾಲದು. ಒಳಗಣ್ಣಾಡಿಸಿ ನೋಡಿ ಹೇಳಿದ ವಿಷಯಗಳನ್ನು ಕುರಿತು ಮನನಮಾಡಬೇಕು.

—ಎಸ್. ವ್ಹಿ. ಪರಮೇಶ್ವರ ಭಟ್ಟ

...'' ಈ ಶತಮಾನದ ಶ್ರೇಷ್ಠ ವಚನಕೃತಿ. ಜೀವನ ದರ್ಶ... ಗ್ರಂಥದುದ್ದಕ್ಕೂ ಕಾಣುತ್ತೇವೆ.

—ಡಾ|| ಎಂ. ಎಸ್. ಸುಂಕಾಪೂರ

...'' ವಿಶಿಷ್ಟಕೃತಿ, ಶ್ರೇಷ್ಠಕೃತಿ. ಇದರ ಮೇಲೆ ಲೇಖಕರ ...ನೆಯ ಶತಮಾನದ ರಚನೆಯೆಂದು ನಂಬಿಕೆ ಹುಟ್ಟಿಸುವ

—ಡಾ|| ಎಂ. ಎಂ. ಕಲಬುರ್ಗಿ

...ು ಅವರ ಅದ್ಭುತ ಸಾಹಿತ್ಯ ಸೃಷ್ಟಿಯು ಅವರನ್ನು ... ಕುಳ್ಳಿರಿಸಿದೆ. ಇಂಥ ಎತ್ತರದ ವಚನಕಾರರು ... ನಮ್ಮವ, ಇವ ನಮ್ಮವ ಎಂದು ಪ್ರೀತಿಯಿಂದ

—ಪಾಟೀಲ ಪುಟ್ಟಪ್ಪ

... ಕವಿ, ಹುಟ್ಟು ಕವಿ, ಭಾವಜೀವಿ, ಲಲಿತ ಸುಂದರ ...ಜಾಲವಾಗಿ ಕಾಗದಕ್ಕಿಳಿಯುತ್ತದೆ. ಶಿವಶರಣರ ... ವಚನಗಳ ಶೈಲಿ ಬಣಕಾರರ ರಕ್ತದಲ್ಲಿಯೇ ...ಕಾರರು ಖಂಡಿತವಾಗಿಯೂ ತೇನ್‌ಸಿಂಗ್ ಸಂಥವರು

—ಬಸವರಾಜ ಕಟ್ಟೀಮನಿ

ಭಾರತದಲ್ಲಿ

ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆ

(ಭಾರತದ ಎಲ್ಲ ರಾಜ್ಯಗಳ ಸಂಕ್ಷಿಪ್ತ, ಅಂಕಿ-ಅಂಶಗಳ ತುಲನಾತ್ಮಕ ವಿಹಂಗಮ ನೋಟ)

ಮಹದೇವ ಬಣಕಾರ ವಚನಗಳು

(ವಿದ್ವಾಂಸರ ಅಭಿಪ್ರಾಯ)

ಶ್ರೀ ಬಣಕಾರರ ವಚನಗಳಲ್ಲಿ ಅಪೂರ್ವ ಓಜಸ್ಸಿದೆ. ಅನುಭವವಿದೆ, ಗಾಢಭಕ್ತಿ, ಲೋಕ ವ್ಯವಹಾರ ಜ್ಞಾನ, ಮಾನವನ ಕುಂದು ದೋಷಗಳಲ್ಲಿ ಅನುಕಂಪ, ದೈವ-ಗುರುಗಳಲ್ಲಿ ಭಕ್ತಿ, ಉನ್ನತ ಜೀವನ ಮೌಲ್ಯಗಳಿಗೆ ಕರೆ, ಇವೆಲ್ಲ ಇವೆ.

ಶ್ರೀ ಮಹದೇವ ಬಣಕಾರ ವಚನಗಳ ಗ್ರಂಥ, ಒಂದು ಅನರ್ಘ್ಯ ಭಂಡಾರ.

—ಗೊರೂರು ರಾಮಸ್ವಾಮಿ ಅಯ್ಯಂಗಾರ್

ಮಹದೇವ ಬಣಕಾರರ ವಚನಗಳನ್ನು ಓದುತ್ತಿರುವಾಗ ಮನಸ್ಸಿಗೆ ತುಂಬಾ ಸಂತೋಷವಾಗು ತ್ತದೆ. ಕಾರಣ, ಅಲ್ಲಿ ನನಗೆ ಒಬ್ಬ ನಿಜವಾದ ಅನುಭಾವಿಯ ಸನ್ ಮನಸ್ಸಿನ ಸಂಪರ್ಕ ದೊರೆ ಯುತ್ತದೆ.

—ಪು. ತಿ. ನರಸಿಂಹಾಚಾರ್ಯ

ಬಸವ, ಅಲ್ಲಮ, ಸಿದ್ಧರಾಮಾದಿಗಳಿಂದ ರಚಿತವಾದ ವಚನವಾಙ್ಮಯವು ಹೇಗೆ ಅದ್ವಿತೀಯವೂ ಅಪೂರ್ವವೂ ಆಗಿದೆಯೋ ಹಾಗೆಯೇ ಬಣಕಾರರ ವಚನ ವಾಙ್ಮಯವೂ ಅಪೂರ್ವವಾಗಿದೆ. ಅದ್ವಿ ತೀಯವಾಗಿದೆ. ಇದು ಆತ್ಮಸಾಹಿತ್ಯ.

ಇವರ ವಚನಗಳ ರಚನೆಗಳ ಮೇಲೆ ಕಣ್ಣಾಡಿಸಿದರೆ ಸಾಲದು. ಒಳಗಣ್ಣಾಡಿಸಿ ನೋಡಿ ಹೇಳಿದ ವಿಷಯಗಳನ್ನು ಕುರಿತು ಮನನಮಾಡಬೇಕು.

—ಎಸ್. ವ್ಹಿ. ಪರಮೇಶ್ವರ ಭಟ್

...'' ಈ ಶತಮಾನದ ಶ್ರೇಷ್ಠ ವಚನಕೃತಿ. ಜೀವನ ದರ್ಶ... ...ಗ್ರಂಥದುದ್ದಕ್ಕೂ ಕಾಣುತ್ತೇವೆ.

—ಡಾ|| ಎಂ. ಎಸ್. ಸುಂಕಾಪೂರ

...'' ವಿಶಿಷ್ಟಕೃತಿ, ಶ್ರೇಷ್ಠಕೃತಿ. ಇದರ ಮೇಲೆ ಲೇಖಕರ ...ನೆಯ ಶತಮಾನದ ರಚನೆಯೆಂದು ನಂಬಿಕೆ ಹುಟ್ಟಿಸುವ ...

—ಡಾ|| ಎಂ. ಎಂ. ಕಲಬುರ್ಗಿ

... ಅವರ ಅದ್ಭುತ ಸಾಹಿತ್ಯ ಸೃಷ್ಟಿಯು ಅವರನ್ನು ... ಕುಳ್ಳಿರಿಸಿದೆ. ಇಂಥ ಎತ್ತರದ ವಚನಕಾರರು ...ರ ನಮ್ಮವ, ಇವ ನಮ್ಮವ ಎಂದು ಪ್ರೀತಿಯಿಂದ ...

—ಪಾಟೀಲ ಪುಟ್ಟಪ್ಪ

... ಕವಿ, ಹುಟ್ಟು ಕವಿ, ಭಾವಜೀವಿ, ಲಲಿತ ಸುಂದರ ...ಜಾಲವಾಗಿ ಕಾಗದಕ್ಕಿಳಿಯುತ್ತದೆ. ಶಿವಶರಣರ ... ವಚನಗಳ ಶೈಲಿ ಬಣಕಾರರ ರಕ್ತದಲ್ಲಿಯೇ ...ಕಾರರು ಖಂಡಿತವಾಗಿಯೂ ತೇಜ್‌ಸಿಂಗ್‌ನಂಥವರು

—ಬಸವರಾಜ ಕಟ್ಟೀಮನಿ

ಕರ್ನಾಟಕದ ಮೇಲ್ಮೆ

ಮಹದೇವ ಬಣಕಾರ



BHARATADALLI BHASHA ALPA SANKHYATAR HITARAKSANE

Written by : Mahadev Banakar
Ex. MLA

ಮೊದಲ ಮುದ್ರಣ : ೩ನೇ ಅಕ್ಟೋಬರ್, ೧೯೮೨

Published by : Smt. Parwatamma Mahadev Banakar
Anubhava Mantapa Prakashan
1213, 5th Block, Rajajinagar,
Bangalore-560 010 Phone : 81250

ಮುಖಚಿತ್ರ : ಕಮಲೇಶ್

ಬೆಲೆ : ಹನ್ನೆರಡು ರೂಪಾಯಿಗಳು

ಈ ಗ್ರಂಥವನ್ನು ಭಾರತದ ಭಾಷಾ ಅಲ್ಪ ಸಂಖ್ಯಾತರಿಗೆ ಅರ್ಪಿಸಿದ್ದೇನೆ.

—ಲೇಖಕ

ಮುದ್ರಕರು : ಅನುಭವ ಪ್ರಿಂಟರ್ಸ
೧೨೧೩, ೫ನೇ ವಿಭಾಗ, ರಾಜಾಜಿನಗರ,
ಬೆಂಗಳೂರು-೫೬೦ ೦೧೦.

ಪರಿವಿಡಿ

(P.T.O.)

ಮುನ್ನುಡಿ

ಭಾರತವು ಬಹುಭಾಷಾ ರಾಷ್ಟ್ರವಾಗಿದೆ. ಅಲ್ಲಿರುವಷ್ಟು ಭಾಷೆಗಳು, ಉಪ ಭಾಷೆಗಳು ಜಗತ್ತಿನ ಯಾವ ದೇಶದಲ್ಲಿಯೂ ಇಲ್ಲ. ಭಾರತದಲ್ಲಿ ಅನೇಕ ಭಾಷೆಗಳಿವೆ ಯೆಂದು ಹೇಳಿದರೆ ಭಾರತದ ಬಗೆಗೆ ಏನನ್ನೂ ಹೇಳಿದಂತೆ ಆಗಲಾರದು. ೧೯೬೧ ನೆಯ ಜನಗಣತಿಯ ಮೇರೆಗೆ, ಭಾರತದಲ್ಲಿ ಕೆಲವೇ ಜನರು ಆಡುವ ಭಾಷೆಗಳಿಂದ ಹಿಡಿದು ಮಿಲಿಯಗಟ್ಟಲೆ ಜನರು ಆಡುವ ಭಾಷೆಗಳವರೆಗೆ, ಅದು, ವೈವಿಧ್ಯಮಯ ಮಾತಿನ ಭಾರಿ ವಿಪುಲತೆಯನ್ನು ಪಡೆದಿದೆ. ೧೬೫೨ ಭಾಷೆಗಳೂ ಉಪಭಾಷೆಗಳೂ ಕಿಕ್ಕಿರಿದು ತುಂಬಿಕೊಂಡು ಭಾರತವು ಭಾಷೆಗಳ ಒಂದು ಅಪೂರ್ವ ವಸ್ತು ಸಂಗ್ರಹಾ ಲಯವೆನಿಸಿದೆ. ಜಗತ್ತಿನಲ್ಲಿ ಸುಮಾರಾಗಿ ೬೦೦೦ ಭಾಷೆಗಳಿವೆ ಎಂಬುದನ್ನು ತಿಳಿದರೆ ಭಾರತದ ಭಾಷೆಗಳ ವಿಪುಲ ವೈವಿಧ್ಯದ ಕಲ್ಪನೆ ಬರಬಹುದು. ಜಗತ್ತಿನ ನಾಲ್ಕನೆಯ ಒಂದು ಭಾಗಕ್ಕಿಂತಲೂ ಹೆಚ್ಚು ಭಾಷೆಗಳು ಭಾರತದಲ್ಲಿರುವುದು ಆದರ ಶಕ್ತಿಯೂ ಹೌದು, ದೌರ್ಬಲ್ಯವೂ ಹೌದು. ಶಕ್ತಿ ಏಕೆಂದರೆ, ಅಭಿವ್ಯಕ್ತಿಗೆ ಅನೇಕ ಮಾಧ್ಯಮ ಗಳಿವೆ. ಭಾರತವು ಅವೆಲ್ಲವುಗಳಿಂದಲೂ ಅನುಭವ ಸಂಪತ್ತನ್ನು ಪಡೆದುಕೊಂಡು ತನ್ನ ಬದುಕಿನ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಬಹುದು; ದೌರ್ಬಲ್ಯ ಏಕೆಂದರೆ ಈ ಅನೇಕ ಭಾಷೆಗಳು ಭಾಷಾ ದುರಭಿಮಾನವನ್ನು ಪ್ರಚೋದಿಸಿ, ಒಂದು ಭಾಷೆಯವರು ಇನ್ನೊಂದು ಭಾಷೆಯವರನ್ನು ದ್ವೇಷಿಸುವಂತೆ ಮಾಡಿ, ದೇಶದ ಶಕ್ತಿಯನ್ನು ನಿರರ್ಥಕ ಕಲಹಗಳಲ್ಲಿ ಹ್ರಾಸಗೊಳಿಸಿಕೊಳ್ಳಬಹುದು.

ಈ ವಿಶಾಲ ದೇಶವನ್ನು ಬಹುತೇಕವಾಗಿ ಪ್ರಮುಖ ಭಾಷಾ ರಾಜ್ಯಗಳಲ್ಲಿ ವಿಂಗಡಿಸಿ ಹಾಕಲಾಗಿದೆ. ಮೈಥಿಲೀ, ಡೋಗ್ರಿ ಭಾಷಾ ರಾಜ್ಯಗಳು ಬೇಕೆನ್ನುವ ಕೂಗು ಇನ್ನೂ ಅಲ್ಲಲ್ಲಿ ಇದ್ದೇ ಇದೆ. ದೇಶವನ್ನು ಭಾಷೆಯ ತಳಹದಿಯ ಮೇಲೆ ಎಷ್ಟೇ ಬುದ್ಧಿವಂತಿಕೆಯಿಂದ ವಿಂಗಡಿಸಿದರೂ, ಎರಡು ರಾಜ್ಯಗಳ ಗಡಿಪ್ರದೇಶದಲ್ಲಿ, ಆ ರಾಜ್ಯದ ಭಾಷೆಯಲ್ಲದ ಇನ್ನೊಂದು ಭಾಷೆಯನ್ನು ಆಡುವ ಜನರು ಉಳಿದೇ ಉಳಿಯುತ್ತಾರೆ. ಗಡಿ ಪ್ರದೇಶದಂತೆ ರಾಜ್ಯದ ಒಳಗೂ ಕೂಡ ಭಾಷಾ ಅಲ್ಪ ಸಂಖ್ಯಾತರು ಗಣನೀಯ ಸಂಖ್ಯೆಯಲ್ಲಿ ಅಲ್ಲಲ್ಲಿ ಇದ್ದೇ ಇರುತ್ತಾರೆ. ಈ ಕಾರಣ ದಿಂದಲೇ ಭಾಷಾ ಅಲ್ಪಸಂಖ್ಯಾತರ ಪ್ರಶ್ನೆ ಪ್ರತಿಯೊಂದು ರಾಜ್ಯದಲ್ಲಿಯೂ ಕಂಡೇ ಕಾಣುತ್ತದೆ. ಇಂಥ ಭಾಷಾ ಅಲ್ಪಸಂಖ್ಯಾತ ವರ್ಗದವರಿಗೆ ಅವರ ಭಾಷಾ ವೈಶಿಷ್ಟ್ಯವನ್ನು ಕಾಯ್ದುಕೊಳ್ಳುವ, ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಹೊಂದುವ ಭರವಸೆ ಹಾಗೂ ಅನುಕೂಲ ಇರಬೇಕು.

ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆ ಇರಬೇಕೆನ್ನುವ ಮಾತನ್ನು ಯಾವ ನಾಗರಿಕ ಸರಕಾರವೂ ನಿರಾಕರಿಸಲಾರದು. ಆದರೆ, ಅದೇ ವೇಳೆಗೆ ಭಾಷಾ ಅಲ್ಪಸಂಖ್ಯಾತರು ಕೂಡ ತಮ್ಮ ಇತಿಮಿತಿಗಳನ್ನು ಅರಿತುಕೊಳ್ಳಬೇಕಾದ ಅಗತ್ಯ ಇದೆ. ತಮ್ಮ ರಕ್ಷಣೆಯನ್ನು ತಾವಿರುವ ರಾಜ್ಯದ ಪ್ರಮುಖ ಭಾಷಾವರ್ಗದ ಜನರೊಂದಿಗೆ ಕೂಡಿ ಹೋಗುವುದರಲ್ಲಿಯೇ ಇದೆ ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು,

ಕಾಲ್ಪನಿಕ ಕಾರಣ ಸೃಷ್ಟಿಸಿ, ಇಲ್ಲದ ಭಯ ತುಂಬಿಕೊಂಡು, ಬಹುಸಂಖ್ಯಾತ ಜನರನ್ನು ಎದುರು ಹಾಕಿಕೊಳ್ಳುವ ಪ್ರವೃತ್ತಿಯಿಂದ ದೂರವಿದ್ದಷ್ಟು ಅವರಿಗೇ ಕ್ಷೇಮ ಇದೆ. ಪ್ರತಿಯೊಂದು ಭಾಷಾನ್ವಯ ರಾಜ್ಯವೂ ಈ ಅಲ್ಪಸಂಖ್ಯಾತ ಭಾಷಾವರ್ಗದ ಜನರ ಪ್ರಾಥಮಿಕ ಶಿಕ್ಷಣದ ಆವಶ್ಯಕತೆಗಳನ್ನು ಸಮರ್ಪಕವಾಗಿ ಪೂರೈಸಿಕೊಡಬೇಕು. ರಾಜ್ಯಗಳು ಭಾಷಾ ಅಲ್ಪಸಂಖ್ಯಾತರಿಗೆ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿವೆ, ಇಲ್ಲವೆ ವಿಫಲವಾಗಿವೆ ಎಂಬುದನ್ನು ಪರಿಶೀಲಿಸಿ, ತನಗೆ ವರದಿ ಮಾಡಬೇಕೆಂದು ಕೇಂದ್ರ ಸರಕಾರವು ಸಂಸತ್ತಿನ ಆದೇಶದ ಮೇರೆಗೆ ಭಾಷಾ ಅಲ್ಪಸಂಖ್ಯಾತರ ಆಯುಕ್ತರೊಬ್ಬರನ್ನು ನೇಮಿಸಿದೆ. ಅವರು ದೇಶಾದ್ಯಂತ ಸಂಚರಿಸಿ, ಭಾರತ ಒಕ್ಕೂಟದ ಪ್ರತಿಯೊಂದು ರಾಜ್ಯವೂ ಈ ಭಾಷಾ ಅಲ್ಪ ಸಂಖ್ಯಾತರಿಗೋಸುಗ ಏನು ಮಾಡಿದೆ ಎನ್ನುವುದನ್ನು ತಮ್ಮ ವರದಿಯ ಮೂಲಕ ಪ್ರತಿವರ್ಷವೂ ಪಾರ್ಲಿಮೆಂಟಿಗೆ ತಿಳಿಸುತ್ತಾರೆ.

ಅಲ್ಪಸಂಖ್ಯಾತ ಭಾಷೆಗಳ ಜನರ ಸಂಬಂಧದಲ್ಲಿ ಈ ಆಯುಕ್ತರು ನೀಡುತ್ತಿರುವ ವರದಿಗಳು ಮಾರ್ಮಿಕ ಸಂಗತಿಗಳನ್ನು ಒಳಗೊಂಡಿವೆ. ಯಾವ ರಾಜ್ಯ ಏನು ಮಾಡಿದೆ, ಏನು ಮಾಡಿಲ್ಲ ಎನ್ನುವುದನ್ನು ಅವು ಪ್ರಾಮಾಣಿಕ ರೀತಿಯಿಂದ ಎತ್ತಿ ತೋರಿಸಿವೆ. ಶ್ರೀ ಮಹಾದೇವ ಬಣಕಾರರು ತಮ್ಮ ಈ ಬಹು ಉಪಯುಕ್ತ ಅಭ್ಯಾಸದಲ್ಲಿ ಆ ಸೇತು ಹಿಮಾಚಲದವರೆಗೆ, ಪಶ್ಚಿಮ ದಿಗಂತದ ಬಿಕಾನೇರದಿಂದ ಪೂರ್ವ ದಿಗಂತದ ಅರುಣಾಚಲದ ವರೆಗೆ, ಬೇರೆ ಬೇರೆ ರಾಜ್ಯಗಳಲ್ಲಿ ಭಾಷಾ ಅಲ್ಪ ಸಂಖ್ಯಾತರ ಸ್ಥಿತಿಗತಿಗಳು ಏನಿವೆ ಎನ್ನುವುದನ್ನು ಭಾಷಾ ಅಲ್ಪಸಂಖ್ಯಾತ ಆಯುಕ್ತರ ಮೂರು ದಶಕಗಳ ವರದಿಗಳನ್ನು ಹೆಕ್ಕಿ ನೋಡಿ, ಎಲ್ಲರ ಕಣ್ಣನ್ನೂ ತೆರೆಸುವಂತೆ ತೋರಿಸಿ ಕೊಟ್ಟಿದ್ದಾರೆ. ಈ ಮಾದರಿಯ ಅಭ್ಯಾಸ ಇದುವರೆಗೆ ಭಾರತದ ಯಾವ ಭಾಷೆಯಲ್ಲಿಯೂ ಆಗಿಲ್ಲ. ಭಾಷಾ ಅಲ್ಪಸಂಖ್ಯಾತರನ್ನು ಕನ್ನಡಿಗರು ಹೀನಾಯವಾಗಿ ಕಂಡಿರುವರೆಂದು ಹೇಳಿ, ಕರ್ನಾಟಕವನ್ನು ಖಳನಾಯಕನ್ನಾಗಿ ಮಾಡಿ ತೋರಿಸುವ ಮಹಾರಾಷ್ಟ್ರದ ಪ್ರಯತ್ನವು ಎಷ್ಟು ಸುಳ್ಳು, ಎಂಥ ಪೊಳ್ಳು ಎಂಬುದನ್ನು ಶ್ರೀ. ಬಣಕಾರರು ಬಹು ಸಮರ್ಪಕವಾಗಿ, ಮನಸ್ಸಿಗೆ ವೇದ್ಯವಾಗುವಂತೆ, ವಸ್ತು ಸ್ಥಿತಿಯಿಂದ ತೋರಿಸಿಕೊಟ್ಟಿದ್ದಾರೆ. ಕರ್ನಾಟಕದ ಬಗೆಗೆ ಅಧಿಕೃತವಾಗಿ ಮಾತ ನಾಡುವ ಪಾಂಡಿತ್ಯ, ವಿಷಯ ಸಂಗ್ರಹ ಹಾಗೂ ಅಭಿವ್ಯಕ್ತಿ ಎಲ್ಲವೂ ಅವರಲ್ಲಿ ಯಥೇಷ್ಟವಾಗಿವೆ.

ಸಮಗ್ರ ಭಾರತದಲ್ಲಿ, ಭಾಷಾ ಅಲ್ಪಸಂಖ್ಯಾತರಿಗೆ ಸಂವಿಧಾನವು ನೀಡಿರುವ ಭರವಸೆಗಳನ್ನು ನೆರವೇರಿಸಿಕೊಟ್ಟ ರಾಜ್ಯವೆಂದರೆ ಕರ್ನಾಟಕ ಒಂದೇ ಎನ್ನುವುದು ಈ ಅಭ್ಯಾಸದಿಂದ ವೇದ್ಯವಾಗುತ್ತದೆ. ಪ್ರಸ್ತುತ ಪುಸ್ತಕವು ಭಾರತದಲ್ಲಿ ಭಾಷಾ ಅಲ್ಪ ಸಂಖ್ಯಾತರ ಸ್ಥಿತಿಗಳ ಬಗೆಗೆ ಹಿಡಿದ ಕನ್ನಡಿಯಾಗಿದೆ. ಮಹಾರಾಷ್ಟ್ರ ರಾಜ್ಯವು ಭಾಷಾ ಅಲ್ಪಸಂಖ್ಯಾತರ ವಿಷಯದಲ್ಲಿ ಬಹು ದೊಡ್ಡ ರೀತಿಯಿಂದ ತಪ್ಪಿದೆ. ಅಲ್ಲಿ

ವರ್ಷವರ್ಷವೂ ಕನ್ನಡ ಓದುವ ವಿದ್ಯಾರ್ಥಿಗಳ ಸಂಖ್ಯೆ, ಹಾಗೂ ಕನ್ನಡ ಓದಿಸುವ ಶಾಲೆಗಳ ಸಂಖ್ಯೆ ಸೊರಗುತ್ತ ನಡೆದಿವೆ. ಆದರೆ, ಅದೇ ಕರ್ನಾಕದಲ್ಲಿ ಮರಾಠೀ ಓದುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಮರಾಠೀ ಓದಿಸುವ ಶಾಲೆಗಳ ಸಂಖ್ಯೆ ವರ್ಷ ವರ್ಷವೂ ವರ್ಧಿಸುತ್ತಲೇ ನಡೆದಿವೆ. ಇಷ್ಟಾದರೂ ತಾನು ದೋಚಿದವನ ಮೇಲೆಯೇ ತಿರುಬೊಬ್ಬೆ ಹಾಕುವ ಕಳ್ಳನಂತೆ ಮಹಾರಾಷ್ಟ್ರದವರು ಕರ್ನಾಟಕ ಸರಕಾರದಿಂದ ಅನ್ಯಾಯ ಆಗಿದೆಯೆಂದು ಕರ್ನಾಟಕದ ಕಡೆಗೆ ಆರೋಪದ ಬೆರಳನ್ನು ಎತ್ತುತ್ತಲೇ ಇದ್ದಾರೆ. ಮಳೆ ಬಂದಿತೆಂದು ಉಪ್ಪಿನವರು ಅಳುವುದಕ್ಕೆ ಆರಂಭಿಸಿದರೆ, ತೆಂಗಿನ ಕಾಯಿಯವನೂ ಅಳುವುದಕ್ಕೆ ಆರಂಭಿಸಿದನಂತೆ. ಮಹಾರಾಷ್ಟ್ರದವರ ವರ್ತನೆ, ಕನ್ನಡದ ಈ ಜನಪ್ರಿಯ ಗಾದೆಯನ್ನು ನೆನಪಿಗೆ ತಂದುಕೊಡುತ್ತದೆ.

ಸಂವಿಧಾನವು ಭಾಷಾ ಅಲ್ಪಸಂಖ್ಯಾತರಿಗೆ ನೀಡಿರುವ ಪವಿತ್ರ ಭರವಸೆಗಳಲ್ಲಿ, ಅವರ ಮಕ್ಕಳಿಗೆ ಪ್ರಾಥಮಿಕ-ಕಾಲೇಜು ಶಿಕ್ಷಣವನ್ನು ಅವರ ಮಾತೃಭಾಷೆಯಲ್ಲಿಯೇ ಕಲಿಸಬೇಕೆನ್ನುವುದು ಒಂದು. ಬೇರೆ ರಾಜ್ಯಗಳ ಸಂವಿಧಾನದ ಈ ಭರವಸೆಯನ್ನು ಉಲ್ಲಂಘನೆಯ ಮೂಲಕ ಪರಿಪಾಲಸಿಕೊಂಡು ಬರುತ್ತಿರುವಾಗ, ಕರ್ನಾಟಕವೊಂದೇ ಅದನ್ನು ಅನುಸರಿಸುವ ಮೂಲಕ ಗೌರವಿಸಿಕೊಂಡು ಬರುತ್ತಿದೆ. ಈ ಮಾತು ಭಾಷಾ ಅಲ್ಪಸಂಖ್ಯಾತರ ಆಯುಕ್ತರಿಂದ ಸ್ಪಷ್ಟಪಟ್ಟಿದೆ. ಅವರನ್ನು ಕರ್ನಾಟಕ ಸರಕಾರವು ನೇಮಕ ಮಾಡಿರದೆ, ಭಾರತ ಸರಕಾರವು ನೇಮಕ ಮಾಡಿದೆ ಎನ್ನುವುದು ತಿಳಿದರೆ, ಕರ್ನಾಟಕದ ಮೇಲ್ಮೆಯ ಬಗ್ಗೆಯಾದರೂ ಹೆಮ್ಮೆ ಎನಿಸುತ್ತದೆ.

ಭಾರತ ಸರಕಾರವು ಅನೇಕ ಆಯೋಗಗಳನ್ನು ನೇಮಿಸುತ್ತದೆ; ಆದರೆ ಅವುಗಳಿಗೆ, ಪರಿಣಾಮಕಾರೀ ರೀತಿಯಿಂದ ಕಾರ್ಯ ನಿರ್ವಹಿಸುವಂತೆ ಹೆಚ್ಚಿನ ಅಧಿಕಾರ ವನ್ನೇನೂ ಕೊಟ್ಟಿರುವುದಿಲ್ಲ. ಉದಾಹರಣೆಗೆ ಪತ್ರಿಕಾ ಮಂಡಲಿ ಇದೆ, ಭಾಷಾ ಅಲ್ಪಸಂಖ್ಯಾತರ ಆಯುಕ್ತರಿದ್ದಾರೆ. ಮೂವತ್ತು ವರ್ಷಗಳಿಂದ ಅವರು ಭಾರತ ಸರಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸುತ್ತಲೇ ಇದ್ದಾರೆ. ಭಾರತ ಸರಕಾರವು ಅವುಗಳನ್ನು ಕಣ್ಣೆತ್ತಿ ನೋಡಿ, ಯಾವ ಕ್ರಮವನ್ನು ಕೈಗೊಂಡಿಲ್ಲ. ಈ ಕಾರಣ ದಿಂದಲೇ, ತಪ್ಪು ಮಾಡುವವರಿಗೇನೇ ಹೆಚ್ಚು ಗದ್ದಲ ಮಾಡುವ ಅವಕಾಶ ಲಭಿಸಿದೆ. ಭಾರತ ಸರಕಾರವು ನ್ಯಾಯ ಮಾಡಿದವರನ್ನು, ಅನ್ಯಾಯ ಮಾಡಿದವರನ್ನು ಒಂದೇ ದೃಷ್ಟಿಯಿಂದ ನೋಡುತ್ತಿರುವುದು ದೇಶದ ದುರದೃಷ್ಟವೆನಿಸಿದೆ.

ಕರ್ನಾಟಕ ಸರ್ಕಾರವು ಭಾಷಾ ಅಲ್ಪಸಂಖ್ಯಾತರ ಬಗೆಗೆ ಅನುಸರಿಸುತ್ತ ಬಂದಿ ರುವ ಬಹು ಉದಾರ ಧೋರಣೆಯು ದೇಶಕ್ಕೆ ಮಾದರಿ ಎನಿಸಬೇಕು. ಭಾರತ ಸರಕಾರವು ತನ್ನ ಧೃತರಾಷ್ಟ್ರ ದೃಷ್ಟಿಯನ್ನು ಬಿಟ್ಟು ಕರ್ನಾಟಕದ ಕಡೆಗೆ ನೋಡಿದರೆ ಅದಕ್ಕೆ ಕರ್ನಾಟಕದ ಮೇಲ್ಮೆ ಗೊತ್ತಾಗುತ್ತದೆ. ಕರ್ನಾಟಕದ ಬಗೆಗೆ ಭಾರತ ಸರಕಾರವು ಈ ಕುರುಡು ಇರಿಸಿಕೊಂಡಿರುವ ಕಾರಣದಿಂದಲೇ ಅದು ಕರ್ನಾಟಕದ ಭಾಷಾ ನೀತಿಯ ಬಗೆಗೆ ಇಲ್ಲದ್ದೊಂದು ಹೇಳುವ ಚಾಡಿಯ ಮಾತುಗಳಿಗೆ ಕಿವಿಸೋಲು ತ್ತದೆ. ಕರ್ನಾಟಕವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡದಿದ್ದರೂ ಚಿಂತೆಯಿಲ್ಲ

ಭಾರತ ಸರಕಾರವು ಕನಿಷ್ಟಪಕ್ಷ, ಭಾಷಾ ಅಲ್ಪ ಸಂಖ್ಯಾತರ ಆಯುಕ್ತರ ವರದಿಗಳನ್ನು ಓದುವ ಪ್ರಯತ್ನವನ್ನಾದರೂ ಮಾಡಬೇಕು.

ಒಂದು ಭಾಷಾ ರಾಜ್ಯದಲ್ಲಿ ತಮ್ಮ ಸ್ಥಾನಮಾನ ಏನಿರಬೇಕೆಂಬ ಬಗೆಗೆ ವಿಪರೀತ ತಪ್ಪು ತಿಳುವಳಿಕೆ ಮಾಡಿಕೊಂಡಿರುವ ಕೆಲ ಭಾಷಾಂಧ ಅಲ್ಪಸಂಖ್ಯಾತರು, ಕರ್ನಾಟಕ ರಾಜ್ಯ ಸರಕಾರವು ಸ್ವೀಕರಿಸಿರುವ ಗೋಕಾಕ ಸಮಿತಿಯ ವರದಿಯ ಬಗೆಗೂ ಶ್ರೀಮತಿ ಇಂದಿರಾ ಗಾಂಧಿಯವರೆದುರು ದೂರು ಹೇಳಿದ್ದಾರೆ. ಈ ಭಾಷಾ ಅಲ್ಪ ಸಂಖ್ಯಾತರು, ರಾಜ್ಯದಲ್ಲಿಯ ತಮ್ಮ ಸಂಖ್ಯೆಯನ್ನು ಎಬ್ಬಿಸಿ ಹೇಳಿ, ತಮ್ಮ ಭಾಷೆಗೆ ಕನ್ನಡ ಭಾಷೆಗೆ ಕೊಡುವಷ್ಟೇ ಸರಿಸಮಾನ ಸ್ಥಾನ ಕೊಡಬೇಕೆಂದು ಪ್ರತಿಪಾದಿಸಿದ್ದಾರೆ. ಭಾರತ ಸರಕಾರವು ಮಿತಿಮೀರಿ ಹೋಗುತ್ತಿರುವ ಭಾಷಾ ಅಲ್ಪಸಂಖ್ಯಾತರ ಈ ದುರಭಿಮಾನಕ್ಕೆ ತಡೆಹಾಕಬೇಕು. ಪ್ರತಿಯೊಂದು ರಾಜ್ಯದಲ್ಲಿಯೂ ಅಲ್ಲಿಯ ಮುಖ್ಯ ಭಾಷೆಗೇ ಪ್ರಮುಖ ಸ್ಥಾನ ಇರಬೇಕು. ಮಿಕ್ಕುಳಿದ ಭಾಷೆಗಳಿಗೆ ದ್ವಿತೀಯ ಸ್ಥಾನ ತಪ್ಪಬಾರದು. ಇದರರ್ಥ, ರಾಜ್ಯದ ಭಾಷೆಯನ್ನು ಬಿಟ್ಟು ಇನ್ನುಳಿದ ಭಾಷೆಗಳು ದ್ವಿತೀಯ ದರ್ಜೆಯ ಭಾಷೆಗಳೆಂದು ಅಲ್ಲ. ಮಹಾರಾಷ್ಟ್ರದಲ್ಲಿ ಕನ್ನಡಕ್ಕೆ ದ್ವಿತೀಯ ಭಾಷೆಯ ಸ್ಥಾನ ಇರಬೇಕೆಂದು ಹೇಳಿದರೆ ಕನ್ನಡವು ದ್ವಿತೀಯ ದರ್ಜೆಯ ಭಾಷೆ ಎನಿಸಲಾರದು.

ಭಾಷೆಯ ಈ ಒತ್ತಾಯವನ್ನು ಸಂಬಂಧಿಸಿದ ಜನರೊಂದೇ ಅಲ್ಲದೆ, ಭಾರತ ಸರಕಾರವೂ ಇದನ್ನು ಅರ್ಥ ಮಾಡಿಕೊಳ್ಳಬೇಕು. ಭಾಷಾ ಪ್ರಶ್ನೆಯನ್ನು ಬಹು ಭಾಷಾ ರಾಜ್ಯವಾದ ಸೋವಿಯತ್ ರಷ್ಯ ಬಹು ಸಮರ್ಪಕವಾಗಿ ಬಿಡಿಸಿದೆ. ಅದೇ ಮಾದರಿಯನ್ನು ಅನುಲಕ್ಷಿಸಿ, ಭಾರತ ಒಕ್ಕೂಟವೂ ಈ ಭಾಷಾ ಪ್ರಶ್ನೆಯನ್ನು ಬಿಡಿಸಬೇಕು. ಕರ್ನಾಟಕ ಸರಕಾರವು ಗೋಕಾಕ ವರದಿಯನ್ನು ಸ್ವೀಕರಿಸಿ ಈ ದಿಸೆಯಲ್ಲಿ ಒಂದು ನಿಶ್ಚಿತ ಹೆಜ್ಜೆ ಇರಿಸಿದೆ. ಅದರಲ್ಲಿ ರಾಜ್ಯದ ಮುಖ್ಯ ಭಾಷೆಗೆ ಪುರಸ್ಕಾರ ಇದೆಯಾದರೂ ಇನ್ನುಳಿದ ಭಾಷೆಗಳ ಬಗೆಗೆ ತಿರಸ್ಕಾರವಿಲ್ಲ.

ಶ್ರೀ ಮಹಾದೇವ ಬಣಕಾರರು ಸರಕಾರ ಇಲ್ಲವೆ ಸಾಹಿತ್ಯ ಪರಿಷತ್ತಿನಂಥ ಪ್ರಾತಿನಿಧಿಕ ಸಂಸ್ಥೆಯು ಮಾಡಬೇಕಾದ ಕೆಲಸವನ್ನು, ಕನ್ನಡ ಹಾಗೂ ಕರ್ನಾಟಕದ ಮೇಲಿನ ಪ್ರೇಮದಿಂದ, ಒಬ್ಬ ವ್ಯಕ್ತಿಯಾಗಿ ಮಾಡಿದ್ದಾರೆ. ಅವರಿಗೆ ಕನ್ನಡಿಗರು ಹಾಗೂ ಕರ್ನಾಟಕ ಸರಕಾರ ಇಬ್ಬರೂ ಉಪಕೃತರಾಗಿರಬೇಕಾಗಿದೆ. ಮಹಾಜನ ವರದಿ ಇರಲಿ, ಕಾಸರಗೋಡಿನ ಪ್ರಶ್ನೆ ಇರಲಿ, ಶ್ರೀ ಬಣಕಾರರು ತಮ್ಮ ಅಭ್ಯಾಸದ ಬೆಳಕನ್ನು ಅವುಗಳ ಮೇಲೆ ಚೆಲ್ಲಿ, ಎಲ್ಲರಿಗೂ ಕಾಣುವಂತೆ ಸತ್ಯವನ್ನು ತೋರಿಸಿ ಕೊಡುತ್ತಾರೆ. ಇಂಥ ಒಂದು ಅಭ್ಯಾಸಪೂರ್ಣ ಕೃತಿಯನ್ನು ರಚಿಸಿದ ಬಗೆಗೆ ಇನ್ನೊಮ್ಮೆ ಅಭಿನಂದನೆಗಳು.

ಪ್ರಪಂಚ : ವಿಶ್ವವಾಣಿ

ಹುಬ್ಬಳ್ಳಿ ೧-೧೦-೮೨

ಪಾಟೀಲ ಪುಟ್ಟಪ್ಪ

ಪೀಠಿಕೆ

ಪ್ರಸಕ್ತ ಸನ್ನಿವೇಶದಲ್ಲಿ ಮಾತೃಭಾಷೆಗಳ ಶೈಕ್ಷಣಿಕ ಮಾಧ್ಯಮದ ವಿಷಯುವಾಗಿ, ಹಾಗೂ ಭಾಷಾಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವ ಕ್ರಮವನ್ನು ಮುಂದುವರಿಸುವ ವಿಷಯವಾಗಿ ಗಂಭೀರವಾಗಿ ಆಲೋಚಿಸಬೇಕಾಗಿದೆ.

ಯಾಕೆಂದರೆ ಭಾಷಾವಾರು ಪ್ರಾಂತ ರಚನೆಯಾದಂದಿನಿಂದ ಇಂದಿನವರೆಗೆ ಆಯಾ ರಾಜ್ಯಗಳಲ್ಲಿ ಸೇರ್ಪಡೆಗೊಂಡ ಭಾಷಾಅಲ್ಪಸಂಖ್ಯಾತರು ಈಗಲೂ ತಮ್ಮ ಮೂಲ ಸ್ಥಿತಿಯಲ್ಲಿಯೇ ಉಳಿದುಕೊಂಡಿದ್ದಾರಲ್ಲದೆ, ತಮ್ಮ ತಮ್ಮ ಮಾತೃಭಾಷೆ ಹಾಗೂ ಮಾತೃಭೂಮಿಯ ಅಭಿಮಾನವನ್ನು ಹೆಚ್ಚಿಸಿಕೊಳ್ಳುತ್ತ ನಡೆದಿದ್ದಾರೆ. ತಾವು ಸಮಾವೇಶಗೊಂಡು ವಾಸಿಸಿರುವ ರಾಜ್ಯಗಳ ಭಾಷೆಗಳ ಬಗ್ಗೆ ಹಾಗೂ ರಾಜ್ಯಗಳ ಬಗ್ಗೆ ಪ್ರತ್ಯೇಕತಾ ಮನೋಭಾವನೆಯನ್ನು ಹೊಂದಿರುವುದರಿಂದ ಆಗಾಗ ಈ ಭಾಷಾ ಅಲ್ಪಸಂಖ್ಯಾತರ ಮತ್ತು ಭಾಷಾ ಬಹುಸಂಖ್ಯಾತರ ಮಧ್ಯ ಅನವಶ್ಯಕ ಗೊಂದಲಗಳು ಏಳುತ್ತಲೇ ಇವೆ. ಉಭಯತರಲ್ಲಿ ಅನ್ಯೋನ್ಯ, ಪ್ರೀತಿವಿಶ್ವಾಸಗಳು ಕಡಿಮೆಯಾಗುತ್ತಿದ್ದು ರಾಜ್ಯಗಳ ಹಾಗೂ ರಾಷ್ಟ್ರದ ಭಾವೈಕ್ಯತೆಗೆ ದಕ್ಕೆಯುಂಟಾಗುತ್ತಲಿದೆ.

ಪ್ರತಿಯೊಬ್ಬರೂ ತಮ್ಮ ತಮ್ಮ ಮಾತೃಭಾಷೆಗಳಲ್ಲಿಯೇ ಶಿಕ್ಷಣ ಮಾಧ್ಯಮವನ್ನು ಹೊಂದಬೇಕೆಂದು ಬಯಸುವುದಾದರೆ ಅದೊಂದು ಬಿಡಿಸಲಾರದ ಸಮಸ್ಯೆಯೇ ಆಗುತ್ತದೆ. ಯಾಕಂದರೆ, ಸಂವಿಧಾನದ ಎಂಟನೇ ಶೆಡ್ಯೂಲಿನಲ್ಲಿ ಮಾನ್ಯತೆ ಪಡೆದ ಭಾರತದ ೧೫ ಭಾಷೆಗಳಲ್ಲದೆ, ಮಾನ್ಯತೆ ಪಡೆಯದ ಇನ್ನೂ ೧೭೯ ಭಾಷೆಗಳು, ೫೪೪ ಉಪಭಾಷೆಗಳು ಮತ್ತು ೩೦೦೦ ಆಡುವ ಭಾಷೆಗಳೂ ಪ್ರಚಲಿತವಿರುವುದಾಗಿ ೧೯೭೧ರ ಜನಗಣತಿಯ ದಾಖಲೆಯಿಂದ ವ್ಯಕ್ತವಾಗುತ್ತದೆ.

ಈ ಅಂಕಿ ಅಂಶಗಳನ್ನು ಗಮನಿಸಿದರೆ ಲಿಪಿಗಳಿಲ್ಲದ ಭಾಷೆಗಳಿಗೆ ಲಿಪಿಯನ್ನು, ಈ ಎಲ್ಲ ಭಾಷೆಗಳಿಗೆ ಮಾತೃಭಾಷೆಯ ಸ್ಥಾನವನ್ನು ಕಲ್ಪಿಸಬೇಕಾಗುತ್ತದೆ. ಇದೊಂದು ಅಸಾಧ್ಯವಾದ ಕಾರ್ಯವಾಗಿರುವುದರಿಂದ ಭಾರತ ಸರಕಾರವು ಮಣಿಪುರಿ. ಕೊಂಕಣಿ, ನೇಪಾಲಿ ಭಾಷೆಗಳನ್ನು ಸಂವಿಧಾನದ ಎಂಟನೇ ಶೆಡ್ಯೂಲ್ಲಿನಲ್ಲಿ ಸೇರಿಸಿಕೊಳ್ಳಲು ಸಮ್ಮತಿ ನೀಡಿಲ್ಲ.

ಹಾಗಾದರೆ ಈ ಭಾಷೆಗಳ ಅಸ್ತಿತ್ವವೇನು? ಮಾತೃಭಾಷೆಗಳ ಸ್ವರೂಪದಲ್ಲಿ ಉಳಿದುಕೊಂಡು ಬಂದಿರುವ ಅಸಂಖ್ಯ ಭಾಷೆಗಳು ಆಡುವ ಹಾಗೂ ಧಾರ್ಮಿಕ ವಿಧಿವಿಧಾನಗಳ ಬಳಕೆಯ ವಸ್ತುಗಳಾಗಿ ಉಳಿದುಕೊಂಡಿವೆ. ಆದರೆ ಎಲ್ಲ ಭಾಷೆಗಳೂ ಶೈಕ್ಷಣಿಕ ಮಾಧ್ಯಮವಾಗಿ ಪರಿವರ್ತನೆಗೊಳ್ಳಲು ಸಾಧ್ಯವಾಗದು.

ಇನ್ನು ಭಾಷಾಅಲ್ಪಸಂಖ್ಯಾತರು ಯಾರು? ಅವರಿಗೆ ರಕ್ಷಣೆ ನೀಡುವ ಪ್ರಶ್ನೆ ಉದ್ಭೂತವಾಗಿರುವುದೇಕೆ? ಎಂಬುದನ್ನು ಗಮನಿಸುವುದು ಅಗತ್ಯ.

೧೯೫೬ರಲ್ಲಿ ಭಾಷಾವಾರು ಆಧಾರದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಿಸಲಾಗಿತ್ತು. ಆ ಸಂದರ್ಭದಲ್ಲಿ ಒಂದು ರಾಜ್ಯದಿಂದ ಹಲಕೆಲವು ಪ್ರದೇಶಗಳು

ಇನ್ನೊಂದು ರಾಜ್ಯಕ್ಕೆ ಭಾಷೆ, ಸಾರಿಗೆ–ಸಂಪರ್ಕ ಹಾಗೂ ಆಡಳಿತಾನುಕೂಲತೆಯ ದೃಷ್ಟಿಯಿಂದ ವರ್ಗಾಯಿಸಲ್ಪಟ್ಟವು. ಹೀಗೆ ಒಂದು ರಾಜ್ಯದ ಜನತೆ ಇನ್ನೊಂದು ರಾಜ್ಯಕ್ಕೆ ಸೇರ್ಪಡೆಯಾದ ಸಂದರ್ಭದಲ್ಲಿ ಅವರುಗಳು ನೆರೆಯ ರಾಜ್ಯದಲ್ಲಿ ನಾಗರಿಕತ್ವವನ್ನು ಹೊಂದಿ, ಅಲ್ಲಿಯ ಜನರೊಂದಿಗೆ ಸೌಹಾರ್ದಯುತವಾಗಿ ಬಾಳಬೇಕಾದರೆ ಕೆಲವು ಕಾಲಾವಕಾಶಗಳು ಬೇಕಾಗಿತ್ತು. ದೇಶ, ಭಾಷೆ, ಪರಿಸರಕ್ಕೆ ಹೊಂದಿಕೊಳ್ಳುವವರೆಗೆ, ಅಂಥವರು ಭಾಷಾಅಲ್ಪಸಂಖ್ಯಾತರಾಗಿ, ನೆರೆಯ ರಾಜ್ಯದಲ್ಲಿ ಅನಿವಾರ್ಯವಾಗಿ ಬಾಳಬೇಕಾಗಿತ್ತು, ಅಂಥವರು ಭಾಷಾಅಲ್ಪಸಂಖ್ಯಾತರಾಗಿ ಪರಿಗಣಿಸಲ್ಪಟ್ಟರೇ ವಿನಃ ತಲೆ ತಲಾಂತರದಿಂದ ಒಂದೇ ರಾಜ್ಯದಲ್ಲಿ ಹುಟ್ಟಿ ಬೆಳೆದವರಲ್ಲವೆಂಬುದನ್ನು ಸ್ಪಷ್ಟಪಡಿಸಲಿಚ್ಛಿಸುತ್ತೇನೆ.

ಇಂಥ ಸನ್ನಿವೇಶದಲ್ಲಿ ಭಾರತದಾದ್ಯಂತ ಎಲ್ಲ ರಾಜ್ಯಗಳಲ್ಲಿಯೂ ಭಾಷಾ ಅಲ್ಪಸಂಖ್ಯಾತರು ನಿರ್ಮಾಣಗೊಂಡರು. ಅಂಥವರು ಆಯಾ ರಾಜ್ಯಗಳ ಭಾಷೆಗಳನ್ನು ಕಲಿತುಕೊಂಡು, ಅಲ್ಲಿಯ ಜನತೆಯೊಂದಿಗೆ ಹಾಸುಹೊಕ್ಕಾಗಿ ಬಾಳಿಬದುಕಬೇಕಾದರೆ ಕೆಲವು ಕಾಲದವರೆಗೆ ಅವರವರ ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನೂ, ಹಾಗೂ ಸರಕಾರದ ಮಹತ್ವದ ತಿಳುವಳಿಕೆಗಳನ್ನು ನೀಡಬೇಕೆಂದು ತಾತ್ಪೂರ್ತಿಕವಾಗಿ ಕೆಲವು ನಿಬಂಧನೆಗಳನ್ನು ರಚಿಸಲಾಯಿತು.

ತತ್‌ಸಂಬಂಧವಾಗಿ ಸಂವಿಧಾನದ ೩೫೦ B (1) ಹಾಗೂ ೩೫೦ B (2) ರೀತ್ಯ ಭಾರತ ಭಾಷಾಅಲ್ಪಸಂಖ್ಯಾತ ಕಮೀಶನರ್‌ರವರ ನೇಮಕವಾಯಿತಲ್ಲದೆ, ೧೯೫೭ ಜುಲೈ ೩೦ ರಂದು ಕಾರ್ಯಾರಂಭವಾಯಿತು. ಅಂದಿನಿಂದ ಇಂದಿನವರೆಗೆ ಕಮೀಶನರವರು ಎಲ್ಲ ರಾಜ್ಯಗಳ ಸ್ಥಿತಿ–ಗತಿಗಳನ್ನು ಗಮನಿಸಿ, ಆಗಾಗ ಸೂಕ್ತಸಲಹೆ–ಸೂಚನೆಗಳನ್ನಿತ್ತು ಭಾಷಾಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಶ್ರಮಿಸುತ್ತ ಬಂದಿದ್ದಾರೆ. ಪರಿಸ್ಥಿತಿ ಹೀಗಿದ್ದರೂ ಎಲ್ಲ ರಾಜ್ಯಗಳಲ್ಲಿ ವಾಸಿಸುವ ಭಾಷಾಅಲ್ಪಸಂಖ್ಯಾತರು ರಾಜ್ಯಗಳು ಪುನರ್‌ನಿರ್ಮಾಣಗೊಂಡು ೨೫ವರ್ಷಗಳು ಕಳೆದರೂ ಈವರೆಗೆ ತಾವು ವಾಸಿಸಿರುವ ಮತ್ತು ತಮಗೆ ಆಶ್ರಯ ನೀಡಿರುವ ರಾಜ್ಯಗಳ ರಾಜ್ಯಭಾಷೆಯನ್ನು ಕಲಿತುಕೊಂಡು ತಾವಿರುವ ರಾಜ್ಯಕ್ಕೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸದೆ, ಪ್ರತ್ಯೇಕತಾ ಮನೋಭಾವನೆಯಿಂದ ಜೀವಿಸುತ್ತಿರುವುದು ಸೂಕ್ತವೇ? ಪುನರ್‌ನಿರ್ಮಾಣಗೊಂಡು ೨೫–೩೦ವರ್ಷಗಳಾದರೂ ಪ್ರಾದೇಶಿಕ ಭಾಷೆಯನ್ನೇ ಕಲಿಯದೆ, ತಮ್ಮದೇ ಆದ ವಸಾಹತುಗಳನ್ನು ಬೇರೆ ಬೇರೆ ರಾಜ್ಯಗಳಲ್ಲಿ ನಿರ್ಮಿಸಿಕೊಳ್ಳುವುದಾದರೆ ಆಯಾ ರಾಜ್ಯಗಳ ಜನತೆ ಸಹಿಸಿಕೊಳ್ಳಬಹುದೇ?

ಈಗ ನೀಡುತ್ತಿರುವ ಸೌಲಭ್ಯಗಳನ್ನು ಇನ್ನು ಮುಂದೆ ಸಾವಿರಾರು ವರ್ಷಗಳವರೆಗೆ ಮುಂದುವರಿಸಿದರೂ ಅವರು ಪ್ರಾದೇಶಿಕ ಭಾಷೆ ಹಾಗೂ ಪರಿಸರಕ್ಕೆ ಹೊಂದಿಕೊಳ್ಳುವ ಲಕ್ಷಣಗಳು ಕಂಡು ಬರುತ್ತಿಲ್ಲ. ದಿನದಿನಕ್ಕೆ ಅವರವರ ಭಾಷೆ, ದೇಶಾಭಿ

ಮಾನಗಳು ಹೆಚ್ಚುತ್ತ, ತಾವು ಎಂದಿದ್ದರೂ ಹೊರಗಿನವರು ಎಂಬಂತೆ ವರ್ತಿಸು ವುದಾದರೆ, ಅಂಥವರಿಗೆ ಪ್ರಾದೇಶಿಕ ಮಾನ್ಯತೆಯನ್ನು ನೀಡುವುದಾದರೂ ಹೇಗೆ? ನಮ್ಮೊಂದಿಗೆ ಅವರು ಬೆರೆಯದೇ ಹೋದರೆ, ಅವರನ್ನು ನಮ್ಮವರೆಂದು ಆದರಿಸುವ ಬಗೆ ಯಾವುದು? ಇತ್ಯಾದಿ ಪ್ರಶ್ನೆಗಳು ಉದ್ಭತವಾಗುತ್ತವೆ.

ಈಗಾಗಲೇ ೨೫-೩೦ ವರ್ಷಗಳು ಗತಿಸಿವೆ. ಭಾರತ ಸರಕಾರದವರು ಈಗ ನೀಡುತ್ತಿರುವ ಸೌಲಭ್ಯಗಳನ್ನು ಇನ್ನು ಮುಂದೆಯೂ ಯಥಾವತ್ತಾಗಿ ಮುಂದು ವರೆಸುವುದಾದರೆ, ರಾಜ್ಯರಾಜ್ಯಗಳಲ್ಲಿ ಅನೈಕ್ಯತಾ ಭಾವವನ್ನು ಬೆಳೆಸಿದಂತಾಗುತ್ತದೆ. ಒಂದು ರಾಜ್ಯದಲ್ಲಿ ಅನೇಕ ವಸಾಹತುಗಳನ್ನು ನಿರ್ಮಿಸಿದಂತಾಗುತ್ತದೆ. ಭಾಷಾ ಅಲ್ಪಸಂಖ್ಯಾತರು ಯಾವ ದೇಶದಲ್ಲಿಯೇ ಇರಲಿ, ಅಂಥವರು ಆಯಾ ರಾಜ್ಯಗಳ ಭಾಷೆ ಹಾಗೂ ಪರಿಸರಕ್ಕೆ ಹೊಂದಿಕೊಂಡು ತಾವು ವಾಸಿಸಿರುವ ರಾಜ್ಯಗಳೇ ತಮ್ಮ 'ಮಾತೃ ಭೂಮಿ' ಎಂದು ಗೌರವಿಸಲೂ ಕಾಲ ಮಿತಿಯನ್ನು ಹೇರಬೇಕು. ಹಾಗಾ ಗದೇ ಹೋದರೆ ರಾಷ್ಟ್ರದ ಭಾವೈಕ್ಯತೆಗೆ ಧಕ್ಕೆಯುಂಟಾಗಬಹುದು.

ಕರ್ನಾಟಕ ರಾಜ್ಯದ ಆಡುವ ಮತ್ತು ಆಡಳಿತ ಭಾಷೆ ಕನ್ನಡ

ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡವಾಗಿರುವುದರಿಂದ ಕರ್ನಾಟಕದ ನೆಲದಲ್ಲಿ ಜೀವಿಸಬೇಕೆನ್ನುವವರು ಹಾಗೂ ಕರ್ನಾಟಕವನ್ನೇ ಆಶ್ರಯಿಸಿಕೊಂಡು ಬದುಕಬೇಕೆನ್ನುವವರು ಯಾರೇ ಇರಲಿ, ಯಾವ ರಾಜ್ಯದವರೇ ಇರಲಿ, ರಾಜ್ಯದ ಆಡಳಿತ ಭಾಷೆಯಾಗಿರುವ ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇಬೇಕು. ಇಲ್ಲಿ ಭಾಷಾ ಅಲ್ಪಸಂಖ್ಯಾತರು ತಮ್ಮ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಲು ಯಾವುದೇ ರೀತಿಯ ನಿರ್ಬಂಧವಿಲ್ಲವಾದರೂ ತಮ್ಮ ಮಾತೃಭಾಷೆಯನ್ನು ಹೊರತು ಪಡಿಸಿ ರಾಜ್ಯದ ಆಡಳಿತ ಭಾಷೆಯಾದ ಕನ್ನಡವನ್ನು ಕಡೆಗಣಿಸಿದರೆ ಇಲ್ಲವೆ ಕಲಿಯಲು ತಿರಸ್ಕರಿಸಿದರೆ, ರಾಜ್ಯದ ಭಾಷೆ ಬೇಡವಾದರೆ ಈ ರಾಜ್ಯದ ಆಶ್ರಯವಾದರೂ ಏಕೆ ಬೇಕು ? ಈ ರಾಜ್ಯದಲ್ಲಿ ವಾಸಿಸಬೇಕೆನ್ನುವವರು ಈ ರಾಜ್ಯದ ಪ್ರಾದೇಶಿಕ ಹಾಗೂ ಆಡಳಿತ ಭಾಷೆಯಾಗಿರುವ ಕನ್ನಡವನ್ನು ಕಡ್ಡಾಯವಾಗಿ ಕಲಿತುಕೊಳ್ಳಬೇಕು. ಇಲ್ಲಿಯ ಭಾಷೆಯೇ ಬಾರದಿದ್ದರೆ ಜನರೊಂದಿಗೆ ಹಾಸುಹೊಕ್ಕಾಗಿ ಬೆರೆತು ತಮ್ಮ ಬಾಳನ್ನು ಹಸನು ಗೊಳಿಸಬೇಕಾದ ಬಗೆಯಾದರೂ ಮತ್ತು ಈ ರಾಜ್ಯದ ಜನರೊಂದಿಗೆ ವ್ಯವಹರಿಸುವ ವಿಧಾನವಾದರೂ ಯಾವುದು ? ಎನ್ನುವ ವಿಷಯವಾಗಿ ಕರ್ನಾಟಕ ದಲ್ಲಿರುವ ಭಾಷಾ ಅಲ್ಪ ಸಂಖ್ಯಾತರು ತಮ್ಮ ಜೀವನದ ಕ್ಷೇಮಾಭಿವೃದ್ಧಿಯ ದೃಷ್ಟಿ ಯಿಂದ ಕನ್ನಡವನ್ನು ಕಡ್ಡಾಯವಾಗಿ ಕಲಿಯುವಲ್ಲಿ ಆಸಕ್ತಿ ವಹಿಸಬೇಕು. ಭಾಷಾ ಅಲ್ಪ ಸಂಖ್ಯಾತರ ಹಿತರಕ್ಷಣೆಯನ್ನು ಕಡೆಗಣಿಸದಂತೆ ಕರ್ನಾಟಕ ರಾಜ್ಯವು ಎಂದಿ ನಿಂದಲೂ ಅವರಿಗೆ ಸೌಹಾರ್ದಯುತ ಆಶ್ರಯವನ್ನು ನೀಡುತ್ತ ಬಂದಿದೆ. ಭಾರತ

ದೇಶದಲ್ಲಿಯ ಇತರ ರಾಜ್ಯಗಳಲ್ಲಿ ಇರುವ ಭಾಷಾ ಅಲ್ಪ ಸಂಖ್ಯಾತರ ಸ್ಥಿತಿಗಳನ್ನು ಅವಲೋಕಿಸಿದರೆ ಕರ್ನಾಟಕ ರಾಜ್ಯವು ಭಾಷಾ ಅಲ್ಪ ಸಂಖ್ಯಾತರಿಗೆ ನೀಡಿರುವ ಸಹಕಾರ, ಸೌಲಭ್ಯ ಹಾಗೂ ಸೌಹಾರ್ದಯುತ ನಡುವಳಿಕೆಗಳನ್ನು ಕಂಡು ಎಂಥವರೂ ಮೆಚ್ಚುವಂತಹುದಾಗಿವೆ. ಔದಾರ್ಯಕ್ಕೆ ಇನ್ನೊಂದು ಹೆಸರಾಗಿರುವ ಕರ್ನಾಟಕವು ನೆರೆಯ ರಾಜ್ಯಗಳಲ್ಲಿ ಕನ್ನಡಿಗರು ಭಾಷಾ ಅಲ್ಪ ಸಂಖ್ಯಾತರಾಗಿ ಅಪಾರ ನೋವನ್ನು ಅನುಭವಿಸುತ್ತಿದ್ದರೂ ಯಾವುದೇ ರೀತಿಯ ಸೇಡಿನ ಮನೋಭಾವವನ್ನು ತಾಳದೆ ಇಲ್ಲಿರುವ ಭಾಷಾ ಅಲ್ಪ ಸಂಖ್ಯಾತರಿಗೆ ಸರ್ವ ರೀತಿಯ ರಕ್ಷಣೆಯನ್ನು, ಶೈಕ್ಷಣಿಕ ಸೌಲಭ್ಯವನ್ನು. ಸಾರ್ವಜನಿಕ ಸೇವಾ ಅವಕಾಶವನ್ನು, ಸಹಬಾಳ್ವೆಯ ಸಮೃದ್ಧ ಸದವಕಾಶಗಳನ್ನು ನೀಡುತ್ತಿದೆ. ಆ ಕಾರಣಕ್ಕಾಗಿಯೇ ಕರ್ನಾಟಕವು ತನ್ನ ಮಣ್ಣಿನ ಮಕ್ಕಳಂತೆಯೇ ನೆರೆಯ ರಾಜ್ಯಗಳಿಂದ ಒಲಸೆ ಬಂದು ನೆಲಸಿರುವ ತಮಿಳರು. ಆಂಧ್ರದವರು, ಕೇರಳದವರು ಹಾಗೂ ಮರಾಠಿಗರು ಮತ್ತು ಇತರ ಭಾಷಾ ಅಲ್ಪ ಸಂಖ್ಯಾತರನ್ನು ಬಹುವಾಗಿ ಆಕರ್ಷಿಸಿದೆ. ಇಂಥ ಸನ್ನಿವೇಶದಲ್ಲಿ ಅವರು ತಮ್ಮ ಭಾಷಾ ದುರಭಿಮಾನದಿಂದ ಇಲ್ಲಿ ದೊರೆಯುತ್ತಿರುವ ಸುಖೀ ಜೀವನದಿಂದ ದೂರವಾಗುವುದು ಉಚಿತವಲ್ಲ. ಭಾಷಾ ಅಲ್ಪ ಸಂಖ್ಯಾತರು ಯಾವುದೇ ಕಾರಣದಿಂದ ತಮ್ಮ ರಾಜ್ಯವನ್ನು ಬಿಟ್ಟು ಇನ್ನೊಂದು ರಾಜ್ಯದಲ್ಲಿ ವಾಸಿಸುವಾಗ ತಮಗೆ ಆಶ್ರಯ ನೀಡಿದ ರಾಜ್ಯಕ್ಕೆ ಅಪಚಾರವನ್ನು, ಭಾಷೆಗೆ ದ್ರೋಹವನ್ನು ಬಗೆಯಬಾರದು. ಆಯಾ ರಾಜ್ಯದ ಆಡಳಿತ ಹಾಗೂ ರಾಜ್ಯ ಭಾಷೆಯನ್ನು ಮಾತೃಭಾಷೆಯೆಂದೇ ಪರಿಗಣಿಸಬೇಕು. ಈ ಮಾತು ಕರ್ನಾಟಕದಲ್ಲಿ ವಾಸಿಸಿರುವ ತೆಲುಗು, ತಮಿಳು, ಮಲೆಯಾಳಿ, ಉರ್ದು, ಗುಜರಾತಿ, ಮರಾಠಿ ಇತ್ಯಾದಿ ಭಾಷಾಅಲ್ಪಸಂಖ್ಯಾತರಿಗೆ ಮಾತ್ರ ಅನ್ವಯಿಸುವುದಿಲ್ಲ ಕರ್ನಾಟಕವನ್ನು ಬಿಟ್ಟು ತಮಿಳುನಾಡಿನಲ್ಲಿರುವ ಕನ್ನಡಿಗರು ಅಲ್ಲಿಯ ರಾಜ್ಯಭಾಷೆಯಾದ ತಮಿಳನ್ನು, ಕೇರಳದಲ್ಲಿರುವ ಕನ್ನಡಿಗರು ಮಲೆಯಾಳಿಯನ್ನು, ಆಂಧ್ರದಲ್ಲಿರುವ ಕನ್ನಡಿಗರು ಆಂಧ್ರ ಭಾಷೆಯನ್ನು, ಮಹರಾಷ್ಟ್ರದಲ್ಲಿರುವ ಕನ್ನಡಿಗರು ಮರಾಠಿಯನ್ನು ಚೆನ್ನಾಗಿ ಕಲಿತುಕೊಳ್ಳಬೇಕಲ್ಲದೆ ಆಯಾ ರಾಜ್ಯ ಭಾಷೆಗಳಿಗೆ ತಮ್ಮ ಮಾತೃಭಾಷೆಯಷ್ಟೇ ಗೌರವವನ್ನು ಸಲ್ಲಿಸಬೇಕು. ಇಂಥ ವಿಶಾಲ ದೃಷ್ಟಿಯನ್ನೊಳಗೊಂಡ ಗೋಕಾಕ ವರದಿಯ ಅನುಷ್ಠಾನಕ್ಕೆ ಭಾಷಾಅಲ್ಪಸಂಖ್ಯಾತಲ್ಲಿ ಕೆಲವರು ತಮ್ಮ ವಿರೋಧವನ್ನು ವ್ಯಕ್ತಪಡಿಸಿರುವುದು ಆಶ್ಚರ್ಯಕರವಾಗಿದೆ. ಗೋಕಾಕ ವರದಿಯ ಹಾಗೂ ಆ ವರದಿಯ ಕೆಲವು ಮಾರ್ಪಾಡಿನೊಂದಿಗೆ ಕರ್ನಾಟಕ ಸರ್ಕಾರವು ಈಚೆಗೆ ನಿರ್ಣಯಿಸಿದ ಮಾಧ್ಯಮಿಕ ವಿದ್ಯಾಭ್ಯಾಸ ಕ್ರಮದ ಹೊಸ ಭಾಷಾ ಸೂತ್ರವನ್ನು ಭಾಷಾ ಅಲ್ಪಸಂಖ್ಯಾತರಲ್ಲಿ ಕೆಲವರು ಅಂದರೆ ಪ್ರಾಮುಖ್ಯವಾಗಿ ತಮಿಳರು ಅತ್ಯುಗ್ರವಾಗಿ ಪ್ರತಿಭಟಿಸಿದುದಲ್ಲದೇ ಹಿಂಸಾತ್ಮಕ ಕೃತ್ಯಕ್ಕಿಳಿದುದು ನಿಜಕ್ಕೂ ಖಂಡನಾರ್ಹ. ತಮಿಳುನಾಡಿನಲ್ಲಿ 'ಆಕಾಶವಾಣಿ' ಎಂಬ ಪದಕ್ಕೆ ಇಡೀ ತಮಿಳು ನಾಡೇ ವಿರೋಧಿಸಿರುವಾಗ ಕರ್ನಾಟಕ ರಾಜ್ಯವನ್ನು ಆಶ್ರಯಿಸಿರುವ ತಮಿಳರು ಕನ್ನಡವನ್ನೇಕೆ ವಿರೋಧಿಸಬೇಕು?

ಉಣ್ಣುವ ಅನ್ನ, ಉಡುವ ಬಟ್ಟೆ, ಆಶ್ರಯ ನೀಡಿದ ನೆಲ ಕರ್ನಾಟಕವಾದ ಮೇಲೆ ಕನ್ನಡ ಭಾಷೆಯನ್ನು ಕಲಿಯಬಾರದೇಕೆ? ಕನ್ನಡ ಬೇಡವಾದರೆ ಕರ್ನಾಟಕ ವಾದರೂ ಏಕೆ ಬೇಕು?

ಕರ್ನಾಟಕದ ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡವನ್ನು ಏಕೈಕ ಕಡ್ಡಾಯ ಪ್ರಥಮ ಭಾಷೆಯನ್ನಾಗಿ ಮಾಡಿರುವ ನಿರ್ಧಾರದ ಬಗ್ಗೆ ಕೇಂದ್ರ ಶಿಕ್ಷಣ ಶಾಖೆಗೆ ಸಂಬಂಧಿಸಿದ ಸಂಸತ್ ಸದಸ್ಯರ ಸಮಾಲೋಚನಾ ಸಮಿತಿಯ ಕೆಲವು ಸದಸ್ಯರು ಅಲ್ಪಸಂಖ್ಯಾತರ ಮೇಲೆ ಕರ್ನಾಟಕ ಸರ್ಕಾರವು ಕನ್ನಡ ಭಾಷೆಯನ್ನು ಒತ್ತಾಯವಾಗಿ ಹೊರಿಸಿದೆ ಯಲ್ಲದೆ, ಈ ನಿರ್ಧಾರವು ಪ್ರಜಾಸತ್ತಾತ್ಮಕವಲ್ಲ ಹಾಗೂ ಅಲ್ಪಸಂಖ್ಯಾತರಿಗೆ ಹಾನಿ ಯನ್ನುಂಟು ಮಾಡುವಂತಹುದೆಂದು ಟೀಕಿಸಿದೆ. ಇದಲ್ಲದ ೧೫–೭–೮೨ ರಂದು ರಾಜ್ಯ ಸಭೆಯಲ್ಲಿಯೂ ೧೬–೭–೮೨ ರಂದು ಲೋಕಸಭೆಯಲ್ಲಿಯೂ ಈ ಬಗ್ಗೆ ಚರ್ಚೆಯು ನಡೆಯಿತು. ಈ ಚರ್ಚೆಯಲ್ಲಿ ಕರ್ನಾಟಕ ಸರ್ಕಾರದ ಈ ಹೊಸ ಭಾಷಾ ಸೂತ್ರ ಪ್ರಜಾಸತ್ತಾತ್ಮಕ ಮಾರ್ಗವಲ್ಲವೆಂದು ಆಪಾದಿಸಿದ ಕೆಲವರು ತಮ್ಮ ತಮ್ಮ ರಾಜ್ಯ ಗಳಲ್ಲಿಯ ಭಾಷಾಅಲ್ಪಸಂಖ್ಯಾತರ ಸ್ಥಿತಿಗತಿಗಳನ್ನು ಅವಲೋಕಿಸದೆ, ತಮ್ಮ ಅಭಿ ಪ್ರಾಯಗಳನ್ನು ವ್ಯಕ್ತಪಡಿಸಿದರು. ಆಗ ಕೇಂದ್ರ ಒಳಾಡಳಿತ ಸಚಿವರು ಕರ್ನಾಟಕ ರಾಜ್ಯದ ಹೊಸ ಭಾಷಾಸೂತ್ರವನ್ನು ಸ್ವಾಗತಿಸಿದರಲ್ಲದೆ ಸರಕಾರದ ಈ ಕ್ರಮವನ್ನು ಬೆಂಬಲಿಸಿದರು.

ಇದಕ್ಕೆ ನಿಮ್ಮ ಉತ್ತರವೇನು ?

೧೯೬೧ ರ ಮುಖ್ಯಮಂತ್ರಿಗಳ ಸಭೆಯ ತೀರ್ಮಾನವನ್ನು ಹಾಗೂ ಸಂವಿಧಾನಾ ತ್ಮಕವಾಗಿ, ಭಾಷಾಅಲ್ಪಸಂಖ್ಯಾತರಿಗೆ ನೀಡಬೇಕಾದ ಸೌಲಭ್ಯವನ್ನು ನೀಡದೆ ಮತ್ತು ಭಾರತ ಭಾಷಾಅಲ್ಪಸಂಖ್ಯಾತ ಕಮಿಷನರವರ ಸಲಹೆ ಸೂಚನೆಗಳನ್ನು ಧಿಕ್ಕರಿಸಿ, ಭಾಷಾಅಲ್ಪಸಂಖ್ಯಾತರನ್ನು ಸರ್ವ ರೀತಿಯಿಂದಲೂ ತುಳಿಯಲ್ಪಟ್ಟಿರುವ ರಾಷ್ಟ್ರದ ಅನೇಕ ರಾಜ್ಯಗಳ ಬಗ್ಗೆ ಸಮಗ್ರವಾಗಿ ಆಲೋಚಿಸದೆ, ಕರ್ನಾಟಕ ರಾಜ್ಯ ಸರಕಾರ ತಳೆದ ಭಾಷಾ ದೋರಣೆಯ ಬಗ್ಗೆ ಹಲ ಕೆಲವು ಜವಾಬ್ದಾರಿಯುತ ಮುಖಂಡರು ಕೆಂಡ ಕಾರಿರುವುದು ಅಸಭ್ಯವೂ ಅನುಚಿತವೂ ಆಗಿದೆ ಎಂದು ನಿಖರವಾಗಿ ಹೇಳ ಬಹುದು.

ಭಾಗಶಃ ನೂರಕ್ಕೆ ಹದಿನೈದಕ್ಕಿಂತಲೂ ಹೆಚ್ಚು ಜನವಸತಿಯುಳ್ಳ ಆಯಾ ಭಾಷಾ ಅಲ್ಪಸಂಖ್ಯಾತರಿಗೆ ಅವರವರ ಮಾತೃಭಾಷೆಯಲ್ಲಿಯೇ ಸರ್ಕಾರದ ಮಹತ್ವದ ಪ್ರಕಟಣೆಗಳನ್ನು ಪ್ರಕಟಗೊಳಿಸಬೇಕೆಂಬುದು ತೀರ್ಮಾನವಾಗಿದ್ದರೂ, ಸಂವಿಧಾನದಲ್ಲಿ ಅವಕಾಶವನ್ನು ಕಲ್ಪಿಸಿರುವ ಸೌಲಭ್ಯಗಳನ್ನು ನೀಡದೆ ಇರುವ, ಮಧ್ಯ ಪ್ರದೇಶ, ಹರಿಯಾಣ, ಪಂಜಾಬ, ಜಮ್ಮು–ಕಾಶ್ಮೀರ, ಮಣಿಪುರ, ತ್ರಿಪುರಾ ಈ

ರಾಜ್ಯಗಳು ಸಂವಿಧಾನಕ್ಕೆ ವಿರೋಧವಾಗಿ ಭಾಷಾಅಲ್ಪಸಂಖ್ಯಾತರಿಗೆ ಅವರವರ ಮಾತೃಭಾಷೆಯಲ್ಲಿ ಶಿಕ್ಷಣ ಸೌಕರ್ಯವನ್ನು ಒದಗಿಸಿಲ್ಲ. ಬಿಹಾರ್, ಒರಿಸ್ಸಾ, ಪಶ್ಚಿಮ ಬಂಗಾಳಗಳಲ್ಲಿ ವಾಸಿಸುವ ಅತ್ಯಂತ ಹಿಂದುಳಿದ ಗುಡ್ಡಗಾಡು ಜನರಿಗೆ ಯಾವುದೇ ಶೈಕ್ಷಣಿಕ ರಿಯಾಯತಿ ಅವಕಾಶಗಳನ್ನೂ ನೀಡಿರುವುದಿಲ್ಲ. ಅನೇಕ ಹಿಂದಿ ಮಾತೃ ಭಾಷೆಯುಳ್ಳ ರಾಜ್ಯಗಳಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಅವರವರ ಭಾಷೆಯಲ್ಲಿಯೇ ಅಭ್ಯಾಸಮಾಡುವ ಮಕ್ಕಳಿಗೆ ಶಾಲೆಯಲ್ಲಿ ಪ್ರವೇಶವನ್ನಾಗಲಿ, ಕಲಿಸುವ ಶಿಕ್ಷಕರಿಗೆ ತರಬೇತಿಯನ್ನಾಗಲಿ ನೀಡಿರುವುದಿಲ್ಲ. ಆಂಧ್ರ ಪ್ರದೇಶ, ಬಿಹಾರ್, ಮಹಾರಾಷ್ಟ್ರ ಪಶ್ಚಿಮ ಬಂಗಾಳಗಳಲ್ಲಿಯ ಗುಡ್ಡಗಾಡು ಜನರ ಶೈಕ್ಷಣಿಕ ಕ್ರಮಕ್ಕೆ ಪಠ್ಯ ಪುಸ್ತಕಗಳೇ ಇಲ್ಲ.

ಆಸಾಮ, ಹಿಮಾಚಲಪ್ರದೇಶ, ಜಮ್ಮು-ಕಾಶ್ಮಿರ, ಮಣಿಪುರ, ಮೇಘಾಲಯ, ಮಧ್ಯಪ್ರದೇಶ, ನಾಗಾಲ್ಯಾಂಡ್, ಪಂಜಾಬ್, ರಾಜಸ್ಥಾನ, ತ್ರಿಪುರ ಹಾಗೂ ಅರುಣಾಚಲ ಪ್ರದೇಶ, ಅಂದಮಾನ-ನಿಕೋಬಾರ್, ಲಕ್ಷದ್ವೀಪ, ಮಿಝೋರಾಮ್ ರಾಜ್ಯಗಳು ಭಾಷಾಅಲ್ಪಸಂಖ್ಯಾತರು ಭಾಗಶಃ ನೂರಕ್ಕೆ ೧೫ ರಷ್ಟು ಇರುವ ಪ್ರದೇಶ ಗಳಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನಾಗಲಿ ಮತ್ತು ಅವರವರ ಭಾಷೆಯಲ್ಲಿ ಸರ್ಕಾರದ ಮಹ ತ್ವದ ತಿಳುವಳಿಕೆಗಳನ್ನಾಗಲಿ, ಈ ವರೆಗೆ ಒದಗಿಸಿಲ್ಲದಿರುವ ಬಗ್ಗೆ ಹಾಗೂ ಸಂವಿಧಾನಕ್ಕೆ ವಿರೋಧವಾಗಿ ವರ್ತಿಸಿರುವ ಬಗ್ಗೆ ಮೇಲ್ಕಾಣಿಸಿದ ಸಂಸತ್ ಸದಸ್ಯರ ಸಲಹಾ ಸಮಿತಿ ಹಾಗೂ ರಾಜ್ಯಸಭೆ ಮತ್ತು ಲೋಕಸಭೆಯ ಸದಸ್ಯರುಗಳು ಏನು ಹೇಳುತ್ತಾರೆ? ಸಂವಿಧಾನದ ೨೯, ೩೦, ೧೯೯, ೩೫೦ ಮತ್ತು ೩೫೦ ಎ ವಿಧಿಪ್ರಕಾರ ನಡೆದುಕೊಳ್ಳ ದಿರುವ ರಾಜ್ಯಗಳ ಬಗ್ಗೆ ಸಂಸತ್ ಸದಸ್ಯರ ಸಲಹಾ ಸಮಿತಿ ಯಾವ ಕ್ರಮವನ್ನು ಕೈಕೊಂಡಿದೆ?

ಸಂವಿಧಾನದನ್ವಯ ಸರ್ವರೀತಿಯಿಂದಲೂ ಭಾಷಾಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುತ್ತಿರುವ ಭಾರತದ ರಾಜ್ಯಗಳಲ್ಲಿ ಕರ್ನಾಟಕವು ಮೊದಲ ಸ್ಥಾನವನ್ನು ಪಡೆಯುತ್ತದೆ.

ಕೊನೆಯದಾಗಿ, ಭಾಷಾಅಲ್ಪಸಂಖ್ಯಾತರ ಹಿತರಕ್ಷಣೆಯ ದೃಷ್ಟಿಯಿಂದ ಈ ಗ್ರಂಥವನ್ನು ರಚಿಸಲಾಗಿದೆಯಲ್ಲದೆ, ಭಾರತ ಭಾಷಾಅಲ್ಪಸಂಖ್ಯಾತರ ಕಮೀಶನರ ವರ ವರದಿಗಳನ್ನು ಆಧರಿಸಿ, ಅಂಕಿ - ಅಂಶಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ, ಪ್ರಥಮತಃ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಭಾರತದ ಪ್ರಖ್ಯಾತ ಪತ್ರಿಕೋದ್ಯಮಿಗಳಾದ ಶ್ರೀ ಪಾಟೀಲ ಪುಟ್ಟಪ್ಪನವರು ಮುನ್ನುಡಿಯನ್ನು ದಯಪಾಲಿಸಿ, ಹರಸಿದ್ದಾರೆ. ಪುಸ್ತಕವನ್ನು ಸಿದ್ಧಗೊಳಿಸುವಾಗ ಚಿ। ಸದಾನಂದ ಹೋಳಿಕಟ್ಟಿ ಹಾಗೂ ಚಿ। ಗೀತಾ ಬಣಕಾರ ಅವರುಗಳು ತುಂಬಾ ನೆರವಾಗಿದ್ದಾರೆ, ಅಲ್ಪಕಾಲದಲ್ಲಿ ಅಂದವಾಗಿ ಮುದ್ರಣ ಕಾರ್ಯವನ್ನು ಅನುಭವ

ಪ್ರಿಂಟರ್ಸ್ ಕೆಲಸಗಾರರು ನೆರವೇರಿಸಿಕೊಟ್ಟಿದ್ದಾರೆ. ಮುಖಚಿತ್ರದ ಕಲಾವಿದ ಶ್ರೀ ಕಮಲೇಶ ಅವರೆಲ್ಲರನ್ನು ಇಲ್ಲಿ ನೆನೆಯದಿರಲಾರೆ.

ಸರಕಾರ ಹಾಗೂ ಸರಕಾರದಿಂದ ಹಣ ಪಡೆಯುತ್ತಿರುವ ಯಾವುದೇ ಸಂಘ ಸಂಸ್ಥೆಗಳಿಂದ ಸಹಾಯವನ್ನು ಪಡೆಯದೆ. ಸ್ವಪ್ರೇರಣೆ ಮತ್ತು ಶ್ರಮದಿಂದ ಸಿದ್ಧಗೊಳಿಸಿರುವ ಈ ಪುಸ್ತಕವನ್ನು ಓದಿ, ಭಾಷಾಅಲ್ಪಸಂಖ್ಯಾತರು ಬಹು ಸಂಖ್ಯಾತರೊಂದಿಗೆ ಸೌಹಾರ್ದಯುತವಾಗಿ ಬೆರೆತು – ಬಾಳುವ ಮನಸ್ಸು ಮಾಡಿದರೆ, ಅದೇ ನನ್ನ ಶ್ರಮಕ್ಕೆ ತಕ್ಕ ಪ್ರತಿಫಲವೆಂದು ಭಾವಿಸುತ್ತೇನೆ.

೩, ಅಕ್ಟೋಬರ್ ೧೯೮೨ —ಮಹದೇವ ಬಣಕಾರ

೧೨೧೩, ೫ ನೇ ಬ್ಲಾಕ್ ರಾಜಾಜಿನಗರ
ಬೆಂಗಳೂರು-೧೦
ದೂರವಾಣಿ : ೮೧೨೫೦

ಭಾಷಾವಾರು ಪ್ರಾಂತರಚನೆಗಳ ಹಿನ್ನೆಲೆ ......

ವಿದ್ಯಾಭ್ಯಾಸದ ಪ್ರಗತಿಯನ್ನು ಸಾಧಿಸಬೇಕಾದರೆ ಆಯಾ ಪ್ರಾದೇಶಿಕ ಭಾಷೆಗಳಿಗೆ ತಕ್ಕ ಸ್ಥಾನಮಾನಗಳನ್ನು ಕೊಡಬೇಕಾಗುವದು. ಆಯಾ ಪ್ರಾದೇಶಿಕ ಭಾಷೆಗಳಿಗೆ ತಕ್ಕ ಸ್ಥಾನಮಾನವನ್ನು ಕೊಟ್ಟರೆ ವಿದ್ಯಾಭ್ಯಾಸದ ಪ್ರಗತಿಯನ್ನು ಶೀಘ್ರವಾಗಿ ಸಾಧಿಸಬಹುದು. ಜನಸಾಮಾನ್ಯರಿಗೂ ಮತ್ತು ವಿದ್ಯಾವಂತರಿಗೂ ಮಧುರ ಸಂಪರ್ಕವುಂಟಾಗಬೇಕಾದರೆ ಜನರ ವಿದ್ಯಾಭ್ಯಾಸವು ಅವರ ದೇಶ ಭಾಷೆಯ ಮೂಲಕವೇ ಆಗಬೇಕಾಗುತ್ತದೆ.

—ರಾಜ್ಯಪುನರ್ವಿಂಗಡಣೆಯ ವರದಿ. ಪುಟ ೪೫. (೧೨೨)

"ಒಂದು ಪ್ರಾಂತದಲ್ಲಿ ವಿದ್ಯಾಭಿವೃದ್ಧಿಯು ಹೆಚ್ಚಬೇಕಾದರೆ ಮತ್ತು ಆ ಪ್ರಾಂತದಲ್ಲಿ ದೈನಂದಿನದ ಕೆಲಸವು ಆ ಪ್ರಾಂತ ಭಾಷೆಯಲ್ಲಿಯೇ ನಡೆಯಬೇಕಾದರೆ, ಆ ಪ್ರಾಂತವು ಒಂದು ಭಾಷಾವಾರು ಪ್ರದೇಶವಾಗಿರಲೇಬೇಕು. ಒಂದು ಪ್ರಾಂತವು ಅನೇಕ ಭಾಷೆಗಳನ್ನೊಳಗೊಂಡಿರುವ ಪ್ರದೇಶವಾಗಿರುವಪಕ್ಷದಲ್ಲಿ ಏಕಪ್ರಕಾರವಾಗಿ ಅದರಿಂದ ತೊಂದರೆಗಳುಂಟಾಗುತ್ತವೆ; ಮತ್ತು ಶಿಕ್ಷಣದ ಮಾಧ್ಯಮವೂ ಹಾಗೂ ಕೆಲಸವೂ ಎರಡು ಅಥವಾ ಅದಕ್ಕಿಂತಲೂ ಹೆಚ್ಚು ಭಾಷೆಗಳಲ್ಲಿ ನಡೆಯಬೇಕಾಗುವುದು. ಆದುದರಿಂದ, ಭಾಷಾವಾರು ಆಧಾರದ ಮೇಲೆ ಪ್ರಾಂತಗಳನ್ನು ಪುನರ್ವಿಂಗಡಣೆ ಮಾಡುವುದು ಬಹಳ ಅಪೇಕ್ಷಣೀಯವಾದುದಾಗಿರುತ್ತದೆ. ಭಾಷೆಯು, ವಿಶೇಷ ರೀತಿಯ ಒಂದು ಸಂಸ್ಕೃತಿಯ, ಸಂಪ್ರದಾಯದ ಮತ್ತು ಸಾಹಿತ್ಯದ ವೈವಿಧ್ಯತೆಯ ದ್ಯೋತಕವಾಗಿರುತ್ತದೆಂಬುದು ಒಂದು ಸಾಮಾನ್ಯ ನಿಯಮ. ಒಂದು ಭಾಷಾವಾರು ಪ್ರದೇಶದಲ್ಲಿ ಆ ಪ್ರಾಂತದ ಸರ್ವಸಾಮಾನ್ಯವಾದ ಅಭಿವೃದ್ಧಿಗೆ ಈ ಎಲ್ಲ ಅಂಶಗಳೂ ಸಹಾಯಕವಾಗಿವೆ."

—ರಾಜ್ಯ ಪುನರ್ವಿಂಗಡಣೆಯ ವರದಿ. ಪುಟ-೨೧. (೫೪)

ಕೇಂದ್ರ ವಲಯ
(Central Zone)

೧. ಮಧ್ಯಪ್ರದೇಶ
೨. ಉತ್ತರ ಪ್ರದೇಶ

೧. ಮಧ್ಯ ಪ್ರದೇಶ

೧೯೭೧ರ ಜನಗಣತಿಯ ಪ್ರಕಾರ ಈ ರಾಜ್ಯದ ಜನಸಂಖ್ಯೆ ೪,೧೬,೫೪,೧೧೯.

ಈ ರಾಜ್ಯದಲ್ಲಿ ಒಟ್ಟು ೪೯,೮೪೫ ಶಾಲೆಗಳಿದ್ದು, ಕೇವಲ ೬೫೫ ಶಾಲೆಗಳು ಮಾತ್ರ ಭಾಷಾ ಅಲ್ಪಸಂಖ್ಯಾತರಿಗೆ ಶಿಕ್ಷಣವನ್ನು ನೀಡುತ್ತಲಿವೆ. ಇಲ್ಲಿ ೧,೪೪,೧೯೮ ವಿದ್ಯಾರ್ಥಿಗಳು ಓದುತ್ತಿದ್ದು ೪೭೦೮ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಮರಾಠಿ ಹಾಗೂ ಉರ್ದು ಭಾಷೆಗಳೇ ಹೆಚ್ಚು. ತದನಂತರ ಬಂಗಾಳಿ ಶಾಲೆಗಳಿವೆ. ಆದರೆ ರಾಜ್ಯದಲ್ಲಿರುವ ಮಂಡ್ಲಾ, ಶಿವೋನಿ, ಸಿಂಧವಾರಾ, ಬೇಟೂಲ, ಬಾಲಘಾಟ ಮತ್ತು ಬಸ್ತಾರಾ ಜಿಲ್ಲೆಗಳಲ್ಲಿ ಗೋಂಡಿ ಭಾಷೆಯನ್ನಾಡುವ ಅಲ್ಪಸಂಖ್ಯಾತರಿಗಾಗಲಿ ಮತ್ತು ಧಾರ್, ಝಬುಂಭಿಯಾ, ಬಾರ್ಗ್ವನೊ, ರತ್ಲಾಮ್ ಜಿಲ್ಲೆಗಳಲ್ಲಿ ಭಿಲೀ ಭಾಷೆಯನ್ನಾಡುವ ಬಹು ಸಂಖ್ಯಾ ಪ್ರಮಾಣದಲ್ಲಿರುವ ಈ ಭಾಷಾ ಅಲ್ಪಸಂಖ್ಯಾತರಿಗೆ ಶಿಕ್ಷಣ ಸೌಲಭ್ಯವನ್ನಾಗಲಿ, ಅವರವರು ಆಡುವ ಭಾಷೆಗಳಲ್ಲಿ ಸರಕಾರಿ ಮಹತ್ವದ ಪ್ರಕಟಣೆಗಳನ್ನಾಗಲಿ ಸರಕಾರ ಒದಗಿಸುತ್ತಿಲ್ಲ. ರಾಜ್ಯ ಘಟನೆಯ ೮ನೆಯ ಶೆಡ್ಯೂಲಿನಲ್ಲಿ ನಮೂದಿಸದ ಯಾವುದೇ ಭಾಷೆಗಳಿಗಾಗಲಿ ಈ ರಾಜ್ಯದಲ್ಲಿ ಮನ್ನಣೆಯಿಲ್ಲ. ಇಷ್ಟೇ ಅಲ್ಲ, ಇಲ್ಲಿರುವ ಭಾಷಾಅಲ್ಪಸಂಖ್ಯಾತರ ಉರ್ದು ಮತ್ತಿತರ ಶಾಲೆಗಳು ಹಿಂದೀ ಶಾಲೆಗಳಾಗಿ ಮಾರ್ಪಡುತ್ತಲಿವೆ. ೧೯೭೫ರ ವರೆಗೆ ಈ ರಾಜ್ಯದಲ್ಲಿ ಮರಾಠಿ, ಓರಿಯಾ, ಗುಜರಾತಿ, ಸಿಂಧಿ ಭಾಷೆಗಳಲ್ಲಿ ಪಠ್ಯ ಪುಸ್ತಕಗಳೇ ದೊರೆಯುತ್ತಿದ್ದಿಲ್ಲ. ಪ್ರಾಯಶಃ ಈಗಲೂ ಇಲ್ಲ.

೧೯೫೦ರವರೆಗೆ ಗ್ವಾಲಿಯರ್ ಆರ್ಟ್ಸ ಮತ್ತು ಕಾಮರ್ಸ್ ಕಾಲೇಜಿನಲ್ಲಿ ಬಿ.ಎ. ಎಂ. ಎ. ತರಗತಿಗಳು ಉರ್ದು ಮಾಧ್ಯಮದಲ್ಲೇ ನಡೆಯುತ್ತಿದ್ದವು. ಶೇಖಡ ೬೦ ರಷ್ಟು ಸಿಂಧಿಗಳು ವಾಸಿಸಿರುವ ಬೈರಾಗರ್ ಜಿಲ್ಲೆ (Bairagarh)ಯನ್ನೂ ಕೂಡಾ ದ್ವಿಭಾಷಾ ಪ್ರದೇಶವೆಂದು ಸರಕಾರ ಮನ್ನಣೆ ನೀಡಿರುವುದಿಲ್ಲ. ಹಿಂದಿಯೇ ಈ ರಾಜ್ಯದ ಬಹು ಸಂಖ್ಯಾತರ ಭಾಷೆಯಾಗಿರುವುದರಿಂದ ಲೋಕಸೇವಾ ಆಯೋಗದಿಂದ ನಡೆಸಲ್ಪಡುವ ಪರೀಕ್ಷೆಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಹೇರಲಾಗಿದೆ.

ರಾಜ್ಯಭಾಷೆಯಾದ, ಹಿಂದೀ ಭಾಷಾ ಜ್ಞಾನವಿಲ್ಲದವರಿಗೆ ಸರ್ಕಾರಿ ನೌಕರಿಯಲ್ಲಿ ಆಸ್ಪದವಿಲ್ಲದಿರುವುದು ಭಾಷಾ ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿದಂತಾಗುತ್ತಿದೆ. ಹಾಗೂ ಅಖಿಲ ಭಾರತ ತೀರ್ಮಾನಕ್ಕೆ ವ್ಯತಿರಿಕ್ತವಾಗುತ್ತಿದೆ. ಈ ನೀತಿಯನ್ನು ಬದಲಾಯಿಸಬೇಕೆಂದು, ಭಾಷಾ ಅಲ್ಪ ಸಂಖ್ಯಾತರಿಗೆ ನೌಕರಿ ಸೇರುವ ಅವಕಾಶ ಮಾಡಿಕೊಡಬೇಕೆಂದು ಕಮಿಷನರವರು ಅನೇಕ ಸಾರೆ ಪ್ರಾರ್ಥಿಸಿಕೊಂಡರು. "ಆಡಳಿತೆಯ ಎಲ್ಲ ರಂಗದಲ್ಲಿಯೂ ಹಿಂದಿಯೇ ಪ್ರಧಾನ ಭಾಷೆಯಾಗಿರುವುದರಿಂದ ಅನ್ಯಭಾಷಾ ಅಲ್ಪಸಂಖ್ಯಾತರಿಗೆ ಸರ್ಕಾರಿ ಹುದ್ದೆಗಳಲ್ಲಿ ಅವಕಾಶ ಕೊಟ್ಟರೆ ಆಡಳಿತ ನಡೆಸುವುದು ಕಷ್ಟವಾಗುತ್ತದೆ". ಎಂದು ಸರ್ಕಾರ ಕಮಿಷನರ ಅವರಿಗೆ ಉತ್ತರವನ್ನು ನೀಡಿದೆ.

ರಾಜ್ಯದಲ್ಲಿ ಭಾಗಶಃ ೧೫ ಕ್ಕಿಂತ ಹೆಚ್ಚಿಗೆ ಭಾಷಾ ಅಲ್ಪಸಂಖ್ಯಾತರೇ ಇಲ್ಲದಿರುವುದರಿಂದ ಸರ್ಕಾರದ ಕಾನೂನು ಮತ್ತು ಮಹತ್ವದ ಪ್ರಕಟಣೆಗಳನ್ನು ಹಿಂದೀ ಭಾಷೆಯಲ್ಲಿ ಬಿಟ್ಟು ಬೇರೆ ಯಾವ ಭಾಷೆಯಲ್ಲೂ ಸರ್ಕಾರ ಪ್ರಕಟಿಸಲಾಗುತ್ತಿಲ್ಲ. ಹಿಂದಿಯೇ ಆಡಳಿತ ಭಾಷೆಯಾಗಿರುವುದರಿಂದ, ಆಡಳಿತೆಯ ಎಲ್ಲ ಹಂತಗಳಲ್ಲಿಯೂ ಹಿಂದಿಯನ್ನೇ ಬಳಕೆ ಮಾಡುತ್ತಿರುವುದರಿಂದ, ಈ ರಾಜ್ಯದಲ್ಲಿ ಬೇರೆ ಭಾಷೆಗಳಿಗೆ ಅವಕಾಶವಿಲ್ಲ. ಆದರೆ ಭೂಪಾಲದಲ್ಲಿ ಮಾತ್ರ ಪ್ರಾಯೋಗಿಕವಾಗಿ ಉರ್ದು ಭಾಷೆಯಲ್ಲಿ ಹಲ ಕೆಲವು ಪ್ರಕಟಣೆಗಳನ್ನು ನೀಡಲಾಯಿತು. ಉರ್ದು ಭಾಷೆಯಲ್ಲಿ ಬರುವ ಅರ್ಜಿಗಳನ್ನು ಸರ್ಕಾರಿ ಕಚೇರಿಗಳಲ್ಲಿ ಸ್ವೀಕರಿಸಿ, ಉರ್ದು ಭಾಷೆಯಲ್ಲಿಯೇ ಅವರಿಗೆ ಸರ್ಕಾರದಿಂದ ಉತ್ತರ ದೊರೆಯುವಂತಾಗಬೇಕು ಎಂಬ ಗ್ವಾಲಿಯರ್ ಉರ್ದು ಸಂಸ್ಥೆಯ ಬೇಡಿಕೆಗೆ ಸರ್ಕಾರ ಮನ್ನಣೆಯನ್ನಿತ್ತಿಲ್ಲ. ಹಾಗೂ ಉರ್ದು ಅಕಾಡಮಿಯನ್ನು ನಿರ್ಮಿಸಬೇಕೆಂಬ ಬೇಡಿಕೆಗೆ ಸರ್ಕಾರದಿಂದ ಈ ವರೆಗೂ ಉತ್ತರ ದೊರೆತಿಲ್ಲ. ಅನೇಕ ಉರ್ದು ಶಾಲೆಗಳಲ್ಲಿ ಉರ್ದು ಮಾಧ್ಯಮದಲ್ಲಿ ಶಿಕ್ಷಣ ನಡೆಯುತ್ತಿದ್ದರೂ ಅವರಿಗಾಗಿ ಬಹುಸಂಖ್ಯಾತ ವಿಷಯಗಳಲ್ಲಿ ಪಠ್ಯ ಪುಸ್ತಕಗಳೇ ಇಲ್ಲ. ಈ ಕಾರಣದಿಂದ ಗ್ವಾಲಿಯರ್, ಆವದಪುರ ಭಾಗದಲ್ಲಿಯ ಒಂದು ಉರ್ದು ಶಾಲೆಯಿದ್ದು, ಅಲ್ಲಿ ಉರ್ದು ಮಾಧ್ಯಮದಲ್ಲಿ ಶಿಕ್ಷಣವನ್ನೇ ನೀಡುತ್ತಿಲ್ಲ. ಅದೇ ರೀತಿ ಓರಿಯಾ, ಸಿಂಧೀ ಭಾಷೆಗಳು ಕೂಡಾ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಲಿವೆ. ಬೈರಾಗರದಲ್ಲಿಯ ಹೈಯರ್ ಸೆಕೆಂಡರಿ ಶಾಲೆಯೊಂದಕ್ಕೆ ಪದವೀಧರ ಹಿಂದೀ ಶಿಕ್ಷಕರನ್ನು ನೇಮಿಸಬೇಕೆಂಬ ಬೇಡಿಕೆಯಿದ್ದರೂ ಪದವೀಧರ ಶಿಕ್ಷಕರು ರಾಜ್ಯದಲ್ಲಿಯೇ ಇಲ್ಲವೆಂದು ಸರ್ಕಾರ ಉತ್ತರ ನೀಡಿದೆ. ಇದೇ ರೀತಿ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರ ಶಾಲೆಗಳ, ವಿದ್ಯಾರ್ಥಿಗಳ, ಶಿಕ್ಷಕರ ಸಂಖ್ಯೆ ಕಡಿಮೆಯಾಗುತ್ತ ನಡೆದಿವೆ.

ಕಮೀಷನರ್ ಅವರು ಇದಕ್ಕೆ ಕಾರಣವೇನೆಂದು ಕೇಳಿದಾಗ ರಾಜ್ಯಭಾಷೆಯಾದ ಹಿಂದೀಯ ಕಡೆಗೆ ವಿದ್ಯಾರ್ಥಿಗಳ ಹಾಗೂ ಪಾಲಕರ ಅಭಿರುಚಿಯು ದಿನೇ ದಿನೇ

ಹೆಚ್ಚುತ್ತಿರುವುದರಿಂದ ಭಾಷಾ ಅಲ್ಪಸಂಖ್ಯಾತರ ಶಾಲೆಗಳನ್ನು ಹಿಂದೀ ಶಾಲೆಗಳನ್ನಾಗಿ ಮಾರ್ಪಡಿಸ ಬೇಕಾಗಿದೆ ಎಂದು ಸರ್ಕಾರ ಉತ್ತರ ನೀಡಿತು.

ಈ ಕಾರಣಕ್ಕಾಗಿಯೇ ಈ ರಾಜ್ಯದಲ್ಲಿ ಹಿಂದಿಯೇ ಏಕೈಕ ಪ್ರಥಮ ಭಾಷೆಯಾಗಿ ಉಳಿದು ಕೊಂಡಿದೆ.

೨. ಉತ್ತರ ಪ್ರದೇಶ

೧೯೭೧ ರ ಜನಗಣತಿಯ ಪ್ರಕಾರ ಈ ರಾಜ್ಯದ ಜನಸಂಖ್ಯೆ ೮,೮೩,೪೧,೪೧೪

ಭಾಷಾ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸಂಖ್ಯೆ ಈವರೆಗೂ ತಿಳಿದು ಬಂದಿಲ್ಲ. ದೊರೆತಿರುವ ಅಂಕಿ ಅಂಶಗಳ ಆಧಾರದ ಮೇಲೆ ಹೇಳುವುದಾದರೆ, ಮಾಧ್ಯಮಿಕ ಶಾಲೆಗಳಲ್ಲಿ ಬೆಂಗಾಲಿಯಲ್ಲಿ ೧೬೭೪ ವಿದ್ಯಾರ್ಥಿಗಳು ೧೯ ಜನ ಶಿಕ್ಷಕರು, ಗುಜರಾತಿಯಲ್ಲಿ ೨೯ ವಿದ್ಯಾರ್ಥಿಗಳು ಒಬ್ಬ ಶಿಕ್ಷಕನು, ಪಂಜಾಬಿಯಲ್ಲಿ ೪೩೪೨ ವಿದ್ಯಾರ್ಥಿಗಳು ೨೨ ಜನ ಶಿಕ್ಷಕರು, ಸಿಂಧಿಯಲ್ಲಿ ೧೬೨ ವಿದ್ಯಾರ್ಥಿಗಳು, ಒಬ್ಬ ಶಿಕ್ಷಕ, ಉರ್ದು ಭಾಷೆಯಲ್ಲಿ ೧೦೭ ಶಾಲೆಗಳು ೮೬ ತರಗತಿಯ ವಿಭಾಗಗಳು ಇದ್ದು, ೫೯,೫೯೩ ವಿದ್ಯಾರ್ಥಿಗಳು, ೧೮೩೫ ಶಿಕ್ಷಕರು ಉರ್ದು ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆಂದು ಭಾಷಾ ಅಲ್ಪ ಸಂಖ್ಯಾತರ ಕಮಿಷನರ್‌ಅವರ ವರದಿಯಿಂದ ತಿಳಿದು ಬರುತ್ತದೆ. ಆಡಳಿತ ಭಾಷೆ ಹಿಂದಿಯಾಗಿರುವುದರಿಂದ ಆ ರಾಜ್ಯದಲ್ಲಿ ನೌಕರಿ ಸೇರಬೇಕೆನ್ನುವವರಿಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ನಡೆಸಲ್ಪಡುವ ಪರೀಕ್ಷೆಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ವಿಧಿಸಿದ್ದಾರೆ.

ಭಾಷಾಅಲ್ಪಸಂಖ್ಯಾತರು ೧೫ ಪ್ರಮಾಣದಲ್ಲಿ ವಾಸಿಸಿರುವ ಹಾಗೂ ಅವರವರ ಮಾತೃ ಭಾಷೆಗಳಲ್ಲಿ ಶಿಕ್ಷಣ ನೀಡುವ ಬೇಡಿಕೆಗಳನ್ನು ಸಲ್ಲಿಸಿರುವ ಅಂಕಿ ಅಂಶಗಳನ್ನು ಸರಕಾರ ಈವರೆಗೂ ಕಮಿಷನರವರಿಗೆ ವರದಿ ಮಾಡಿಲ್ಲ.

ಉತ್ತರ ಪ್ರದೇಶದಲ್ಲಿ ಜನಸಂಖ್ಯೆಯ ಶೇಕಡ ೧೦ ಪ್ರಮಾಣದಲ್ಲಿ ಮುಸ್ಲೀಮರಿದ್ದರೂ ಅವರು ತಮ್ಮ ಭಾಷಾ ವಿಷಯದಲ್ಲಿ ಅತ್ಯಂತ ತೊಂದರೆಗೊಳಗಾಗಿದ್ದಾರೆ. ಬಹು ಸಂಖ್ಯಾತ ಉರ್ದುಶಾಲೆಗಳು ಜಿಲ್ಲಾ ಸಮಿತಿಗಳಿಂದ ನಡೆಸಲ್ಪಡುತ್ತಿದ್ದರೂ ಅನೇಕ ಕಡೆಗೆ ಶಿಕ್ಷಕರೇಯಿಲ್ಲ. ತಾತ್ಕಾಲಿಕವಾಗಿ ನೇಮಿಸಿಕೊಂಡ ಉರ್ದು ಶಿಕ್ಷಕರಿಗೂ ಕೂಡಾ ಭಡ್ತಿಗಳನ್ನು ನೀಡದೆ ಒಂದಿಲ್ಲೊಂದು ನೆಪದಿಂದ ಅವರನ್ನು ಕೆಲಸದಿಂದ ಕಿತ್ತು ಹಾಕುತ್ತಲೇ ನಡೆದಿದ್ದಾರೆ. ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವ ಬಗ್ಗೆ ಅಖಿಲ ಭಾರತ ತೀರ್ಮಾನವನ್ನು ಇಲ್ಲಿಯ ಸರ್ಕಾರ ಅಂಗೀಕರಿಸಿದ್ದರೂ ಯಾವುದೇ ರೀತಿಯ ಕ್ರಮ ಕೈಕೊಂಡಿಲ್ಲವೆಂದೂ ಹೇಳಬಹುದು. ಈ ಬಗ್ಗೆ ಅನುಸರಿಸಿದ ಮಾಹಿತಿಗಳನ್ನು ಸರಕಾರ ಈವರೆಗೆ ಕಮಿಷನರ್ ಅವರಿಗೆ ಒದಗಿಸಿಲ್ಲ.

ಹಿಂದಿಯು ಈ ರಾಜ್ಯದ ಆಡಳಿತ ಭಾಷೆಯಾಗಿರುವುದರಿಂದ ಸರ್ಕಾರಿ ನೌ ಸೇರಬೇಕೆನ್ನುವವರಿಗೆ ಕಡ್ಡಾಯವಾಗಿ ಹಿಂದೀ ಭಾಷೆ ಬರಲೇಬೇಕು ಹಾ ಕಡ್ಡಾಯವಾಗಿ ಹಿಂದೀ ಭಾಷೆಯಲ್ಲಿ ಒಂದು ಉತ್ತರ ಪತ್ರಿಕೆಯನ್ನು ಬರೆಯಲೇಬೇ ಈ ನೀತಿಯನ್ನು ಬದಲಿಸಬೇಕೆಂದು ಕಮಿಷನರ್ ಅವರು ಭಿನ್ನವಿಸಿಕೊಂಡಿದ್ದ ಸರ್ಕಾರ ಅವರ ಆದೇಶವನ್ನು ಧಿಕ್ಕರಿಸಿದೆ. ಭಾಷಾ ಅಲ್ಪಸಂಖ್ಯಾತರ ತಿಳುವ ಸರ್ಕಾರದ ಮಹತ್ವದ ಪ್ರಕಟಣೆಗಳನ್ನು ಅವರವರ ಭಾಷೆಯಲ್ಲಿ ಪ್ರಕಟಿಸುತ್ತಿರು ಬಗ್ಗೆ ಯಾವ ಮಾಹಿತಿಯೂ ದೊರೆಯುತ್ತಿಲ್ಲ. ಈ ರಾಜ್ಯದಲ್ಲಿ ಭಾಷಾ ಅ ಸಂಖ್ಯಾತರಿಗೆ ಸಂಬಂಧಪಟ್ಟ ನಿಬಂಧನೆಗಳು ಕಾಗದದಲ್ಲಿ ಉಳಿದು ಕೊಂಡಿವೆ ವಿನಃ ಕಾರ್ಯಾಚರಣೆಯಲ್ಲಿ ನಡೆಯುತ್ತಿಲ್ಲ.

ಹಿಂದಿಯನ್ನು ಹೊರತು ಪಡಿಸಿ ಬೇರಾವ ಭಾಷೆಗಳೂ ಇಲ್ಲಿ ಬದುಕುತ್ತಿ ರಾಜ್ಯದ ಒಟ್ಟು ಜನಸಂಖ್ಯೆಯ ಹತ್ತು ಪ್ರಮಾಣಕ್ಕಿಂತಲೂ ಹೆಚ್ಚಿಗೆ ಇರುವ ಉರ್ದು ಭಾಷೆ ಹಾಗೂ ಉರ್ದು ಶಿಕ್ಷಣದ ಮೇಲೆ ಇಲ್ಲಿಯ ಸರ್ಕಾರವು ಉಗ್ರ ಹಿಂಸೆಯ ಕೊಡುತ್ತಲಿದೆ. ರಾಜ್ಯದಾದ್ಯಂತ ಉರ್ದು ಶಾಲೆಗಳಿಗೆ, ಶಿಕ್ಷಕರಿಗೆ ಅಪಾರ ಬೇ ಇದ್ದರೂ ಸರ್ಕಾರ ಅವುಗಳನ್ನು ಈಡೇರಿಸುತ್ತಿಲ್ಲ. ಉರ್ದು ಶಾಲೆಯ ಎಷ್ಟೋ ಮುಖ್ಯೋಪಾಧ್ಯಯರು ಬೇಸತ್ತು ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ತ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

ಈ ರೀತಿ ನಡೆದ ಹಿಂದೀ ಭಾಷೆಯ ದಬ್ಬಾಳಿಕೆಯನ್ನು ಪ್ರತಿಭಟಿಸುವ ಪತ್ರಿ ಗಳಿಗೆ ಮುಖ್ಯವಾಗಿ ರೂಡಾದ್ ಈ ಚಮನ್ ಎಂಬ ಪಿಲಿಬಿತ್‌ನಿಂದ ಪ್ರಕಟವಾಗು ಉರ್ದು ಪತ್ರಿಕೆಗೆ ಅಲ್ಲಿನ ಸರ್ಕಾರ ಜಾಹಿರಾತುಗಳನ್ನೇ ನೀಡುತ್ತಿಲ್ಲ. ಇದಕ್ಕೆ ಉತ್ತ ಪ್ರದೇಶದ ಭಾಷಾ ಅಲ್ಪಸಂಖ್ಯಾತ ಶಾಸಕರು ಏನು ಹೇಳುತ್ತಾರೆ?

❋❋

ಪೂರ್ವ ವಲಯ
(Eastern Zone)

೧. ಬಿಹಾರ ೨. ಓರಿಸ್ಸಾ
೩. ಪಶ್ಚಿಮ ಬಂಗಾಳ

೧. ಬಿಹಾರ್

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೫,೬೩,೫೩,೩೬೯.

ಬಿಹಾರ್ ಸರ್ಕಾರವು ೧೯೭೪-೭೫ ರಿಂದ ಈವರೆಗೆ ಅಂದರೆ ೧೯೭೭-೭೮ ರ ವರೆಗೆ ಭಾಷಾಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಶೈಕ್ಷಣಿಕ ಅಂಕಿ-ಅಂಶಗಳನ್ನು ಕಮಿಷನರ್ ಅವರಿಗೆ ವರದಿ ಮಾಡಿರುವುದಿಲ್ಲ.

ಇಲ್ಲಿ ಬಹುಸಂಖ್ಯಾತರು ಆಡುವ ಭಾಷೆ ಹಿಂದಿಯಾಗಿದ್ದರೂ ಉರ್ದು, ಬೆಂಗಾಲಿ, ಸಂತಲಿ, ಮೈಥಿಲಿ, ಓರಿಯಾ, ಮುಂಡರಿ, ಓರಾನ್, ಹೋ, ಇವುಗಳು ಶೈಕ್ಷಣಿಕ ಭಾಷಾ ಮಾಧ್ಯಮದ ಭಾಷೆಗಳೆಂದು ಸರಕಾರದಿಂದ ಮನ್ನಣೆ ಪಡೆದಿವೆ. ಆದರೆ ಈ ಭಾಷೆಗಳನ್ನಾಡುವ ಜನರು ರಾಜ್ಯದ ಯಾವ ಯಾವ ಭಾಗಗಳಲ್ಲಿ ವಾಸಿಸಿದ್ದಾರೆ ಹಾಗೂ ಅವರವರ ಭಾಷೆಗಳಲ್ಲಿ ಪ್ರಾಥಮಿಕ ಹಂತದ ಶಿಕ್ಷಣವನ್ನು ನೀಡಲಾಗುತ್ತಿದೆಯೇ? ಎಂಬ ಬಗ್ಗೆ ಸರ್ಕಾರ ಯಾವುದೇ ರೀತಿಯ ಅಂಕಿ-ಅಂಶಗಳನ್ನು ಕಮಿಷನರ್ ಅವರಿಗೆ ವರದಿಮಾಡಿರುವುದಿಲ್ಲ. ಆ ಕಾರಣಕ್ಕಾಗಿ ಬಿಹಾರ್ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರ ಸ್ಥಿತಿಗತಿಗಳೇನೆಂಬುದನ್ನು ನಿಖರವಾಗಿ ಹೇಳಲು ಬರುವಂತಿಲ್ಲ.

ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರು ವಾಸಿಸಿರುವ ನಾನಾ ಭಾಗಗಳಿಂದ ಶೈಕ್ಷಣಿಕ ಸೌಲಭ್ಯವನ್ನು ಸರ್ಕಾರವು ತಮಗೆ ಒದಗಿಸಿಲ್ಲವೆಂಬ ಬಗ್ಗೆ ಅಸಂಖ್ಯ ದೂರುಗಳು ಕಮಿಷನರ್ ಅವರಿಗೆ ಕೊಡಲ್ಪಟ್ಟಿವೆ. ಭಾಷಾಅಲ್ಪಸಂಖ್ಯಾತರಿಗೆ ಕಾನೂನು ರೀತ್ಯ ಲಭ್ಯವಾಗುವ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕಮಿಷನರ್ ಅವರು ಪುನಃ ಪುನಃ ಸರಕಾರಕ್ಕೆ ಎಚ್ಚರಿಕೆ ನೀಡುತ್ತ ಬಂದಿದ್ದರೂ ಯಾವ ಪ್ರಯೋಜನವೂ ಆಗಿಲ್ಲ. ಸರ್ಕಾರಿ ನೌಕರಿ ಸೇರಬೇಕೆನ್ನುವವರಿಗೆ ಅಲ್ಲಿಯ ಲೋಕ ಸೇವಾ ಆಯೋಗದಿಂದ ನಡೆಸಲ್ಪಡುವ ಪರೀಕ್ಷೆಗಳಲ್ಲಿ ಹಿಂದೀ ಭಾಷೆಯನ್ನು ತೆಗೆದುಕೊಂಡು ಕನಿಷ್ಟ ಪಕ್ಷ ೩೦ ಅಂಶಗಳನ್ನು ಪಡೆಯಬೇಕೆಂಬ ನಿಬಂಧನೆಯಿದೆ.

ಹೀಗೆ ಪಡೆದುಕೊಂಡ ಅಂಕಗಳನ್ನು ಒಟ್ಟು ಪಡೆದ ಅಂಕಗಳ ಜೊತೆಗೆ ಸಮಾವೇ ಗೊಳಿಸಿ ಅರ್ಹತೆ (Merit list) ಯ ಯಾದಿಗೆ ಸೇರಿಸಲಾಗುವುದಿಲ್ಲ.

೨೦೦ ಅಂಶಗಳ ಭಾಷಾ ಪತ್ರಿಕೆ ಬೇರೆಯಿದೆ. ಇದಲ್ಲದೆ ತತ್ಸಮಾ ಅರೇಬಿಕ್, ಪರ್ಶಿಯನ್, ಉರ್ದು, ಬೆಂಗಾಲಿ ಭಾಷೆಗಳಲ್ಲಿ ಯಾವುದೇ ಭಾಷೆಯನ್ನು ದರೂ ಆಯ್ದುಕೊಳ್ಳಬಹುದು.

ಇಲ್ಲಿರುವ ಸರ್ಕಾರಿ ಮಹತ್ವದ ಕಾಗದಪತ್ರಗಳೆಲ್ಲ ಹಿಂದೀ, ಇಂಗ್ಲಿಷಗಳ ಅಚ್ಚಾಗುತ್ತಿದ್ದು, ಭಾಷಾಅಲ್ಪಸಂಖ್ಯಾತರಿಗೆ ಅತ್ಯಂತ ತೊಂದರೆಯಾಗಿದೆ. ಬಿಹಾರ ರಾಜ್ಯದಲ್ಲಿ ೧೫ ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ವಾಸಿಸಿರುವ ಭಾಷಾಅಲ್ಪಸಂಖ್ಯಾತರ ಅವರವರ ಭಾಷೆಯಲ್ಲಿ ಅಂದರೆ ಬೆಂಗಾಲಿ, ಓರಿಯಾ, ಉರ್ದು, ಸಂತಲಿ, ಹೋ ಮೈಥಿಲಿ, ಹಾಗೂ ಮುಂಡರಿ ಇತ್ಯಾದಿ ಭಾಷೆಗಳಲ್ಲಿಯೂ ಪ್ರಕಟಣೆಗಳನ್ನು ನೀ ಬೇಕೆಂದು ಕಮಿಷನರ್ ಅವರು ಆದೇಶ ನೀಡಿದ್ದರೂ ಸರ್ಕಾರ ಯಾವ ಕ್ರಮ ಕೊಂಡಿದೆ? ಎನ್ನುವುದನ್ನು ಕಮಿಷನರ್ ಅವರಿಗೆ ೧೯೭೪–೭೫ ರಿಂದ ಈವರೆಗೂ ವರದಿ ಮಾಡಿರುವುದಿಲ್ಲ.

೨. ಓರಿಸ್ಸಾ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೨,೧೯,೪೪,೬೧೫

ಈ ರಾಜ್ಯದಲ್ಲಿ ಕೂಡಾ ಭಾಷಾಅಲ್ಪಸಂಖ್ಯಾತರಿಗೆ ಶೈಕ್ಷಣಿಕ ಸೌಲಭ್ಯವನ್ನು ಸರಿಯಾದ ರೀತಿಯಲ್ಲಿ ಒದಗಿಸಿಲ್ಲ.

ರಾಜ್ಯದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ಭಾಷೆಗಳನ್ನು ಹೊಂದಿರು ಭಾಷಾಅಲ್ಪಸಂಖ್ಯಾತರಿದ್ದಾರೆ ಎಂಬ ಮಾಹಿತಿಯನ್ನು ಈ ಸರ್ಕಾರ ಸಿದ್ಧಪಡಿ ಕೊಂಡಿಲ್ಲ. ಗಂಜಾಮ್ ಜಿಲ್ಲೆಯೊಂದರಲ್ಲಿ ಮಾತ್ರ ಭಾಗಶಃ ೧೫ಪ್ರಮಾಣದಲ್ಲಿ ತೆಲುಗ ಮಾತ ನಾಡುವ ಅಲ್ಪಸಂಖ್ಯಾತರು ಬಹು ಪ್ರಮಾಣದಲ್ಲಿದ್ದರೂ, ಅವರಿಗೆ ದೊರೆಯ ಬೇಕಾದ ಶೈಕ್ಷಣಿಕ ಸೌಲಭ್ಯವು ದೊರೆತಿಲ್ಲ, ಇದಲ್ಲದೆ ಸಂತಲಿ ಕುಯಿ, ಹಾಗು ಇತರ ಗುಡ್ಡಗಾಡು ಪ್ರದೇಶದ ಭಾಷಾಅಲ್ಪಸಂಖ್ಯಾತರ ಮಾತೃಭಾಷೆಗಳ ಯಾವುದೇ ಪ್ರೋತ್ಸಾಹವಾಗಲಿ, ಮಹತ್ವದ ಸರ್ಕಾರಿ ಪ್ರಕಟಣೆಗಳು ಅವರವ ಭಾಷೆಗಳಲ್ಲಾಗಲಿ ದೊರೆಯುತ್ತಿಲ್ಲ. ಇಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಸಂಬಂಧ ಪಟ್ಟಂತೆ ೫೫೩ ಪ್ರಾಥಮಿಕ ಶಾಲೆಗಳು, ೭೪ ಮಾಧ್ಯಮಿಕ ಶಾಲೆಗಳು ಇದ್ದು, ೮೫,೯೧೭ ವಿದ್ಯಾರ್ಥಿಗಳು ಓದುತ್ತಿದ್ದಾರೆ. ೧೫೬೯ ಶಿಕ್ಷಕರು ಮಾತ್ರ ಕೆಲಸಮಾಡು ತ್ತಿದ್ದಾರೆ. ಇವುಗಳಲ್ಲಿ ಉರ್ದು, ಬಂಗಾಳಿ, ತೆಲುಗು, ಭಾಷಾ ಮಾಧ್ಯಮದ ಶಾಲೆ ಗಳೇ ಅಧಿಕವಾಗಿದ್ದು ಇನ್ನುಳಿದ ಭಾಷೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ,

೩. ಪಶ್ಚಿಮ ಬಂಗಾಲ

೧೯೭೧ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೪,೪೩,೧೨,೦೧೧

ಇಲ್ಲಿಯ ಭಾಷಾಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವ ಬಗ್ಗೆ ಅಖಿಲ ಭಾರತ ತೀರ್ಮಾನವನ್ನು ತೆಗೆದುಕೊಂಡಿದ್ದರೂ ೧೯೭೧ರ ಜನಗಣತಿಯ ಪ್ರಕಾರ ನಾಲ್ಕೂ ವರೆ ಕೋಟಿ ಇರುವ ಜನಸಂಖ್ಯೆಯ ೩ರಷ್ಟು ಪ್ರಮಾಣದಲ್ಲಿರುವ ಸಂತಲಿ (Santhali) ಭಾಷೆಯ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುತ್ತಿಲ್ಲ. ಇದು ಸಂವಿಧಾನಕ್ಕೆ ವಿರೋಧವಲ್ಲವೆ? ಆಡಳಿತ ಭಾಷೆ ಬಂಗಾಲಿಯಾಗಿದ್ದರೂ ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ನಡೆಸಲ್ಪಡುವ ಪರೀಕ್ಷೆಗಳು ಇಂಗ್ಲೀಷಿನಲ್ಲಿ ನಡೆಯುತ್ತಿರುವುದಾದರೂ ಐಚ್ಛಿಕ ಭಾಷಾ ವಿಷಯುಗಳಲ್ಲಿ ಎರಡು ಪತ್ರಿಕೆಗಳನ್ನು ರಾಜ್ಯಭಾಷೆಯಾದ ಬಂಗಾಲಿಯಲ್ಲಿಯೇ ಬರೆಯಬೇಕಲ್ಲದೆ, ಎರಡೂ ಪತ್ರಿಕೆಗಳಿಂದ ಒಟ್ಟು ೨೦೦ ಗುಣಗಳನ್ನು ಪಡೆಯಲೇಬೇಕು. ಇದು ಭಾಷಾಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿದಂತಾಗುವದಿಲ್ಲವೆ? ಈ ರಾಜ್ಯದ ಮಂತ್ರಿ ಮಂಡಳವು ಮುಖ್ಯಮಂತ್ರಿಗಳ ೧೯೭೧ರ ತೀರ್ಮಾನವನ್ನು ಧಿಕ್ಕರಿಸಿದಂತಾಗಲಿಲ್ಲವೆ?

ಈ ರಾಜ್ಯದಲ್ಲಿ ೭೮೯ ಹಿಂದೀ ಪ್ರಾಥಮಿಕ ಶಾಲೆಗಳಿದ್ದು ೧,೧೮,೪೩೪ ವಿದ್ಯಾರ್ಥಿಗಳು ಓದುತ್ತಿದ್ದಾರೆ. ೩೩೫೭ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಇದಲ್ಲದೆ ೫೫೭ ನೇಪಾಳಿ ಶಾಲೆಗಳಲ್ಲಿ ೭೨,೫೧೫ ವಿದ್ಯಾರ್ಥಿಗಳು ಓದುತಿದ್ದು, ೨೦೬೭ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ.

ಅದರಂತೆಯೇ ೨೧೪ ಹಿಂದೀ ಮಾಧ್ಯಮಿಕ ಶಾಲೆಗಳಲ್ಲಿ ೭೮೯೫೩ ವಿದ್ಯಾರ್ಥಿಗಳು ಹಾಗೂ ೨೧,೮೮೧ ಹಿಂದೀ ಐಚ್ಛಿಕ ಭಾಷಾವಿಷಯವನ್ನು ತೆಗೆದುಕೊಂಡ ವಿದ್ಯಾರ್ಥಿಗಳು ಓದುತ್ತಿದ್ದಾರೆ. ೨೯೩೭ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ, ಹಿಂದಿಯನ್ನು ಬಿಟ್ಟರೆ ನೇಪಾಳಿ ಹಾಗೂ ಉರ್ದು ಭಾಷೆಗಳಿಗೆ ಅಲ್ಪ ಸ್ವಲ್ಪ ಪ್ರೋತ್ಸಾಹ ದೊರೆಯುತ್ತಿದ್ದು, ಇನ್ನುಳಿದ ಗುಜರಾತಿ, ಓರಿಯಾ, ಪಂಜಾಬಿ, ಸಂತಲಿ, ತೆಲುಗು, ತಮಿಳು ಭಾಷೆಗಳಿಗೆ ಇಲ್ಲಿ ಯಾವ ಪ್ರೋತ್ಸಾಹವೂ ದೊರೆಯುತ್ತಿಲ್ಲ.



ಉತ್ತರ ವಲಯ
(Northern Zone)

೧. ಹರಿಯಾಣ ೨. ಹಿಮಾಚಲ ಪ್ರದೇಶ
೩. ಜಮ್ಮು ಮತ್ತು ಕಾಶ್ಮೀರ್ ೪. ಪಂಜಾಬ
೫. ರಾಜಸ್ಥಾನ ೬. ಚಂಡೀಘರ್ ೭. ದೆಹಲಿ

೧. ಹರಿಯಾಣಾ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೧೦,೦೩೬,೮೦೮

೧೯೭೪–೭೫ ರಿಂದ ೧೯೭೭–೭೮ ರ ವರೆಗೆ ಭಾಷಾಅಲ್ಪಸಂಖ್ಯಾತರ ಸ್ಥಿತಿಗತಿಗಳನ್ನು ಕೇಂದ್ರ ಸರಕಾರಕ್ಕಾಗಲಿ, ಭಾಷಾ ಅಲ್ಪ ಸಂಖ್ಯಾತ ಕಮೀಷನರವರಿಗಾಗಲಿ ವರದಿಯನ್ನೇ ಮಾಡಿಲ್ಲ. ಏಕೆಂದರೆ ಭಾಷಾಅಲ್ಪಸಂಖ್ಯಾತರಿಗೆ ಶೈಕ್ಷಣಿಕ ಸೌಲಭ್ಯವನ್ನು ಒದಗಿಸಬೇಕೆಂಬ ಅಖಿಲ ಭಾರತ ತೀರ್ವಾನದನ್ವಯ ಹರಿಯಾಣಾ ಸರ್ಕಾರವು ಯಾವುದೇ ಸರ್ಕಾರಿ ಆದೇಶವನ್ನು ನೀಡಿಲ್ಲ. ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಹಿಂದೀ ಮಾಧ್ಯಮವನ್ನೇ ಏಕೈಕ ಭಾಷೆಯನ್ನಾಗಿ ಬಳಸುತ್ತಿದ್ದು, ಹಲಕೆಲವು ಪಂಜಾಬಿ ಭಾಷೆಯ ಖಾಸಗೀ ಶಾಲೆಗಳಲ್ಲಿ ಮಾತ್ರ, ಪಂಜಾಬಿ ಭಾಷೆಯನ್ನು ಶಿಕ್ಷಣಮಾಧ್ಯಮವನ್ನಾಗಿ ಬಳಸಲು ಒಪ್ಪಿಗೆ ನೀಡಿದೆ. ಇಲ್ಲಿ ತ್ರಿಭಾಷಾ ಸೂತ್ರವನ್ನು ಕಡ್ಡಾಯವಾಗಿ ಅನುಸರಿಸುತ್ತಿರುವುದರಿಂದ ೭ ಮತ್ತು ೮ನೇ ತರಗತಿಗಳಲ್ಲಿ ಮೂರನೇ ಭಾಷೆಯಾಗಿ ಪಂಜಾಬಿ, ಸಂಸ್ಕೃತ, ಉರ್ದು ಹಾಗೂ ತೆಲುಗು ಭಾಷೆಗಳನ್ನು ಇಷ್ಟವುಳ್ಳ ವಿದ್ಯಾರ್ಥಿಗಳು ಆಯ್ದುಕೊಳ್ಳಬಹುದು. ಹಾಗೂ ಇವುಗಳ ಜೊತೆಗೆ ಪಂಜಾಬಿ, ಉರ್ದು ಭಾಷೆಗಳನ್ನು ೧ ರಿಂದ ೫ ನೇ ತರಗತಿಯವರೆಗೆ ಒಂದು ತರಗತಿಯಲ್ಲಿ ಹತ್ತು ಇಲ್ಲವೆ ಶಾಲೆಯ ಒಟ್ಟು ವಿದ್ಯಾರ್ಥಿಗಳಲ್ಲಿ ೪೦ ಕ್ಕೂ ಮಿಕ್ಕಿ ಆಯಾ ಭಾಷೆಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿದ್ದರೆ ಮಾತ್ರ, ಈ ಎರಡೂ ಭಾಷೆಗಳನ್ನು ಹೆಚ್ಚುವರಿ ಭಾಷೆಯಾಗಿ ತೆಗೆದುಕೊಳ್ಳುವ ಅವಕಾಶವಿದೆ. ಈ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಒದಗಿಸಿರುವ ಶಿಕ್ಷಣ ಸೌಲಭ್ಯಗಳ ಬಗ್ಗೆ ೧೯೭೬–೭೭ ಮತ್ತು ೧೯೭೭-೭೮ ರ ಅಂಕಿ-ಅಂಶಗಳನ್ನು ಸರ್ಕಾರ ಒದಗಿಸಿಲ್ಲವಾದರೂ, ೧೯೭೪-೭೫, ೧೯೭೫-೭೬ ರ ಕೆಲವು ಅಂಕಿ ಅಂಶಗಳನ್ನು ಮಾತ್ರ ಸರ್ಕಾರ ಒದಗಿಸಿದ್ದರೂ ಅವುಗಳು ಸಂಶಯಾಸ್ಪದವಾಗಿಯೂ ಅಸ್ಪಷ್ಟವಾಗಿಯೂ ಹಾಗೂ ಪುನಃ ವಿವರಣೆಯನ್ನು ಕೇಳುವಂಥಹವುಗಳಾಗಿಯೂ ಇರುವುದರಿಂದ ೧೯೭೭ ನೇ ಅಕ್ಟೋಬರ್‌ನಲ್ಲಿ ಸವಿಸ್ತಾರವಾದ ಹಾಗೂ ಸ್ಪಷ್ಟ

ಮಾಹಿತಿಯನ್ನು ಕಮಿಷನರ್‌ರವರು ಸರ್ಕಾರವನ್ನು ಕೇಳಿದ್ದಾರೆ. ಆದರೆ ಈವರೆಗೆ ಸರಕಾರ ಸ್ಪಷ್ಟ ಮಾಹಿತಿಯನ್ನು ಒದಗಿಸಿಲ್ಲ. ೭ ಮತ್ತು ೮ ನೇ ತರಗತಿಯಲ್ಲಿ ಓದುವ ಪಂಜಾಬಿ, ಉರ್ದು, ಮಾಧ್ಯಮದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಒದಗಿ ಸುತ್ತಿಲ್ಲ. ಹೆಚ್ಚುವರಿ ಭಾಷೆಯಾಗಿ ೧ ರಿಂದ ೫ ನೇ ತರಗತಿಯವರೆಗೆ ಓದುವ ಉರ್ದು ವಿದ್ಯಾರ್ಥಿಗಳು 'ಜಮಿಯಾ ಮಿಲಿಯಾ' ಡೆಲ್ಲಿ ಮತ್ತು ೧ ರಿಂದ ೪ ನೇ ತರಗತಿಯವರೆಗೆ ಓದುವ ಪಂಜಾಬಿ ವಿದ್ಯಾರ್ಥಿಗಳು ಚಂದೀಘಡದ ಪಂಜಾಬ್ ಶೈಕ್ಷಣಿಕ ಬೋರ್ಡಿನಿಂದ ಪಠ್ಯಪುಸ್ತಕಗಳನ್ನು ತರಿಸಿಕೊಳ್ಳಬೇಕಾಗಿದೆ. ಎಲ್ಲಿ ಅಲ್ಪ ಭಾಷಾಸಂಖ್ಯಾತರು ಶೇಕಡ ೧೫ ರಿಂದ ೨೦ ರ ವರೆಗೆ ಇರುವರೋ ಅಲ್ಲಿ ಸರ್ಕಾರಿ ಮಹತ್ವದ ಕಾನೂನು ಹಾಗೂ ತಿಳುವಳಿಕೆಗಳನ್ನು ಅವರವರ ಮಾತೃಭಾಷೆಯಲ್ಲಿಯೇ ನೀಡಬೇಕೆಂದು ಸರ್ಕಾರ ನೆಪಕ್ಕೆ ಮಾತ್ರ ಆದೇಶ ನೀಡಿದ್ದು, ಕಾರ್ಯಗತಗೊಳಿಸಿದ ಬಗ್ಗೆ ಯಾವ ಮಾಹಿತಿಯನ್ನು ಒದಗಿಸಿಲ್ಲ. ಹಲಕೆಲವುಕಡೆ ಮಾತ್ರ ತೋರಿಕೆಗಾಗಿ ಪಂಜಾಬಿ ಮತ್ತು ಉರ್ದು ಭಾಷೆಯ ಪ್ರಕಟಣೆಗಳು ಗೋಚರಿಸುತ್ತವೆ.

ಡಿಲ್ಲಿಯ ಲೋಕಸೇವಾ ಆಯೋಗದ ಮೂಲಕ ನೌಕರಿ ಸೇರಬೇಕೆನ್ನುವವರಿಗೆ ಹಿಂದಿ ಕಡ್ಡಾಯವಾಗಿ ಬರಲೇಬೇಕು. ಪೂರ್ವಭಾವಿಯಾಗಿ, ನೌಕರಿ ಸೇರುವವರಿಗೆ ರಾಜ್ಯಭಾಷೆ ಬರಲೇಬೇಕೆಂಬ ನಿಬಂಧನೆಯನ್ನು ೧೯೬೧ ರ ಮುಖ್ಯಮಂತ್ರಿಗಳ ಸಭೆ ಕಿತ್ತು ಹಾಕಿದ್ದರೂ, ಈ ನಿರ್ಣಯವನ್ನು ಹರಿಯಾಣಾ ಸರ್ಕಾರ ಒಪ್ಪಿಕೊಂಡಿಲ್ಲ. ಯಾಕೆಂದರೆ ಇಡೀ ರಾಜ್ಯದಲ್ಲಿ ಹಿಂದೀ ಭಾಷೆಯೇ ಬಳಕೆಯಲ್ಲಿರುವುದರಿಂದ ಹಿಂದೀ ಭಾಷೆ ಬಾರದಿದ್ದವರನ್ನು ಸರ್ಕಾರಿ ಹುದ್ದೆಗಳಿಗೆ ನೇಮಿಸಿಕೊಂಡರೆ ಆಡಳಿತೆಗೆ ತೊಂದರೆಯಾಗುವುದೆಂದು ಹರಿಯಾಣ ಸರ್ಕಾರ ತೀರ್ಮಾನಿಸಿದೆ.

೨. ಹಿಮಾಚಲ ಪ್ರದೇಶ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೩೪,೬೦,೪೩೪

ಇಲ್ಲಿಯೂ ಕೂಡಾ ಭಾಷಾಅಲ್ಪಸಂಖ್ಯಾತರಿಗೆ ಒದಗಿಸಿರುವ ಶಿಕ್ಷಣ ಸೌಲಭ್ಯ ಗಳ ಬಗೆಗೆ ೧೯೭೪–೭೫ರಿಂದ ಯಾವುದೇ ರೀತಿಯ ಮಾಹಿತಿಯನ್ನು ಸರ್ಕಾರ ಕಮಿಷ ನರ್ ಅವರಿಗೆ ಒದಗಿಸಿಲ್ಲ.

ಈ ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿರುವ ಭೋಟಿ, ನೇಪಾಳಿ, ಪಹಾರಿ ಅಲ್ಲದ ಉಪಭಾಷೆಗಳಾದ ಶಿರ್ಮ್ಮಾಯುರಿ, ಕಿಯುಂಥರಿ, ಮಂಡ್ಯಾಲಿ, ಕಿನಾಯುರಿ, ಚಂಬಿಯಾಲಿ ಇತ್ಯಾದಿ ಭಾಷೆಗಳನ್ನಾಡುವ ಜನರಿಗೆ ಆಯಾ ಸ್ಥಳೀಯ ಭಾಷೆಯುಳ್ಳ ಶಿಕ್ಷಕರನ್ನು ನೇಮಿಸಿರುವುದಾಗಿ ಸರ್ಕಾರದ ಆದೇಶವಿದೆಯೇ ವಿನಃ ಈ ಆದೇಶವನ್ನು ಕಾರ್ಯಗತ ಗೊಳಿಸಿದ ಬಗ್ಗೆ ಯಾವ ವಿವರಣೆಯೂ ದೊರೆಯುತ್ತಿಲ್ಲ.

ಶಾಲೆಗಳ ಶಿಕ್ಷಕರ ಹಾಗೂ ಸೌಲಭ್ಯಗಳ ಬಗ್ಗೆ ನೇಪಾಳಿ ಗೋರ್ಖಾ ಸಂಸ್ಥೆ ಯವರು ತಮ್ಮ ಅಹವಾಲುಗಳ ಬಗ್ಗೆ ಸರ್ಕಾರಕ್ಕೆ ಅನೇಕ ಬೇಡಿಕೆಗಳನ್ನು ಸಲ್ಲಿ ಸಿದ್ದರೂ ಈ ವರೆಗೂ ಅವು ಈಡೇರಿರುವುದಿಲ್ಲ. ಸರ್ಕಾರಿ ಮಹತ್ವದ ತಿಳಿವಳಿಕೆ ಗಳನ್ನು ಭಾಷಾ ಅಲ್ಪ ಸಂಖ್ಯಾತರ ಭಾಷೆಗಳಲ್ಲಿ ಪ್ರಕಟಿಸಲಾಗುತ್ತಿಲ್ಲ. ಯಾಕೆಂದರೆ ಈ ರಾಜ್ಯದಲ್ಲಿ ೧೫ ರಿಂದ ೨೦ ಪ್ರಮಾಣದವರೆಗಿರುವ ಭಾಷಾ ಅಲ್ಪ ಸಂಖ್ಯಾತರ ಜನಾಂಗವೇ ಇಲ್ಲವೆಂದು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಸರ್ಕಾರಿ ನೌಕರಿಯನ್ನು ಲೋಕಸೇವಾ ಆಯೋಗದ ಮೂಲಕ ಸೇರಬೇಕೆನ್ನು ವವರಿಗೆ ಹಿಂದೀ ಭಾಷೆ ಕಡ್ಡಾಯವಾಗಿ ಬರಬೇಕೆಂದು ಸರ್ಕಾರ ತೀರ್ಮಾನಿಸಿದೆ. ಈ ಕ್ರಮವು ೧೯೬೧ರ ಮುಖ್ಯಮಂತ್ರಿಗಳ ತೀರ್ಮಾನವನ್ನು ಧಿಕ್ಕರಿಸಿದಂತಲ್ಲವೆ?

೩. ಜಮ್ಮು ಮತ್ತು ಕಾಶ್ಮೀರ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೪೬,೧೬,೬೩೨

ಇಲ್ಲಿ ಬಹುಸಂಖ್ಯಾತರ ಭಾಷೆ ಕಾಶ್ಮೀರಿಯಾಗಿದ್ದು, ನೂರಕ್ಕೆ ೫೨ಕ್ಕೂ ಹೆಚ್ಚು ಜನರು ಆಡುವ ಭಾಷೆಯದು. ದೋಗ್ರಿ, ಲಡಾಕಿ ಭಾಷೆಗಳು ಕೂಡಾ ಹೆಚ್ಚು ಪ್ರಚಲಿತವಿದ್ದರೂ ಆ ಭಾಷೆಗಳಿಗೆ ಈ ವರೆಗೆ ವ್ಯಾಕರಣ ಹಾಗೂ ಲಿಪಿಯ ಆಶ್ರಯ ವಿಲ್ಲದ ಕಾರಣ ಆ ಮೂರೂ ಭಾಷೆಗಳು ಕಾಶ್ಮೀರದ ಬಹು ಸಂಖ್ಯಾತರು ಆಡುವ ಭಾಷೆಗಳಾಗಿದ್ದರೂ ತಮ್ಮ ಮೂಲ ಅಸ್ತಿತ್ವವನ್ನೇ ಕಳೆದು ಕೊಂಡಿವೆ. ಅಲ್ಪ ಭಾಷಾ ಸಂಖ್ಯಾತರ ಜೊತೆ ಈ ಬಹು ಭಾಷಾ ಸಂಖ್ಯಾತರ ತಲೆಯ ಮೇಲೂ ಲೋಕ ಸೇವಾ ಆಯೋಗದ ಪರೀಕ್ಷೆಗಳಿಗೆಲ್ಲ ಇಂಗ್ಲೀಷನ್ನೇ ಹೇರಲಾಗಿದೆ.

೧೯೬೧ರ ಮುಖ್ಯ ಮಂತ್ರಿಗಳ ಸಮ್ಮೇಳನದ ತೀರ್ಮಾನದ ರೀತ್ಯ ರಾಜ್ಯದಲ್ಲಿ ಭಾಷಾ ಅಲ್ಪ ಸಂಖ್ಯಾತರಿಗೆ ರಕ್ಷಣೆ ನೀಡುವ ಬಗ್ಗೆ ಹಾಗೂ ಶೈಕ್ಷಣಿಕ ಸೌಲಭ್ಯವನ್ನು ಪ್ರಾಥಮಿಕ ಹಂತದಲ್ಲಿ ಅವರವರ ಮಾತೃ ಭಾಷೆಯಲ್ಲಿ ನೀಡುವ ಬಗ್ಗೆ ಯಾವುದೇ ಈ ರೀತಿಯ ಸರ್ಕಾರಿ ಆದೇಶವನ್ನೂ ಕೂಡಾ ಹೊರಡಿಸಿಲ್ಲ. ಆದರೂ ಜಮ್ಮು-ಕಾಶ್ಮೀರ ರಾಜ್ಯವು ಮಾಧ್ಯಮಿಕ ಹಂತದ ಶಿಕ್ಷಣ ರಂಗದಲ್ಲಿ ಇಂಗ್ಲೀಷ, ಹಿಂದಿ, ಉರ್ದು ಪಂಜಾಬಿ ಬಾಷೆಗಳನ್ನು ಶೈಕ್ಷಣಿಕ ಮಾಧ್ಯಮವನ್ನಾಗಿ ಬಳಸಲಾಗುತ್ತಿದೆ ಎಂದು ತಿಳಿಸಿದೆ.

ಈ ರಾಜ್ಯದಲ್ಲಿ ಈವರೆಗೆ ತ್ರಿಭಾಷಾ ಸೂತ್ರವನ್ನು ಕಾರ್ಯಾಚರಣೆಗೆ ತರುವ ಬಗ್ಗೆ ಯಾವುದೇ ರೀತಿಯ ಸರಕಾರಿ ಆಜ್ಞೆಯನ್ನು ಹೊರಡಿಸಿಲ್ಲ, ಈ ಸೂತ್ರವನ್ನು ಜಾರಿಗೊಳಿಸುವ ಬಗ್ಗೆ ಆಲೋಚನೆಯಲ್ಲಿದೆ ಎಂದು ಕಮೀಶನರವರ ೧೯ ನೇ ವರದಿ ಯಿಂದ ತಿಳಿದು ಬರುತ್ತದೆ.

ಭಾಷಾಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅವರವರ ಮಾತೃಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸಿಲ್ಲ. ಇಷ್ಟೇ ಅಲ್ಲ ಭಾಷಾಅಲ್ಪಸಂಖ್ಯಾತರು ೧೫ ರಿಂದ ೨೦ ಪ್ರಮಾಣದಲ್ಲಿ ಎಲ್ಲಿ ವಾಸಿಸಿರುವರೋ, ಅವರಿಗೆ ಅವರವರ ಮಾತೃಭಾಷೆ ಯಲ್ಲಿ ಸರಕಾರದ ಮಹತ್ವದ ಕಾನೂನು ಹಾಗೂ ತಿಳುವಳಿಕೆಗಳನ್ನು ನೀಡುವ ಬಗ್ಗೆ ಯಾವುದೇ ಕ್ರಮವನ್ನು ಕೈಕೊಂಡಿಲ್ಲ.

೪. ಪಂಜಾಬ್

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೧,೩೫, ೫೧,೦೬೦.

ಈ ರಾಜ್ಯವು ೧೯೬೬ ರಲ್ಲಿ ಪುನರ್ವಿಂಗಡಣೆಗೊಂಡು ನಿರ್ಮಾಣವಾದ ನಂತರ ದ್ವಿಭಾಷಾ ರಾಜ್ಯವಾಗಿ ಪರಿವರ್ತನೆಗೊಂಡುದರಿಂದ ಇಲ್ಲಿ ಭಾಷಾ ಅಲ್ಪ ಸಂಖ್ಯಾತರಿಗೆ ಶೈಕ್ಷಣಿಕ ಸೌಲಭ್ಯವನ್ನಾಗಲಿ ಹಾಗೂ ಇತರ ಪ್ರತ್ಯೇಕ ಅನುಕೂಲತೆಗಳನ್ನಾಗಲಿ ಮಾಡುವ ಅಗತ್ಯವಿಲ್ಲ. ಆದುದರಿಂದ ಭಾಷಾಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ ತೆಗೆದುಕೊಂಡಿರುವ ಅಖಿಲಭಾರತ ತೀರ್ಮಾನವು ನಮ್ಮ ರಾಜ್ಯಕ್ಕೆ ಅನ್ವಯಿಸುವುದಿಲ್ಲ. ಇಲ್ಲಿ ಜನಸಂಖ್ಯೆಯ ೭೯.೬ ಪ್ರಮಾಣದಲ್ಲಿ ಪಂಜಾಬಿ ಮಾತನಾಡುವವರಿದ್ದರೆ ೧೯.೯ ಪ್ರಮಾಣದಲ್ಲಿ ಹಿಂದೀ ಭಾಷೆಯವರಿದ್ದಾರೆ. ಆ ಕಾರಣದಿಂದ ಈ ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಪಂಜಾಬಿ ಭಾಷಾಮಾಧ್ಯಮದ ಶಿಕ್ಷಣವನ್ನು ಅಳವಡಿಸಲಾಗಿದೆ. ಆದರೆ ೪ ರಿಂದ ೧೧ ನೇ ತರಗತಿಯವರೆಗೆ ಹಿಂದೀ ಭಾಷೆಯನ್ನು ಎಲ್ಲ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಲಿಯಲೇಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಈ ಕಾನೂನು ಅನ್ವಯಿಸುವುದಿಲ್ಲ. ಈ ಕಾರಣಕ್ಕಾಗಿಯೇ ೧೯೭೩–೭೪ ರಿಂದ ಭಾಷಾಅಲ್ಪಸಂಖ್ಯಾತರಿಗೆ ನೀಡಿದ ಶಿಕ್ಷಣ ಸೌಲಭ್ಯದ ಬಗ್ಗೆ ಸರ್ಕಾರ ಯಾವುದೇ ಮಾಹಿತಿಯನ್ನು ಸಿದ್ಧಪಡಿಸಿಲ್ಲ. ಇತರ ಭಾಷಾಅಲ್ಪಸಂಖ್ಯಾತರೊಂದಿಗೆ ಹಿಂದಿ, ಉರ್ದು ಭಾಷಾ ಶಿಕ್ಷಣ ಸಂಸ್ಥೆಗಳಿಗೂ ಕೂಡಾ ಶೈಕ್ಷಣಿಕ ಸೌಲಭ್ಯವನ್ನು ಒದಗಿಸದೇ ಸರ್ಕಾರ ತೊಂದರೆ ಕೊಡುತ್ತಿದೆ. ಎಂದು ಅನೇಕ ದೂರುಗಳನ್ನು ಮಾಡಿವೆ. ಪಂಜಾಬಿ ಭಾಷೆಯೇ ಈ ರಾಜ್ಯದ ಏಕೈಕ ಕಡ್ಡಾಯ ಭಾಷೆಯಾಗಿರುವುದರಿಂದ ಇತರ ಭಾಷಾಅಲ್ಪಸಂಖ್ಯಾತರ ದೂರುಗಳಿಗೆ ಸರ್ಕಾರ ಗಮನವನ್ನು ಕೊಡುತ್ತಿಲ್ಲ. ರಾಜ್ಯದ ಜನರು ಯಾವ ಭಾಷೆಯಲ್ಲಿಯೇ ಆಗಲಿ ತಮ್ಮ ಬೇಡಿಕೆಗಳನ್ನು ಸಲ್ಲಿಸಬಹುದು. ಆದರೆ ಸರ್ಕಾರದ ಉತ್ತರವು ಮಾತ್ರ ಪಂಜಾಬಿ, ಇಂಗ್ಲೀಷ್ ಅಥವಾ ಹಿಂದಿಯಲ್ಲಿ ಮಾತ್ರ ಕೊಡಲ್ಪಡುತ್ತದೆ. ಪಂಜಾಬಿ ಭಾಷಾ ಪ್ರಭುತ್ವವುಳ್ಳ ಸರ್ಕಾರಿ ನೌಕರರು ಹಿಂದೀ ಭಾಷಾಅಲ್ಪಸಂಖ್ಯಾತ ನೌಕರರ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದನ್ನು ತಡೆಗಟ್ಟಬೇಕೆಂದು ದೂರುಗಳನ್ನು ಇತ್ತಿದ್ದರೂ ಈ ದೂರುಗಳಲ್ಲಿ ಹುರುಳಿಲ್ಲವೆಂದು ಪಂಜಾಬ್ ಸರ್ಕಾರ ಉತ್ತರ ನೀಡಿದೆ. ಲೋಕಸೇವಾ ಆಯೋಗದ ಮೂಲಕ ನೌಕರಿ ಸೇರಬೇಕೆನ್ನುವವರಿಗೆ ಪಂಜಾಬಿ ಭಾಷೆಯು ಅತ್ಯಾವಶ್ಯಕವಾಗಿ ಬರಲೇಬೇಕು. ತಾಂತ್ರಿಕ ಸೇವಾ ವಿಭಾಗದಲ್ಲಿ ನೌಕರಿ ಸೇರಿದವರೂ ಕೂಡಾ ಆರು ತಿಂಗಳಲ್ಲಿಯೇ ರಾಜ್ಯಭಾಷೆಯ ಟೆಸ್ಟಿನಲ್ಲಿ ಪಾಸಾಗಲೇಬೇಕು.

ಈ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರ ಯಾವ ಭಾಷೆಯಲ್ಲಿಯೂ ಸರ್ಕಾರದ ಮಹತ್ವದ ಪ್ರಕಟಣೆಗಳನ್ನು ನೀಡುತ್ತಿಲ್ಲ. ಪಂಜಾಬಿಯೇ ಏಕೈಕ ಭಾಷೆ. ಹಿಂದೀ ಪ್ರಕಟಣೆಗಳು ಅಲ್ಲಲ್ಲಿ ಮಾತ್ರ.

೫. ರಾಜಸ್ಥಾನ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೨,೫೭,೬೫೮೭೬.

ಸಾಕಷ್ಟು ಗುಡ್ಡಗಾಡು ಜನರು ವಾಗ್ಡಿ (Wagdi) ಭಾಷೆಯನ್ನು ಮಾತೃ ಭಾಷೆಯಾಗಿ ಬಳಸುತ್ತಿದ್ದರೂ ಈವರೆಗೆ ಅವರ ಭಾಷಾ ಮಾಧ್ಯಮದಲ್ಲಿ ಶಿಕ್ಷಣವನ್ನು ಕೊಡುತ್ತಿಲ್ಲ. ರಾಜಸ್ಥಾನದ ದಡಬಾರಿ ಮತ್ತು ಕೋಟಾ ಜಿಲ್ಲೆಯ ಶಾಸ್ತ್ರಿನಗರದಲ್ಲಿ ಬಹುಸಂಖ್ಯೆಯಲ್ಲಿ ಸಿಂಧೀ ಕುಟುಂಬಗಳು ಒಂದು ಕಾಲೋನಿಯನ್ನೇ ಮಾಡಿಕೊಂಡು ವಾಸಿಸಿದ್ದರೂ ಅವರಿಗಾಗಿ ಸಿಂಧೀ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆಯಿಲ್ಲ. ಹಿಂದಿಯನ್ನೇ ಅವರ ಮೇಲೆ ಒತ್ತಾಯವಾಗಿ ಹೇರಲಾಗಿದೆ. ಇಲ್ಲಿಯೂ ಕೂಡ ಹಿಂದಿಯನ್ನು ಹೊರತುಪಡಿಸಿದರೆ ಬೇರೆ ಯಾವ ಭಾಷೆಗಳಿಗೂ ಪ್ರಧಾನ್ಯತೆ ಇಲ್ಲ.

೧೭೧ ಪ್ರಾಥಮಿಕ ಹಾಗೂ ಕೇವಲ ೨೨ ಭಾಷಾಅಲ್ಪಸಂಖ್ಯಾತರ ಮಾಧ್ಯಮಿಕ ಶಾಲೆಗಳಿದ್ದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ೩೬,೬೨೦ ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ೮೦೧ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಇನ್ನುಳಿದ ಭಾಷೆಗಳಾದ ಗುಜರಾತಿ, ಪಂಜಾಬಿ, ಸಿಂಧಿ, ಉರ್ದು ಭಾಷೆಗಳಿಗೆ ಯಾವುದೇ ರೀತಿಯ ಶಿಕ್ಷಣ ಸೌಲಭ್ಯವನ್ನು ಒದಗಿಸಿಲ್ಲ.

ಭಾಷಾಅಲ್ಪಸಂಖ್ಯಾತರಿಗೆ ಪ್ರಾಥಮಿಕ ಹಂತದಲ್ಲಿ ಅವರವರ ಮಾತೃ ಭಾಷೆಯಲ್ಲಿ ಶಿಕ್ಷಣವನ್ನು ಒದಗಿಸುವ ನೀತಿಯನ್ನು ಒಪ್ಪಿಕೊಂಡಿದ್ದರೂ ಕಾರ್ಯಾಚರಣೆಗೆ ತಂದಿರುವುದಿಲ್ಲ.

ಭಾಷಾಅಲ್ಪಸಂಖ್ಯಾತರಿಗೆ ಪಠ್ಯಪುಸ್ತಕ, ತರಬೇತಿ ಪಡೆದ ಶಿಕ್ಷಕರ ಸೌಲಭ್ಯ ಹಾಗೂ ಅಲ್ಪಸಂಖ್ಯಾತರು ೧೫ ಪ್ರಮಾಣಕ್ಕಿಂತ ಹೆಚ್ಚಿಗೆ ವಾಸಿಸಿರುವ ಭಾಗಗಳಲ್ಲಿ ಸರಕಾರಿ ಪ್ರಕಟಣೆಗಳನ್ನು ಅವರವರ ಮಾತೃ ಭಾಷೆಗಳಲ್ಲಿ ಒದಗಿಸುವ ನೀತಿಯನ್ನು ಅನುಸರಿಸಿರುವುದಿಲ್ಲ. ಹಿಂದೀ ಭಾಷೆ ಬಾರದಿದ್ದವರಿಗೆ ಸರ್ಕಾರಿ ನೌಕರಿ ಸೇರುವ ಅವಕಾಶವೇ ಇಲ್ಲ.

೬. ಚಂದೀಘರ್

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೨,೫೭,೨೫೧.

೧೯೬೬ ಕ್ಕೆ ಮೊದಲು ರಾಜ್ಯ ಪುನರ್ರಚನೆಗೊಳ್ಳುವ ಪೂರ್ವದಲ್ಲಿದ್ದ ಶೈಕ್ಷಣಿಕ ಪದ್ಧತಿಯನ್ನೇ ಈಗಲೂ ಮುಂದುವರೆಸುತ್ತಿದ್ದಾರೆ. ಹಿಂದೀ ಮತ್ತು ಪಂಜಾಬಿ ಭಾಷೆಗಳನ್ನೇ ಮೊದಲ ಹಾಗೂ ಎರಡನೆಯ ಭಾಷೆಗಳೆಂದು ಆಯ್ದುಕೊಳ್ಳ ಬಹುದೇ ವಿನಃ ಸಂವಿಧಾನದ ರೀತ್ಯ ಭಾಷಾಅಲ್ಪಸಂಖ್ಯಾತರ ಇತರ ಭಾಷೆಗಳಿಗೆ ಈ ವರೆಗೆ ಅಲ್ಲಿ ಮಾನ್ಯತೆ ನೀಡಿಲ್ಲ. ಕಮಿಷನರವರು ಆದೇಶವಿತ್ತಿದ್ದರೂ ಸರಕಾರ ಗಮನಕ್ಕೆ ತೆಗೆದುಕೊಂಡಿಲ್ಲ.

ಈ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ೭೦ ಶಾಲೆಗಳಲ್ಲಿ ೫೧೪೧ ವಿದ್ಯಾರ್ಥಿಗಳು ತಮಿಳು ಹಾಗೂ ಪಂಜಾಬಿ ಭಾಷೆಗಳಲ್ಲಿ ಓದುತ್ತಿದ್ದು ಪಂಜಾಬಿ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಸಂಖ್ಯೆ ತಿಳಿದು ಬಂದಿಲ್ಲ. ತಮಿಳು ಶಾಲೆಗಳಲ್ಲಿ ಇಬ್ಬರು ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಮಾಧ್ಯಮಿಕ ಶಿಕ್ಷಣದ ಅಂಕಿ-ಅಂಶಗಳು ದೊರೆತಿಲ್ಲ.

ತ್ರಿಭಾಷಾ ಸೂತ್ರದ ಅನ್ವಯ ಭಾಷಾಅಲ್ಪಸಂಖ್ಯಾತರ ಭಾಷೆಯಲ್ಲೂ ನಿಗದಿ ಪಡಿಸಿದ ಪ್ರಮಾಣದ ವಿದ್ಯಾರ್ಥಿಗಳು ದೊರೆತರೆ, ಅವರ ಮಾತೃಭಾಷೆಯಲ್ಲೂ ಶಿಕ್ಷಣ ನೀಡ ಬೇಕೆಂದು ಕಮೀಶನರವರು ಸೂಚಿಸಿದ್ದಾರೆ. ರಾಜ್ಯ ಸರಕಾರ ಈ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ. ೧೯೭೬ ನೇ ಡಿಶೆಂಬರ್ ತಿಂಗಳಲ್ಲಿ ಅಸಿಸ್ಟಂಟ ಕಮೀಶನವರು ಚಂದೀಘರ್‌ಗೆ ಬೇಟಿಯನ್ನಿತ್ತಾಗ ತಮಿಳು ಮಾಧ್ಯಮದ ಶಾಲೆಯೊಂದನ್ನು ಸಂದರ್ಶಿಸಿದರು. ಆಗ ಅಲ್ಲಿ ಪೀಠೋಪಕರಣಗಳ, ಕರಿಹಲಗೆಗಳ, ಪಟಗಳ ಕೊರತೆಯಿದ್ದು ದನ್ನು ಗಮನಿಸಿ, ಸರಿಯಾದ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದರು. ಆಗ ಆಡಳಿತ ಗಾರರು ಇತರ ಶಾಲೆಗಳಿಗೆ ಒದಗಿಸಿದಂತೆ ಈ ಶಾಲೆಗೂ ಸಲಕರಣೆಗಳನ್ನು ಒದಗಿಸಿದ್ದೇವೆ. ಎಂದು ಉತ್ತರ ಕೊಟ್ಟರು. ಈ ರಾಜ್ಯದಲ್ಲಿ ಪಠ್ಯಪುಸ್ತಕಗಳ ಹಾಗೂ ಶಿಕ್ಷಕರ ಕೊರತೆ ಇರುವ ಬಗ್ಗೆ ಯಾವುದೇ ವರದಿಯನ್ನು ಸಲ್ಲಿಸಿಲ್ಲ. ಇಂಗ್ಲೀಷಭಾಷೆ ಈ ರಾಜ್ಯದ ಆಡಳಿತ ಭಾಷೆಯಾಗಿಯೇ ಮುಂದುವರೆದಿದೆ. ಸರಕಾರದ ಮಹತ್ವದ ಕಾನೂನು ಹಾಗೂ ತಿಳುವಳಿಕೆಗಳು ಹಿಂದಿ ಮತ್ತು ಪಂಜಾಬಿ ಭಾಷೆಗಳಲ್ಲಿ ಪ್ರಕಟವಾಗುತ್ತಿವೆ. ಭಾಷಾಅಲ್ಪಸಂಖ್ಯಾತರ ಭಾಷೆಗಳಲ್ಲಿ ಯಾವ ಪ್ರಕಟನೆಗಳೂ ಇಲ್ಲ.

ದೆಹಲಿ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೪೦,೬೫,೬೯೮

ಭಾರತದ ರಾಜಧಾನಿಯಾದ ಡೆಲ್ಲಿಯಲ್ಲಿ ೧೯೭೧ರ ಜನಗಣತಿಯ ರೀತ್ಯ ೪೦,೬೫,೬೯೮ ಜನಸಂಖ್ಯೆ ಇದೆ. ಇಲ್ಲಿ ೭೨.೨೭ ಪ್ರಮಾಣದಲ್ಲಿ ಹಿಂದೀ ಮಾತನಾಡುವವರಿದ್ದು ಪಂಜಾಬಿ, ಉರ್ದು, ಬೆಂಗಾಲಿ, ಭಾಷೆಗಳನ್ನಾಡುವವರೂ ಕೂಡಾ ಗಣನೀಯ ಪ್ರಮಾಣದಲ್ಲಿದ್ದಾರೆ. ಇಲ್ಲಿರುವ ಒಟ್ಟು ೧೫೦೦ ಸರಕಾರಿ ಶಾಲೆಗಳಲ್ಲಿ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಪ್ರಮಾಣಕ್ಕನುಸಾರವಾಗಿ ಪ್ರವೇಶವಕಾಶ ನೀಡಲಾಗಿದೆ.

೧೯೬೧ರ ಮುಖ್ಯ ಮಂತ್ರಿಗಳ ಸಭೆಯ ತೀರ್ಮಾನವನ್ನು ಕಾರ್ಯಗತಗೊಳಿಸುವ ಬಗ್ಗೆಯೂ ಸರ್ಕಾರಿ ಆದೇಶವನ್ನು ನೀಡಲಾಗಿದೆ. ೧೯೭೭-೭೮ರ ಅಂಕಿ ಅಂಶಗಳ ರೀತ್ಯ ದೆಹಲಿಯಲ್ಲಿ ೧೦ ಬಂಗಾಳಿ ಮಾಧ್ಯಮಿಕ ಶಾಲೆಗಳಿದ್ದು, ಶಾಲೆಯಲ್ಲಿ ಓದುವ ಹಾಗೂ ಬೇರೆ ಭಾಷೆಗಳ ಶಾಲೆಗಳ ತರಗತಿಗಳಲ್ಲಿ ಐಚ್ಛಿಕ ಭಾಷೆಯಾಗಿ ಬಂಗಾಲಿ ಭಾಷೆಯಲ್ಲಿ ಓದುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೪೬೯೧ ಇದ್ದು, ೧೨೩ ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಗುಜರಾತಿ ಭಾಷಾ ವಿಷಯವನ್ನು ತೆಗೆದುಕೊಂಡು ಓದುತ್ತಿರುವ ೪೨೨ ವಿದ್ಯಾರ್ಥಿಗಳಿದ್ದು, ೫ ಜನ ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಅದೇ ರೀತಿ ೪೧೩ ವಿದ್ಯಾರ್ಥಿಗಳು ಮಲೆಯಾಳಿ ಭಾಷಾ ವಿಷಯವನ್ನು ತೆಗೆದುಕೊಂಡು ಓದುತ್ತಿದ್ದು, ಮೂರು ಜನ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಅದರಂತೆಯೇ ಪಂಜಾಬಿಯ ಆರು ಶಾಲೆಗಳಲ್ಲಿ ೨೩.೨೮೭ ವಿದ್ಯಾರ್ಥಿಗಳು(ಪಂಜಾಬಿ ಭಾಷಾ ವಿಷಯವನ್ನು ತೆಗೆದುಕೊಂಡವರನ್ನು ಒಳಗೊಂಡು) ಓದುತ್ತಿದ್ದು. ೩೨೬ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ೫ ಸಿಂಧೀ ಶಾಲೆಗಳಲ್ಲಿ ೩೮೨ ವಿದ್ಯಾರ್ಥಿಗಳ ಭಾಷಾವಿಷಯವನ್ನು ತೆಗೆದುಕೊಂಡು ಓದುವ ೪೦೦ ವಿದ್ಯಾರ್ಥಿಗಳು, ಒಟ್ಟು ಸಿಂಧೀ ಭಾಷೆಯಲ್ಲಿ ೭೮೨ ವಿದ್ಯಾರ್ಥಿಗಳು ಓದುತ್ತಿದ್ದು, ೩೭ ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಅದರಂತೆಯೇ ತಮಿಳು ಭಾಷಾ ವಿಷಯವನ್ನು ತೆಗೆದುಕೊಂಡು ಇತರ ಶಾಲೆಗಳಲ್ಲಿ ೨೪೫೮ ವಿದ್ಯಾರ್ಥಿಗಳು ಓದುತ್ತಿದ್ದು ೧೪ ತಮಿಳು ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ತೆಲುಗು ಭಾಷೆಯನ್ನು ತೆಗೆದುಕೊಂಡು ಇತರೇ ಶಾಲೆಗಳಲ್ಲಿ ೨೭೬ ತೆಲುಗು ವಿದ್ಯಾರ್ಥಿಗಳು ಓದುತಿದ್ದು ೫ ಜನ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ.ಮತ್ತು ೨೦ ಉರ್ದು ಶಾಲೆಗಳಲ್ಲಿ ಹಾಗೂ ಇತರೆ ಶಾಲೆಗಳಲ್ಲಿ ಉರ್ದು ಭಾಷೆಯನ್ನು ತೆಗೆದುಕೊಂಡು ಒಟ್ಟು ೯೮೧೯ ವಿಧ್ಯಾರ್ಥಿಗಳು ಓದುತಿದ್ದು, ೩೦೩ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಇನ್ನು ದೆಹಲಿಯ ಪ್ರಾಥಮಿಕ ಶಾಲೆಗಳಲ್ಲಿ ೨೦ ಬಂಗಾಳಿ ಶಾಲೆಗಳು, ಒಂದು ಗುಜರಾತಿ ಶಾಲೆ,

ಒಂದು ಕನ್ನಡ ಶಾಲೆ, ಒಂದು ಮಲೆಯಾಳಿ ಶಾಲೆ, ೧೮ ಪಂಜಾಬಿ ಶಾಲೆಗಳು, ೩
ಸಿಂಧೀ ಶಾಲೆಗಳು, ೧೨ ತಮಿಳು ಶಾಲೆಗಳು, ೨ ತೆಲುಗು ಶಾಲೆಗಳು, ೭೧ ಉರ್ದು
ಶಾಲೆಗಳು ಹೀಗೆ ಒಟ್ಟು ೧೭೩ ಭಾಷಾ ಅಲ್ಪ ಸಂಖ್ಯಾತರ ಪ್ರಾಥಮಿಕ ಶಾಲೆಗಳಿವೆ.
ಅವುಗಳಲ್ಲಿ, ೪೩,೨೫೮ ವಿದ್ಯಾರ್ಥಿಗಳು ಓದುತ್ತಿದ್ದು, ೧೨೪೪ ಪ್ರಾಥಮಿಕ ಶಿಕ್ಷಕರು
ಕೆಲಸಮಾಡುತ್ತಿದ್ದಾರೆ. ಪ್ರಾಮುಖ್ಯವಾಗಿ ಉರ್ದು ಭಾಷೆಯಲ್ಲಿ ೧೯೯೪೦ ವಿದ್ಯಾ
ರ್ಥಿಗಳು ಓದುತ್ತಿದ್ದರೆ, ಪಂಜಾಬಿ ಭಾಷೆಯಲ್ಲಿ ೪೯೮೦ ವಿದ್ಯಾರ್ಥಿಗಳು ಓದುತಿದ್ದಾರೆ.
ತದನಂತರ ೩೨೬೨ ವಿದ್ಯಾರ್ಥಿಗಳು ಸಿಂಧೀ ಭಾಷೆಯಲ್ಲಿ ಓದುತ್ತಿದ್ದರೆ, ೧೯೬
ವಿದ್ಯಾರ್ಥಿಗಳು ಬಂಗಾಲಿ ಭಾಷೆಯಲ್ಲಿ ಓದುತ್ತಿದ್ದಾರೆ. ಮರಾಠಿ ಭಾಷೆಯ ವಿಷಯ
ದಲ್ಲಿ ಯಾವ ಅಂಕಿ-ಅಂಶಗಳೂ ದೊರೆಯುತ್ತಿಲ್ಲ. ದೆಹಲಿಯ ಒಂದು ಕನ್ನಡ
ಶಾಲೆಯಲ್ಲಿ ೩೧೩ ಕನ್ನಡ ವಿದ್ಯಾರ್ಥಿಗಳು ಓದುತ್ತಿದ್ದು, ೭ ಜನ ಶಿಕ್ಷಕರು ಕೆಲಸ
ಮಾಡುತ್ತಿದ್ದಾರೆ. ಹೀಗೆ ಭಾಷಾ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ ೧೬೩
ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು, ೭೦೭೮೪ ವಿದ್ಯಾರ್ಥಿಗಳು, ೧೬೩೦
ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಮೇಲಿನ ಅಂಕಿ ಅಂಶಗಳನ್ನು ಹೊರತು ಪಡಿ
ರಾಜಧಾನಿಯಲ್ಲಿ ಬಂದು ನೆಲಸಿರುವ ಅಸಂಖ್ಯ ಭಾಷಾಅಲ್ಪ ಸಂಖ್ಯಾತರ ಶೈಕ್ಷ
ಣಿಕ ಸೌಲಭ್ಯದ ಬಗ್ಗೆ ಯಾವುದೇ ರೀತಿಯ ಅಂಕಿ ಅಂಶಗಳು ದೊರೆಯುತ್ತಿಲ್ಲದಿರು
ವುದು ಆಶ್ಚರ್ಯವಲ್ಲವೆ? ಭಾಷಾಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖ
ವಾಗುತ್ತಿರುವುದನ್ನು ಗಮನಿಸಿ, ಕಮೀಷನರ ಅವರು ದೆಹಲಿ ಆಡಳಿತೆಯ ಪ್ರಮುಖ
ರನ್ನು ಪ್ರಶ್ನಿಸಿದಾಗ, ಭಾಷಾಅಲ್ಪಸಂಖ್ಯಾತರ ಭಾಷಾ ಸೌಲಭ್ಯದ ಬೇಡಿಕೆಗಳನ್ನು
ನಾವು ತಿರಸ್ಕರಿಸಿಲ್ಲ. ಎಂದು ಉತ್ತರ ನೀಡಿದೆ.

ತ್ರಿಭಾಷಾ ಸೂತ್ರವನ್ನು ೮ನೇ ತರಗತಿಯವರೆಗೆ ಕಡ್ಡಾಯವಾಗಿ ವಿಧಿಸಿರುವುದ
ರಿಂದ ರಾಷ್ಟ್ರಭಾಷೆಯಾದ ಹಿಂದಿ, ಅಂತರಾಷ್ಟ್ರೀಯ ಭಾಷೆಯಾದ ಇಂಗ್ಲೀಷ್ ಮತ್ತು
ಸಂಸ್ಕೃತ ಅಥವಾ ಇವುಗಳ ಜೊತೆಗೆ ಅಲ್ಪ ಸಂಖ್ಯಾತರು ಅರ್ವಾಚೀನ ಭಾಷೆ
ಯೊಂದನ್ನು ಆಯ್ದುಕೊಳ್ಳಲು ಅವಕಾಶವಿದೆ. ದೆಹಲಿಯ ಶಾಲೆಯೊಂದರಲ್ಲಿ
೯ನೆಯ ತರಗತಿಯವರೆಗೆ ಪಂಜಾಬಿ ಭಾಷೆಯನ್ನು ಐಚ್ಛಿಕ ಭಾಷೆಯಾಗಿ ತೆಗೆದು
ಕೊಂಡು ಓದಿದ ವಿದ್ಯಾರ್ಥಿಗಳಿಗೆ ೧೦ನೆಯ ತರಗತಿಯಲ್ಲಿಯೂ ಅದೇ ಅವಕಾಶವನ್ನು
ನೀಡಬೇಕೆಂಬ ಬೇಡಿಕೆಯನ್ನು ಸಲ್ಲಿಸಿದ್ದರೂ, ಅದನ್ನು ಮಾನ್ಯಮಾಡಿಲ್ಲ. ೬,೭,೮
ಮತ್ತು ೧೦ನೇ ತರಗತಿಗಳ ವೇಳಾಪತ್ರಿಕೆಯಲ್ಲಿ ಪಂಜಾಬಿ ಕಲಿಸುವ ಅವಧಿಯನ್ನು
ನಿಗದಿ ಮಾಡಿಲ್ಲ. ಎಂದು ಸಲ್ಲಿಸಿದ ಪಂಜಾಬಿ ಮಾತನಾಡುವವರ ತಕರಾರನ್ನು ಮನ್ನಿಸಿ
ಆಗಸ್ಟ್ ೧೦, ೧೯೭೬ ರಿಂದೀಚೆಗೆ ತಂದ ಹೊಸ ವೇಳಾಪತ್ರಿಕೆಯಲ್ಲಿ ಹಿಂದಿನ ಲೋಪ
ದೋಷಗಳನ್ನು ಸರಿಪಡಿಸಲಾಗಿದೆ. ಡೆಲ್ಲಿಯ, ಪಂಜಾಬಿ ಶಿಕ್ಷಕರ ಸಂಘವು ಮಾದರಿಯ
ಭಾಷಾ ಪ್ರಶ್ನೆ ಪತ್ರಿಕೆಗಳನ್ನು ಪೂರೈಸಿ, ವಿದ್ಯಾರ್ಥಿಗಳಿಗೆ ಅನುಕೂಲವಾದ

ಟೆಸ್ಟಿನಲ್ಲಿ ಉತ್ತೀರ್ಣರಾಗಿ ಭಡ್ತಿ ದೊರಕಿಸಿಕೊಳ್ಳಬಾರದೆಂಬ ದುರುದ್ದೇಶವು ಇಲ್ಲಿ ಅಡಕವಾಗಿದೆ.

೧೯೬೦ ರಲ್ಲಿದ್ದ ಕಾಸರಗೋಡು ತಾಲೂಕಿನ ಹಾಗೂ ಕೇರಳ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರಾಗಿ ಮುಂದುವರೆಯುತ್ತಿರುವ ಕನ್ನಡಿಗರ ಸ್ಥಿತಿಯು, ಈಗ ಚಿಂತಾಜನಿಕವಾಗಿದೆ. ಕೋಯಿಮತ್ತೂರು ಜಿಲ್ಲೆಯ ಗೋಪಿಚೆಟ್ಟಿ ಪಾಳ್ಯದ ತಾಳವಾಡಿ ಫಿರ್ಕಾ, ಸೇಲಮ್ ಜಿಲ್ಲೆಯ ಹೊಸೂರು ತಾಲೂಕು, ಚಂದ್ರಗಿರಿ ಹಾಗೂ ಪಾಯಸ್ವಿನಿ ನದಿಯ ಪಶ್ಚಿಮ ಭಾಗದ ಕಾಸರಗೋಡು ತಾಲೂಕಿನ, ಬಹುಭಾಗ ದಲ್ಲಿ ೧೯೫೬ ರ ಪೂರ್ವದಲ್ಲಿ ನಡೆಸಲ್ಪಡುತ್ತಿದ್ದ ಕನ್ನಡ ಶಾಲೆಗಳಲ್ಲಿ ಮಲೆಯಾಳಿ ಶಿಕ್ಷಕರನ್ನು ನೇಮಿಸುತ್ತಿದ್ದಾರೆ. ಕನ್ನಡ ಭಾಷಾ ಮಾಧ್ಯಮದ ವಿಧ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡಲು, ಹೆಚ್ಚು ಪ್ರಮಾಣದಲ್ಲಿ ಮಲೆಯಾಳಿ ಭಾಷೆಯ ತರಗತಿಯ ವಿಭಾಗಗಳನ್ನು ನಿರ್ಮಿಸುತ್ತಿದ್ದಾರೆ. ಭಾರತದ ಭಾಷಾಅಲ್ಪಸಂಖ್ಯಾತ ಕಮಿಷನರವರ ವರದಿಯ ರೀತ್ಯ, ೧೯೭೫-೭೬ ರಲ್ಲಿ ೧೧೨ ಶಾಲೆಗಳು, ೧೩೪ ತರಗತಿಯ ವಿಭಾಗಗಳು ಇದ್ದು, ೪೧೪೭೩ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಯಲ್ಲಿಯೂ, ೫೬೩೬ ವಿದ್ಯಾರ್ಥಿಗಳು ಮಾಧ್ಯಮಿಕ ಶಾಲೆಯಲ್ಲಿಯೂ ಓದುತ್ತಿದ್ದು, ಒಟ್ಟು ೧೭೪೪ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಆಶ್ಚರ್ಯವೆಂದರೆ ೧೯೬೧-೬೨ ರಲ್ಲಿ ಕಣ್ಣಾನೂರು ಜಿಲ್ಲೆಯಲ್ಲಿ ೧೪೨ ಪ್ರಾರ್ಥಮಿಕ ಶಾಲೆಗಳು, ೧೩ ಮಾಧ್ಯಮಿಕ ಶಾಲೆಗಳು, ೨೪,೬೯೬ ವಿದ್ಯಾರ್ಥಿಗಳು ಓದುತ್ತಿದ್ದು ೧೨೬೦ ಶಿಕ್ಷಕರು ಕೆಲಸ ಮಾಡುತ್ತಿದ್ದರೆಂದು ಭಾಷಾ ಅಲ್ಪಸಂಖ್ಯಾತ ಕಮಿಷನರ್ ಅವರ ವರದಿಯಿಂದ ತಿಳಿದು ಬರುತ್ತದೆ. ಈ ದಾಖಲೆಗಳು ಈಗ ದೊರೆಯುತ್ತಿಲ್ಲ. ಇದಕ್ಕೆ ಕೇರಳ ಸರಕಾರದ ಉತ್ತರವೇನು ?

ಈ ರಾಜ್ಯದಲ್ಲಿ ಕನ್ನಡ ಭಾಷೆಯು ಇಳಿಮುಖವಾಗುತ್ತಿರುವ ಬಗ್ಗೆ ಹಾಗೂ ೧೯೭೭–೭೮ ರ ಭಾಷಾ ಅಲ್ಪಸಂಖ್ಯಾತರ ಶೈಕ್ಷಣಿಕ ಸೌಲಭ್ಯದಬಗ್ಗೆ ಹಾಗೂ ಶೇ.ಖಡ ೧೫ ಕ್ಕೂ ಮೇಲ್ಪಟ್ಟ ಭಾಷಾ ಅಲ್ಪಸಂಖ್ಯಾತರಿಗೆ ಅವರವರ ಭಾಷೆಯಲ್ಲಿಯೇ ಸರ್ಕಾರದ ಮಹತ್ವದ ತಿಳುವಳಿಕೆಗಳನ್ನು ನೀಡುತ್ತಿರುವ ಬಗ್ಗೆ ಕೇರಳ ಸರ್ಕಾರವು ಯಾವುದೇ ರೀತಿಯ ಅಂಕಿ–ಅಂಶಗಳನ್ನು ಒದಗಿಸಿಲ್ಲ. ಕಾಸರಗೋಡು ತಾಲೂಕಿನ ಚಂದ್ರಗಿರಿ ಮತ್ತು ಪಾಯಸ್ವಿನಿ ನದಿಯ ಪಶ್ಚಿಮ ಭಾಗವು ಎಂದಿದ್ದರೂ ಕರ್ನಾಟಕಕ್ಕೇ ಸೇರುವುದೆಂಬುದು ಕೇರಳ ಸರ್ಕಾರಕ್ಕೆ ಖಚಿತವಾಗಿದ್ದರೂ ಭಾಷಾ ದುರಭಿಮಾನದಿಂದ ಕನ್ನಡ ಮಾಧ್ಯಮದ ಸಿಕ್ಷಣ ಸೌಲಭ್ಯವನ್ನು ಒದಗಿಸುತ್ತಿಲ್ಲ.

ಸಂವಿಧಾನದ ೨೯, ೩೦, ೧೪೯, ೩೫೦ ಮತ್ತು ೩೫೦ ಎ. ವಿಧಿಪ್ರಕಾರ ನಡೆದುಕೊಳ್ಳದಿರುವ ಬಗ್ಗೆ ಕೇರಳ ಸರ್ಕಾರದ ಮೇಲೆ ಕೇಂದ್ರಸರ್ಕಾರವು ಯಾವ ಕ್ರಮ ಕೈಕೊಂಡಿದೆ?

ಮೇಲಿನ ಈ ಎಲ್ಲ ಕಾರಣಗಳಿಂದ ಅಚ್ಚ ಕನ್ನಡ ಪ್ರದೇಶವಾಗಿರುವ ಕಾಸರಗೋಡಿನ ಈ ಭಾಗವು ರಾಜ್ಯ ಪುನರ್ವಿಂಗಡಣೆಯ ಪೂರ್ವದಲ್ಲಿದ್ದಂತೆ ಪುನಃ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿಕೊಳ್ಳುವುದೆಂಬ ಖಚಿತ ನಿರ್ಣಯವಿರುವುದರಿಂದ, ಕೇರಳ ಸರ್ಕಾರವು ಈ ಭಾಗದ ಕನ್ನಡಿಗರ ಮೇಲೆ, ಮಲೆಯಾಳಿ ಭಾಷೆಯನ್ನು ಒತ್ತಾಯವಾಗಿ ಹೇರುತ್ತಲಿದೆ. ಕನ್ನಡಿಗರು ಭಾಷಾಅಲ್ಪಸಂಖ್ಯಾತರಾದ ಪ್ರದೇಶಗಳಲ್ಲಿ ಮಲೆಯಾಳಿ ಶಾಲೆಗಳಲ್ಲಿ ಪ್ರವೇಶವನ್ನು ದೊರಕಿಸಿಕೊಳ್ಳಬೇಕಾದರೆ, ಕೊನೆಯಪಕ್ಷ ೫೫ ವಿದ್ಯಾರ್ಥಿಗಳು ಬೇಕು ಎಂಬ ನಿಬಂಧನೆ ಇದ್ದರೆ, ಕನ್ನಡ ಶಾಲೆಗಳಲ್ಲಿ ಮಲೆಯಾಳಿ ಭಾಷೆಯ ೧೦ ವಿದ್ಯಾರ್ಥಿಗಳಿದ್ದರೆ ಸಾಕು, ಅವರಿಗೆ ಪ್ರವೇಶಾವಕಾಶವುಂಟು. ಈ ತಾರತಮ್ಯವನ್ನು ಪ್ರತಿಭಟಿಸಿ ಕಾಸರಗೋಡಿನ ಕರ್ನಾಟಕ ಕ್ರಾಂತೀಕರಣ ಸಮಿತಿ, ಕನ್ನಡ ಯುವಜನ ವಿದ್ಯಾರ್ಥಿ ಸಮ್ಮೇಳನ, ಕೇರಳದ ಭಾಷಾಅಲ್ಪಸಂಖ್ಯಾತರ ನೌಕರರ ಸಂಘಗಳು ತಮ್ಮ ಅಹವಾಲನ್ನು ಕೇರಳ ಸರ್ಕಾರಕ್ಕೆ ಸಲ್ಲಿಸಿದರೂ ಫಲಪ್ರದವಾಗಲಿಲ್ಲ,

ಮೈಪಾಡಿ, ಕಾಸರಗೋಡ ತರಬೇತಿ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಶಿಕ್ಷಕರಿಗೆ ಹಾಗೂ ತ್ರಿವೇಂಡ್ರಮ್‌ದಲ್ಲಿ ತಮಿಳು ಶಿಕ್ಷಕರಿಗೆ ತರಬೇತಿ ಅವಕಾಶವಿದ್ದರೂ ೧೯೭೬-೭೭ರಲ್ಲಿ ಶಿಕ್ಷಕರ ಅಭಾವವಿದೆಯೆಂದು ಈ ಎರಡೂ ಸಂಸ್ಥೆಗಳನ್ನು ಬಂದುಮಾಡಲಾಯಿತು. ಆದರೆ ಕಾಸರಗೋಡು ತಾಲೂಕಿನಲ್ಲಿಯೇ ಇರುವ ೫೦ಕ್ಕೂ ಮೇಲ್ಪಟ್ಟು ಪ್ರಾಥಮಿಕ ಕನ್ನಡ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಶಿಕ್ಷಕರಿಗೆ ತರಬೇತಿ ನೀಡಿಲ್ಲವೆಂದು ಕೇರಳ ವಿಧಾನ ಸಭೆಯಲ್ಲಿ ಸದಸ್ಯರೋರ್ವರಿಂದ ಬಂದ ಪ್ರಶ್ನೆಗೆ ಶಿಕ್ಷಕರ ಬೇಡಿಕೆ ಇಲ್ಲವೆಂದು ಸರ್ಕಾರವು ಉತ್ತರ ನೀಡಿದೆ.

ಈ ಕನ್ನಡ ಭಾಗದಲ್ಲೆಲ್ಲ ಮಲೆಯಾಳಿ ಸರ್ಕಾರ ನೌಕರರನ್ನೇ ನೇಮಿಸಿಕೊಳ್ಳಲಾಗುತ್ತಿದೆ. ಕಣ್ಣಾನೂರು ಜಿಲ್ಲೆಯಲ್ಲಿ ಭಾಷಾಅಲ್ಪಸಂಖ್ಯಾತ ಅಧಿಕಾರಿಗಳನ್ನು ನಿಯಮಿಸಬೇಕೆಂಬ ಬಗ್ಗೆ ಸರ್ಕಾರದ ಆದೇಶವಿದ್ದರೂ, ಸ್ಥಳೀಯ ಭಾಷೆಗಳೇ ಬಾರದಿರುವ ಅಧಿಕಾರಿಗಳನ್ನು ನಿಯಮಿಸುತ್ತಿದ್ದಾರೆ. ಕಾಸರಗೋಡು ತಾಲೂಕಿನಲ್ಲಿ ಕನ್ನಡ ಬಾರದಿದ್ದ ಅಧಿಕಾರಿಗಳನ್ನೇ ನೇಮಿಸುತ್ತಿರುವುದರಿಂದ ಅವರು ಭಾಷಾ ಅನಾನುಕೂಲತೆಯ ಮೂಲಕ, ಬೇರೆ ಕಡೆಗೆ ವರ್ಗಾಯಿಸಿಕೊಂಡು ಹೋಗುತ್ತಿದ್ದಾರೆ. ಹೀಗಾಗಿ ವಿದ್ಯುತ್ ಇಲಾಖೆಯಂಥ ಮಹತ್ವದ ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿಯಿವೆ. ಲೋಕಸೇವಾ ಆಯೋಗದಿಂದ ನೌಕರಿ ಪಡೆದ ಕನ್ನಡಿಗರು, ಟೆಸ್ಟಿನಲ್ಲಿ ಪಾಸಾಗಲು ಮಲೆಯಾಳಿ ಭಾಷೆಯನ್ನು ಕಲಿಯಲು, ಅವರಿಗಾಗಿ ಚಿಕ್ಕದಾಗಿ ತರಪೇತಿಕೊಡುವ ಮಲೆಯಾಳಿ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ಕೇರಳ ಎನ್.ಜಿ.ಓ. ಸಮಿತಿ, ಕಾಸರಗೋಡು ಇವರು ತಮ್ಮ ಬೇಡಿಕೆಯನ್ನು ಸಲ್ಲಿಸಿದ್ದರೂ ಸರ್ಕಾರ ಗಮನಕ್ಕೆ ತೆಗೆದುಕೊಂಡಿಲ್ಲ. ಏಕೆಂದರೆ ಸರ್ಕಾರಿ ಹುದ್ದೆಗಳಲ್ಲಿರುವ ಕನ್ನಡಿಗರು ಮಲೆಯಾಳಿ ಭಾಷೆಯನ್ನು ಕಲಿತು

ನೇಮಿಸಿರುವುದನ್ನು ಅವಲೋಕಿಸಿದರೆ ಕನ್ನಡ ಭಾಷೆಯನ್ನು ತುಳಿಯಲು ಕೇರಳ ಸರ್ಕಾರವು ಕೈಕೊಂಡ ಈ ಕ್ರಮವು ನಿಜಕ್ಕೂ ಖಂಡನಾರ್ಹವಲ್ಲವೆ? ಮತ್ತು ಈ ಭಾಗದಲ್ಲಿ ಕನ್ನಡ ಭಾಷೆ ಗೊತ್ತಿಲ್ಲದ ಮಲೆಯಾಳಿ ಅಧಿಕಾರಿಗಳನ್ನು ಸರ್ಕಾರ ನೇಮಿಸಿರುವುದು ದುರುದ್ದೇಶದಿಂದಲ್ಲವೆ?

ಕಾಸರಗೋಡು ತಾಲೂಕಿನ ಚಂದ್ರಗಿರಿ-ಪಾಯಸ್ವಿನಿ ನದಿಯ ಉತ್ತರಕ್ಕಿರುವ ೧೦೯ ಹಳ್ಳಿಗಳಲ್ಲಿ ೭೩ ಪಟೇಲರು, ೩೬ ಶಾನುಭೋಗರು ತಮ್ಮ ಕಾಗದ ಪತ್ರಗಳನ್ನು ಕನ್ನಡದಲ್ಲಿಟ್ಟುಕೊಂಡಿದ್ದಾರೆ.

ಈ ಅಂಶವನ್ನು ಕೂಡಾ ೧೯೬೦ರ ಕೇರಳ ವಿಧಾನ ಸಭೆಯ ಕಾರ್ಯ ಕಲಾಪಗಳಿಂದ ತಿಳಿದುಕೊಳ್ಳಬಹುದು.

ಕಾಸರಗೋಡು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಪ್ರತಿವರ್ಷ ೨೦೦೦ ದಿಂದ ೨೫೦೦ರ ವರೆಗೆ ಧಾಖಲೆ ಪತ್ರಗಳು ನೊಂದಾಯಿಸಲ್ಪಡುತ್ತವೆ. ಅವುಗಳಲ್ಲಿ ಮಲೆಯಾಳಿ ಭಾಷೆಯ ಧಾಖಲೆ ಪತ್ರಗಳು ಕೇವಲ ೨೦ ಕ್ಕೂ ಕಡಿಮೆ. ಇಂಗ್ಲೀಷಿನಲ್ಲಿ ೧೦ ರಿಂದ ೫೦ ರ ಒಳಗೆ. ಇನ್ನುಳಿದವುಗಳೆಲ್ಲವೂ ಕನ್ನಡ ಭಾಷೆಯಲ್ಲಿಯೇ ಧಾಖಲೆಗೊಳ್ಳುತ್ತಿವೆ. ಇದರಂತೆಯೇ ಕಾಸರಗೋಡು ತಾಲೂಕಿನ ಮಂಜೇಶ್ವರ ಫಿರ್ಕಾರದಲ್ಲಿಯೂ ಕೂಡಾ ೭೮೦ ರಿಂದ ೧೧೦೦ ರವರೆಗೆ ಕಾಗದ ಪತ್ರಗಳು ನೊಂದಾಯಿಸಲ್ಪಡುತ್ತಾವೆ. ಅವುಗಳಲ್ಲಿ ೧೦ಕ್ಕೂ ಕಡಿಮೆ ಮಲೆಯಾಳಿ ಭಾಷೆಯಲ್ಲಿಯೂ ದಾಖಲೆಗೊಳ್ಳುತ್ತಿವೆ. ೧೯೬೭ರಲ್ಲಿ ಹೊಸದಾಗಿ ನಿರ್ಮಾಣಗೊಂಡ ಬಡಿಯಾಖಡಾ ಸಬ್‌ರಜಿಸ್ಟ್ರಾರ್ ಆಫೀಸಿನಲ್ಲಿಯೂ ಕೂಡಾ ೫ ವರ್ಷಗಳ ಅವಧಿಯಲ್ಲಿ ಧಾಖಲೆಯಾದ ೪೫೦೦ ಕಾಗದ ಪತ್ರಗಳಲ್ಲಿ, ೩೦೫ ಇಂಗ್ಲೀಷ್ ಭಾಷೆಯಲ್ಲಿ, ಕೇವಲ ೧೩೧ ಮಲೆಯಾಳಿ ಭಾಷೆಯಲ್ಲಿ, ಇನ್ನುಳಿದ ೪೨೪೯ ಕಾಗದ ಪತ್ರಗಳು ಕನ್ನಡದಲ್ಲೇ ದಾಖಲೆಯಾಗಿವೆ. ಹೀಗೆ ೧೯೫೬ ರಿಂದ ೧೯೫೮ ರ ವರೆಗೆ ಸಬ್‌ರಜಿಸ್ಟ್ರಾರ್ ಆಫೀಸಿನಲ್ಲಿ ದಾಖಲೆಗೊಂಡ ೧೨೯೯೯ ಕಾಗದ ಪತ್ರಗಳಲ್ಲಿ, ೧೨೪೧೭ ಕನ್ನಡದಲ್ಲಿವೆ. ಈ ವರದಿಯನ್ನು ಕೂಡಾ ಕೇರಳ ವಿಧಾನ ಸಭೆಯ ಕಾರ್ಯಕಲಾಪದಿಂದ ಆಯ್ದುಕೊಳ್ಳಲಾಗಿದೆ.

ಇಲ್ಲಿಯ ಕನ್ನಡ ಜನತೆಯೂ ಕೂಡಾ ೧೯೫೭, ೧೯೬೦, ೧೯೬೫, ೧೯೬೭ರಲ್ಲಿ ನಡೆದ ವಿಧಾನ ಸಭೆಯ ಚುನಾವಣೆಯಲ್ಲಿ, ಕರ್ನಾಟಕ ಪ್ರಾಂತೀಕರಣ ಸಮಿತಿಯ ಹಾಗೂ ಅದರ ಬೆಂಬಲ ಪಡೆದ ಹುರಿಯಾಳುಗಳನ್ನೇ ಕೇರಳ ವಿಧಾನ ಸಭೆಗೆ ಚುನಾಯಿಸಿ ಕಳುಹಿಸಿತು.

ದಿದ್ದರೂ ೮೬೨ ವಿದ್ಯಾರ್ಥಿಗಳು ಕನ್ನಡದಲ್ಲಿ ಓದುತ್ತಿದ್ದು, ೨೨ ಜನ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಮೊಹಬೂಬ್ ನಗರದಲ್ಲಿ ೧೨ ಕನ್ನಡ ಶಾಲೆಗಳಿದ್ದು ೧೨೫೪ ವಿದ್ಯಾರ್ಥಿಗಳು ಓದುತ್ತಿದ್ದರು. ೧೬ ಜನ ಶಿಕ್ಷಕರು ಕೆಲಸ ಮಾಡುತ್ತಿದ್ದರು, ಈ ಅಂಕಿ–ಅಂಶಗಳನ್ನು ಮೇ–೩೧, ೧೯೬೪ ನೇ ಇಸ್ವಿಯಲ್ಲಿ ಪ್ರಕಟವಾದ ಭಾಷಾಅಲ್ಪಸಂಖ್ಯಾತ ಕಮಿಷನರ್ ಅವರ ೬ ನೇ ವರದಿಯಿಂದ ಆಯ್ದುಕೊಳ್ಳಲಾಗಿದೆ. ಆದರೆ ಪ್ರಸಕ್ತ ಸನ್ನಿವೇಶದಲ್ಲಿ ಮೇಲ್ಕಾಣಿಸಿದ ಪ್ರದೇಶಗಳಲ್ಲಿ ಒಂದೂ ಕನ್ನಡ ಶಾಲೆಗಳಿದ್ದಂತಿಲ್ಲ. ಇದಕ್ಕೆ ಆಂದ್ರ ರಾಜ್ಯದ ಉತ್ತರವೇನು? ೧೯೫೯-೬೦ ರ ಅಂಕಿ-ಅಂಶಗಳ ಪ್ರಕಾರ ಆದೋನಿಯಲ್ಲಿ ೩೮ ಕನ್ನಡ ಪ್ರಾಥಮಿಕ ಶಾಲೆಗಳಿದ್ದು, ೩೩೫೪ ವಿದ್ಯಾರ್ಥಿಗಳು ಓದುತ್ತಿದ್ದರು. ೬೬ ಕನ್ನಡ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಹೈದರಾಬಾದ್ ನಗರದಲ್ಲಿ ಶಾಲೆಗಳ ಅಂಕಿ-ಅಂಶಗಳು ದೊರೆಯದಿದ್ದರೂ ೬ ಜನ ಕನ್ನಡ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಮೇಡಕ್‌ನಲ್ಲಿ ೬ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ೪೨೬ ವಿದ್ಯಾರ್ಥಿಗಳು ಓದುತ್ತಿದ್ದು, ೨೧ ಜನ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಮೊಹಬೂಬ್ ನಗರದಲ್ಲಿ ೧೨ ಶಾಲೆಗಳಿದ್ದು ೭೫೨ ವಿದ್ಯಾರ್ಥಿಗಳು ಓದುತ್ತಿದ್ದು ೩೬ ಜನ ಶಿಕ್ಷಕರು ಕೆಲಸ ಮಾಡುತ್ತಿದ್ದರು.

೨. ಕೇರಳ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೨,೧೩,೪೭,೩೭೫

ಈ ರಾಜ್ಯದ ಕಾಸರಗೋಡು ತಾಲೂಕಿನ ಮಂಜೇಶ್ವರ ಫಿರ್ಕಾದಲ್ಲಿ ೧೦೫೪೬ ಪ್ರಾಥಮಿಕ ಶಾಲಾವಿದ್ಯಾರ್ಥಿಗಳು, ಕಾಸರಗೋಡು ತಾಲೂಕಿನ ಕುಂಬಳ ಫಿರ್ಕಾದಲ್ಲಿ (ಸರ್ಕಲ್) ೧೧,೦೦೦ ಪ್ರಾಥಮಿಕ ವಿದ್ಯಾರ್ಥಿಗಳು, ಮಂಜೇಶ್ವರ ಫಿರ್ಕಾದ ೫ ಪ್ರೌಢಶಾಲೆಗಳಲ್ಲಿ ೧೭೪೨ ವಿದ್ಯಾರ್ಥಿಗಳು, ಕುಂಬಳ ಫಿರ್ಕಾದ ೪ ಶಾಲೆಗಳಲ್ಲಿ ೯೩೫ ಪ್ರೌಢಶಾಲಾವಿದ್ಯಾರ್ಥಿಗಳು, ಕಾಸರಗೋಡು ತಾಲೂಕಿನ ಉತ್ತರ ಭಾಗದ ಚಂದ್ರಗಿರಿ-ಪಾಯಸ್ವಿನಿ ನದಿಯ ಭಾಗದಲ್ಲಿರುವ ೧೫ ಹಳ್ಳಿಗಳ ಪ್ರದೇಶದಲ್ಲಿರುವ ೬ ಪ್ರೌಢ ಶಾಲೆಗಳಲ್ಲಿ ೧೪೫೦ ಕನ್ನಡ ವಿದ್ಯಾರ್ಥಿಗಳು, ಕನ್ನಡದಲ್ಲಿ ಓದುತಿದ್ದರೆ ೯೫೧ ವಿದ್ಯಾರ್ಥಿಗಳು ಮಲೆಯಾ ಭಾಷೆಯಲ್ಲಿ ಓದುತ್ತಿದ್ದಾರೆ. ಎಂಬ ಅಂಶವನ್ನು ೧೯೬೦ ಅಕ್ಟೋಬರ್ ೧೪ ನೇ ತಾರಿಖು ಕೇರಳ ವಿಧಾನ ಸಭೆಯಲ್ಲಿ ನಡೆದ ಕಾರ್ಯಕಲಾಪಗಳಿಂದ ತಿಳಿದುಕೊಳ್ಳಬಹುದು.

ಸಂಪೂರ್ಣ ಕನ್ನಡ ಮಾಧ್ಯಮದಲ್ಲಿಯೇ ಓದುತ್ತಿರುವ ಕಾಸರಗೋಡು ತಾಲೂಕಿನ ಈ ಮೂರು ಸಬ್‌ಡಿವಿಜನ್‌ಗಳಲ್ಲಿ ಕನ್ನಡದಲ್ಲಿ ಬರೆಯಲು, ಓದಲು ಮತ್ತು ಮಾತನಾಡಲು ಬಾರದ ೯ ಶಿಕ್ಷಕರನ್ನು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಸರ್ಕಾರವೇ

ಉಳಿದ ಎಲ್ಲ ವಿಷಯವನ್ನು ತೆಲುಗಿನಲ್ಲಿಯೇ ಓದಬೇಕು. ಆಶ್ಚರ್ಯವೆಂದರೆ ತೆಲುಗಿನಲ್ಲಿರುವ ಎಲ್ಲ ವಿಷಯವನ್ನು ಕನ್ನಡ ಶಿಕ್ಷಕರ ತೆಲುಗುಭಾಷೆಯಿಂದಲೇ ಕನ್ನಡ ಭಾಷೆಗೆ ತರ್ಜುಮೆ ಮಾಡಿ ಹೇಳಬೇಕು. ಈ ವಿಷಯವನ್ನು ಕರ್ನೂಲು ಜಿಲ್ಲಾ ಹೊಳಲಗುಂಡಿಯ ಕನ್ನಡ ಯುವಕ ಸಂಘ, ಆದವಾನಿ ಕನ್ನಡ ಸಂಘದ ಕಾರ್ಯದರ್ಶಿಗಳು ಸರ್ಕಾರದ ಗಮನಕ್ಕೆ ತಂದಿದ್ದರೂ ಯಾವ ಪ್ರಯೋಜನವೂ ಆಗಿರುವುದಿಲ್ಲ. ಇದೇ ಗತಿಯು ಉರ್ದು, ಒರಿಯಾ, ತಮಿಳು ಭಾಷೆಗಳಿಗೂ ಒದಗಿದೆ.

೧೯೬೨-೬೩ ರಲ್ಲಿ ಕರ್ನೂಲಿನ ೧೮ ಪ್ರಾಥಮಿಕ ಶಾಲೆಗಳಲ್ಲಿ ೧೮೩೦ ವಿದ್ಯಾರ್ಥಿಗಳು ಓದುತ್ತಿದ್ದರು, ೪೯ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಅದರಂತೆಯೇ ಹೈದರಾಬಾದಿನಲ್ಲಿ ೮ ಜನ ಶಿಕ್ಷಕರು, ಮೇಡಕ್‌ನಲ್ಲಿ ೮೬೨ ವಿದ್ಯಾರ್ಥಿಗಳು ೨೨ ಶಿಕ್ಷಕರು, ಮೆಹಬೂಬ್ ನಗರದಲ್ಲಿ ೧೨ ಶಾಲೆಗಳು ೧೨೫೪ ವಿದ್ಯಾರ್ಥಿಗಳು, ೧೬ ಶಿಕ್ಷಕರ ಕೆಲಸ ಮಾಡುತ್ತಿದ್ದರೆಂದು ಮೇ ೩೧,೧೯೬೪ ರಲ್ಲಿ ಪ್ರಕಟವಾದ ಕಮಿಷನರವರ ೬ ನೇ ವರದಿಯಿಂದ ತಿಳಿದು ಬರುತ್ತದೆ. ೧೯೬೩-೬೪ ರ ಅಂಕಿ-ಅಂಶಗಳ ರೀತ್ಯ ೫೯ ಪ್ರಾರ್ಥಮಿಕ ಶಾಲೆಗಳು, ೩೯ ತರಗತಿಯ ವಿಭಾಗಗಳು, ೬೭೪೬ ವಿದ್ಯಾರ್ಥಿಗಳು ೧೫೭ ಜನ ಶಿಕ್ಷಕರು ಕನ್ನಡಿಗರಾಗಿ ಕೆಲಸಮಾಡುತ್ತಿದ್ದರು. ಆದರೆ ೧೯೭೪-೭೫ ರ ಅಂಕಿ-ಅಂಶಗಳ ರೀತ್ಯ ೬೭ ಪ್ರಾರ್ಥಮಿಕ ಕನ್ನಡ ಶಾಲೆಗಳು. ೪೫ ತರಗತಿಯ ವಿಭಾಗಗಳು, ೬೦೨೧ ವಿದ್ಯಾರ್ಥಿಗಳು ೧೫೮ ಶಿಕ್ಷಕರು ಇರುವುದಾಗಿ ೧೯ ನೇಯ ವರದಿಯಿಂದ ತಿಳಿದು ಬರುತ್ತದೆ. ೧೩ ಮಾಧ್ಯಮಿಕ ಶಾಲೆಗಳು, ೩೦ ತರಗತಿಯ ವಿಭಾಗಗಳು ೧೫೦೮ ವಿದ್ಯಾರ್ಥಿಗಳು, ೮೧ ಶಿಕ್ಷಕರು ಕೆಲಸ ಮಾಡುತ್ತಿರುವುದಾಗಿ ತಿಳಿದು ಬಂದಿದೆ. ಆದರೆ ೧೯೭೪-೭೫ ರಿಂದ ಈಚಿನ ೭ ವರ್ಷಗಳವರೆಗೆ ಆಂಧ್ರ ಸರ್ಕಾರವು ಭಾಷಾ ಅಲ್ಪಸಂಖ್ಯಾತರ ಶೈಕ್ಷಣಿಕ ಆಗುಹೋಗುಗಳ ಬಗ್ಗೆ ಯಾವುದೇ ರೀತಿಯ ಅಂಕಿ-ಅಂಶಗಳನ್ನು ಒದಗಿಸಿಲ್ಲ. ೧೯೭೪–೭೫ ರ ಅಂಕಿ-ಅಂಶಗಳ ಆಧಾರದ ಮೇಲೆ ಆಂಧ್ರದಲ್ಲಿ ೬೭ ಪ್ರಾಥಮಿಕ ಶಾಲೆಗಳೂ, ೧೩ ಮಾಧ್ಯಮಿಕ ಶಾಲೆಗಳಿದ್ದು ೭೫೨೯ ವಿದ್ಯಾರ್ಥಿಗಳು ಕನ್ನಡ ಶಾಲೆಗಳಲ್ಲಿ ಒದುತ್ತಿದ್ದು ೨೩೯ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಈ ಕನ್ನಡ, ಶಾಲೆಗಳು ಕರ್ನಾಟಕದ ಅವಿಭಾಜ್ಯ ಅಂಗವಾಗಿ ಈಗಲೂ ಆಂಧ್ರ ಪ್ರದೇಶದಲ್ಲಿ ಉಳಿದುಕೊಂಡಿರುವ ಅನಂತಪುರ ಜಿಲ್ಲೆಯ ಮಡಕಶಿರಾ ಆಲೂರು, ಆದವಾನಿ, ರಾಯದುರ್ಗ ಪ್ರದೇಶಗಳನ್ನು ಬಿಟ್ಟರೆ ಆಂಧ್ರಪ್ರದೇಶದಲ್ಲಿ ಬೇರಾವ ಕಡೆಯಲ್ಲಿಯೂ ಇದ್ದಂತಿಲ್ಲ. ಈಚಿನ ಮೂರು ವರ್ಷಗಳಲ್ಲಿ ಅಲ್ಲಿರುವ ಅನೇಕ ಕನ್ನಡ ಶಾಲೆಗಳು ಮುಚ್ಚಲ್ಪಟ್ಟಿವೆ. ೧೯೬೨–೬೩ ರ ಅಂಕಿ-ಅಂಶಗಳ ರೀತ್ಯ ಕರ್ನೂಲಿನಲ್ಲಿ ಕನ್ನಡದ ೧೮ ಶಾಲೆಗಳು, ೧೮೩೦ ವಿದ್ಯಾರ್ಥಿಗಳು ಇದ್ದರು, ೪೯ ಶಿಕ್ಷಕರು, ಹೈದರಾಬಾದಿನಲ್ಲಿ ಶಾಲೆ ಮತ್ತು ವಿದ್ಯಾರ್ಥಿಗಳ ಸಂಖ್ಯೆ ದೊರೆಯದಿದ್ದರೂ ೮ ಜನ ಕನ್ನಡ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಮೇಡಕ್ಕಿನಲ್ಲಿ ಶಾಲೆಗಳ ಸಂಖ್ಯೆ ದೊರೆಯ

ದಕ್ಷಿಣ ವಲಯ
(Southern Zone)

೧. ಆಂಧ್ರಪ್ರದೇಶ ೨. ಕೇರಳ
೩. ತಮಿಳುನಾಡು ೪. ಪಾಂಡಿಚೇರಿ

೧. ಆಂಧ್ರಪ್ರದೇಶ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ-೪,೩೫,೯,೭೦೮

೧೯೭೪–೭೫ ರ ಅಂಕಿ-ಅಂಶಗಳ ರೀತ್ಯ ಈ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರ ೧೫೨೮ ಪ್ರಾಥಮಿಕ ಶಾಲೆಗಳಿದ್ದು ೨,೪೧.೭೮೭ ವಿದ್ಯಾರ್ಥಿಗಳು ಓದುತ್ತಿದ್ದಾರೆ. ತರಬೇತಿಗೊಂಡ ಹಾಗೂ ತರಬೇತಿಗೊಳ್ಳದ ೬೩೭೯ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಆದರೆ ಈಚಿನ ಮೂರು ವರ್ಷಗಳಲ್ಲಿ ಅಂದರೆ ೧೯೭೫-೭೬ ರಿಂದ ೭೭-೭೮ ಈ ಮೂರು ವರ್ಷಗಳಿಗೆ ಸಂಬಂಧಪಟ್ಟ ಭಾಷಾಅಲ್ಪಸಂಖ್ಯಾತರ ಶಿಕ್ಷಣದ ಬಗ್ಗೆ ಯಾವುದೇ ಮಾಹಿತಿಯನ್ನು ಸರ್ಕಾರ ಭಾಷಾಅಲ್ಪಸಂಖ್ಯಾತರ ಕಮಿಷನರವರಿಗೆ ವರದಿ ಮಾಡಿರುವುದಿಲ್ಲ. ಇಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ೨,೫೧೦೪ ವಿದ್ಯಾರ್ಥಿಗಳು ಮುಸಲ್ಮಾನರಿದ್ದು, ೫೧೦೪ ಉರ್ದು ಶಿಕ್ಷಕರಿದ್ದಾರೆ. ಇನ್ನುಳಿದ ಭಾಷಾಅಲ್ಪಸಂಖ್ಯಾತರ ಶೈಕ್ಷಣಿಕ ಅಭಿವೃದ್ಧಿಯ ಕಡೆಗೆ ಆಂಧ್ರ ಸರ್ಕಾರದ ಗಮನವಿದ್ದಂತಿಲ್ಲ. ಉದಾಹರಣೆಗೆ ಕರ್ನೂಲು ಜಿಲ್ಲೆಯಲ್ಲಿ ಒಂಭತ್ತು ಅಪ್ಪರ್ ಪ್ರೈಮರಿ ಕನ್ನಡ ಶಾಲೆಗಳು, ೫ ಮಾಧ್ಯಮಿಕ ಶಾಲೆಗಳಿದ್ದು ಅವುಗಳ ಆಡಳಿತಗಾರರಿಗೆ ಕನ್ನಡವೇ ಬರುವುದಿಲ್ಲ. ಈ ಬಗ್ಗೆ ಆದೋನಿ ಕನ್ನಡ ಸಂಘದ ಉಪಾಧ್ಯಕ್ಷರು ಸರ್ಕಾರಕ್ಕೆ ದೂರು ಸಲ್ಲಿಸಿದ್ದರೂ ಇದುವರೆವಿಗೂ ಯಾವ ಉತ್ತರವನ್ನೂ ನೀಡಿಲ್ಲ. ರಾಜ್ಯದ ಆಯವ್ಯಯ ಪತ್ರಿಕೆಯಲ್ಲಿಯೂ ಕೂಡಾ ಭಾಷಾಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕಲಿಸುವ ಶಿಕ್ಷಕರ ನೇಮಕಾತಿ ಬಗ್ಗೆ ಯಾವ ಅವಕಾಶವನ್ನೂ ನೀಡಿಲ್ಲ. ತರಬೇತಿಗೊಳ್ಳದ ಭಾಷಾಅಲ್ಪಸಂಖ್ಯಾತ ಶಿಕ್ಷಕರನ್ನು ಜಿಲ್ಲಾ ಮಟ್ಟದಲ್ಲಿ ತಾತ್ಪೂರ್ತಿಕವಾಗಿ ನೇಮಿಸಿಕೊಳ್ಳಲಾಗುತ್ತಿದೆ. ಅವರಿಗಾಗಿ ತರಬೇತಿ ಕೇಂದ್ರಗಳ ವ್ಯವಸ್ಥೆಯನ್ನೂ ಕೂಡಾ ಮಾಡಿಲ್ಲ. ಅದರಂತೆಯೇ ಶ್ರೀಕಾಕುಲಮ್ ಜಿಲ್ಲೆಯಲ್ಲಿರುವ ಓರಿಯಾ ಭಾಷೆಯ ಶಿಕ್ಷಕರು ಓರಿಯಾ ದೇಶದಿಂದ ಶೈಕ್ಷಣಿಕ ತರಬೇತಿಯನ್ನು ಪಡೆಯುತ್ತಿದ್ದಾರೆ. ಇದಲ್ಲದೆ ಮಾಧ್ಯಮಿಕ ಶಿಕ್ಷಣದ ಹಂತದವರೆಗೆ ಸಿಲೇಬಸ್ ಪ್ರಕಾರ ಕನ್ನಡದ ಪಠ್ಯ ಪುಸ್ತಕಗಳೇ ಇಲ್ಲ. ಕನ್ನಡ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಕನ್ನಡವನ್ನು ಬಿಟ್ಟು

೧೯೭೧ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೩,೩೨,೩೯೦

ಈ ರಾಜ್ಯದಲ್ಲಿ ಜನರಾಡುವ ಪ್ರಮುಖ ಭಾಷೆಯೆಂದರೆ ಮಿಝೋ. ಈ ಭಾಷೆಯ ಜೊತೆಗೆ ಚಕ್ಮಾ, ಲಖೇರ್, ಪಾಲಿ, ರಿಯಾಂಗ್ ಮತ್ತು ಪಾಯಿತೆ ಭಾಷೆಗಳನ್ನಾಡುವ ಜನರೂ ಇದ್ದಾರೆ. ರಾಜ್ಯದಾದ್ಯಂತ ಮಿಜೋ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣವು ನಡೆಸಲ್ಪಡುತ್ತದೆ. ಜೊತೆಗೆ ಲಖೇರ, ಚಕ್ಮಿ ಮತ್ತು ಹಾರಿ ಭಾಷೆಗಳನ್ನು ಹೊಂದಿರುವ ಅಲ್ಪ ಸಂಖ್ಯಾತರಿಗೂ ಅವರ ಮಾತೃ ಭಾಷೆಗಳಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗಿದೆ. ಇದೇ ರೀತಿ ಹಿಂದೀ, ನೇಪಾಳಿ ಬೆಂಗಾಲಿ ಭಾಷೆಗಳಲ್ಲಿಯೂ ಶಿಕ್ಷಣ ನೀಡುತ್ತಿದ್ದು, ಈಚೆಗೆ ಅವುಗಳನ್ನು ಕೈಬಿಡಲಾಗಿದೆ. ಎಂಬ ವದಂತಿಯ ಬಗ್ಗೆ ಕಮಿಷನರವರು ಮಿಝೋರಾಂ ಸರಕಾರದಿಂದ ಸಮಜಾಯಿಸಿ ಕೇಳಿದ್ದಾರೆ. ಆದೇನೆ ಇದ್ದರೂ ಭಾಷಾಅಲ್ಪಸಂಖ್ಯಾತರಿಗೆ ಸಂಭಂದಪಟ್ಟ, ಶೈಕ್ಷಣಿಕ ಕಾರ್ಯವಿಧಾನಗಳ ಮಾಹಿತಿಯನ್ನು ಸರಕಾರ ಕಮಿಷನರ್ ಅವರಿಗೆ ಒದಗಿಸಿರುವುದಿಲ್ಲ. ಮಾಧ್ಯಮಿಕ ಶಾಲೆಯ ೭ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಇಂಗ್ಲೀಷಿನಲ್ಲಿ ಶಿಕ್ಷಣ ಕೊಡಲಾಗುತ್ತದೆ.

ಭಾಷಾಅಲ್ಪಸಂಖ್ಯಾತರಿಗೆ ಪ್ರಾಥಮಿಕ ಹಂತದಲ್ಲಿ ಅವರವರ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ಬಗ್ಗೆ ಸರಕಾರ ಯಾವುದೇ ಆದೇಶವನ್ನು ಹೊರಡಿಸಿಲ್ಲ. ಆಶ್ಚರ್ಯವೆಂದರೆ ತ್ರೀಭಾಷಾ ಸೂತ್ರವನ್ನು ಜಾರಿಗೊಳಿಸಬೇಕೆಂಬ ೧೯೬೧ ರ ಮುಖ್ಯಮಂತ್ರಿಗಳ ಸಭೆಯ ತೀರ್ಮಾನವನ್ನು ಈ ರಾಜ್ಯದಲ್ಲಿ ಜಾರಿಗೊಳಿಸಿಲ್ಲ. ಹಾಗೂ ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೂಡಾ ಕಮಿಷನರ್ ಅವರಿಗೆ ವರದಿಮಾಡಿಲ್ಲ. ಪಠ್ಯಪುಸ್ತಕಗಳ ಪ್ರಕಟಣೆಯ ಹೊಣೆಯನ್ನು ಖಾಸಗೀ ಸಂಸ್ಥೆಯವರಿಗೆ ಬಿಟ್ಟುಕೊಟ್ಟಿರುವುದರಿಂದ ವಿವಿಧ ಭಾಷಾ ಪಠ್ಯಪುಸ್ತಕಗಳ ವಿತರಣೆಯ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಂಡಿಲ್ಲ. ಪರಿಸ್ಥಿತಿ ಹೀಗಿರುವುದರಿಂದ ಭಾಷಾಅಲ್ಪಸಂಖ್ಯಾತರ ಶೈಕ್ಷಣಿಕ ಸ್ಥಿತಿಗತಿ, ಶಿಕ್ಷಕರ ತರಬೇತಿ, ಗುಡ್ಡಗಾಡು ಜನಾಂಗದ ಭಾಷೆ ಉಪಭಾಷೆಗಳ ಸ್ಥಾನಮಾನ ಇತ್ಯಾದಿಗಳ ಮಾಹಿತಿಯು ಸರ್ಕಾರದಿಂದ ಸ್ಪಷ್ಟವಾಗಿ ದೊರೆತಿರುವುದಿಲ್ಲ, ಮಿಝೋರಾಂ ರಾಜ್ಯದ ಆಡಳಿತ ಭಾಷೆಯು ಮಿಜೋ ಭಾಷೆ. ರಾಜ್ಯದಲ್ಲಿ ೧೫ ರಿಂದ ೨೦ ಪ್ರಮಾಣದವರೆಗೆ ಭಾಷಾಅಲ್ಪಸಂಖ್ಯಾತರು ಯಾವ ಭಾಗದಲ್ಲಿ ವಾಸಿಸಿದ್ದಾರೆಂಬ ಪಟ್ಟಿಯನ್ನೇ ಸರಕಾರ ಸಿದ್ಧಪಡಿಸಿಲ್ಲ.

ಲೋಕಸೇವಾ ಆಯೋಗದಿಂದ ನಡೆಸಲ್ಪಡುವ ಪರೀಕ್ಷೆಗಳಿಗೆಲ್ಲ ಇಂಗ್ಲೀಷನ್ನೆ ಬಳಕೆ ಮಾಡಲಾಗುತ್ತಿದೆ. ಈ ರಾಜ್ಯದಲ್ಲಿ ಯಾವ ಭಾಷೆಗಳೂ ಪೂರ್ಣ ಬೆಳವಣಿಗೆಯನ್ನು ಹೊಂದದಿರುವುದು ಆಶ್ಚರ್ಯಕರವಲ್ಲವೆ?

❋❋

ಅರುಣಾಚಲ ಪ್ರದೇಶ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೪,೬೭,೫೧೧

ಈ ರಾಜ್ಯದಲ್ಲಿ ಪೂರ್ಣ ಭಾಷೆಗಳಿಗಿಂತ ಉಪ ಭಾಷೆಗಳೇ ಹೆಚ್ಚು ಬಳಕೆಯಲ್ಲಿವೆ. ಇವುಗಳಲ್ಲಿ ತಿಬೇಟಿಯನ್ ಲಿಪಿಯನ್ನು ಆಶ್ರಯಿಸಿದ ಮೋಪ್ಪಾ ಭಾಷೆ ಹಾಗೂ ತಾಯಿಶಾಂಗ್ ಲಿಪಿಯಲ್ಲಿ ಬರೆಯಲ್ಪಡುವ ಕಾಂಪ್ತಿ ಭಾಷೆಗಳು ಜನರಾಡುವ ಹೆಚ್ಚು ಬಳಕೆಯ ಭಾಷೆಗಳಾಗಿ ಪ್ರಚಲಿತದಲ್ಲಿವೆ. ಇವುಗಳ ಜೊತೆಗೆ ನೇಪಾಳಿ ಬಂಗಾಲಿ, ಆಸಾಮಿ ಮತ್ತು ಹಿಂದೀ ಭಾಷೆಗಳೂ ಕೂಡ ಬಳಕೆಯಲ್ಲಿವೆ.

ಒಟ್ಟು ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರ ಹಾಗೂ ಗುಡ್ಡಗಾಡು ಜನರ ಯಾವ ಭಾಷೆಗಳೂ ಸಂಪೂರ್ಣವಾಗಿ ಬೆಳವಣಿಗೆ ಹೊಂದದೇ ಇರುವ ಪ್ರಯುಕ್ತ ಈ ಭಾಷೆಗಳಲ್ಲಿ ಪ್ರಾಥಮಿಕ ಹಂತದಲ್ಲಿಯೂ ಕೂಡಾ ಶಿಕ್ಷಣ ಮಾಧ್ಯಮವನ್ನು ಒದಗಿಸುವುದು ಅಸಾಧ್ಯವಾಗಿದೆ.

ಈ ಕಾರಣಕ್ಕಾಯೇ ರಾಜ್ಯದಾದ್ಯಂತ ಸ್ಥಳೀಯ ಯಾವ ಭಾಷೆಗಳೂ ರಾಜ್ಯ ಭಾಷೆಯ ಸ್ಥಾನದಲ್ಲಿಲ್ಲದೆ, ಇಂಗ್ಲೀಷ್ ಭಾಷೆಯೇ ಅರುಣಾಚಲ ಪ್ರದೇಶದ ರಾಜ್ಯ ಭಾಷೆಯಾಗಿದೆ. ರಾಜ್ಯದಾದ್ಯಂತ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ಶಿಕ್ಷಣ ಪಡೆಯುವ ಎಲ್ಲ ತರಗತಿಯ ಪಠ್ಯ-ಪುಸ್ತಕಗಳು ಇಂಗ್ಲೀಷ್‌ನಲ್ಲಿವೆ. ಹಿಂದೀ ಮತ್ತು ಆಸಾಮಿ ಭಾಷೆಗಳಲ್ಲಿ ಕೂಡಾ ಪಠ್ಯ ಪುಸ್ತಕಗಳಿಲ್ಲ. ಹೀಗಾಗಿ ಅರುಣಾಚಲ ಪ್ರದೇಶದಲ್ಲಿ ವಾಸಿಸುವ ಭಾಷಾಅಲ್ಪಸಂಖ್ಯಾತರ ಎಲ್ಲರ ತಲೆಯ ಮೇಲೂ ಇಂಗ್ಲೀಷ್ ಭಾಷೆಯನ್ನೇ ಒತ್ತಾಯವಾಗಿ ಹೇರಲಾಗಿದೆ. ಭಾಷಾಅಲ್ಪ ಸಂಖ್ಯಾತರಿಗೆ ಈ ರಾಜ್ಯದಲ್ಲಿ ಯಾವುದೇ ರೀತಿಯ ಹಿತರಕ್ಷಣೆಯಾಗಲಿ, ಶೈಕ್ಷಣಿಕ ಸೌಲಭ್ಯವಾಗಲಿ. ಅವರವರ ಮಾತೃಭಾಷೆಯಲ್ಲೇ ಸರ್ಕಾರದ ಮಹತ್ವದ ಪ್ರಕಟಣೆಗಳನ್ನಾಗಲಿ ಓದಿ ತಿಳಿದುಕೊಳ್ಳುವ ಅವಕಾಶವಿರುವುದಿಲ್ಲ.

೧೯೬೪ರ ತ್ರಿಪುರಾ ಆಡಳಿತ ಭಾಷೆಯ ಕಾನೂನಿನ ರೀತ್ಯಾ ಬೆಂಗಾಲಿಯೇ. ಈ ರಾಜ್ಯದ ಆಡಳಿತ ಭಾಷೆಯಾಗಿದೆ. ಆದರೂ ಕೂಡಾ ರಾಜ್ಯದ ಮೂರು ನಾಲ್ಕು ಉಪ ವಿಭಾಗಗಳಲ್ಲಿ ಭಾಗಶಃ ೧೫ಕ್ಕಿಂತಲೂ ಹೆಚ್ಚಾಗಿರುವ ತ್ರಿಪುರಿ ಭಾಷೆಯ ಜನಾಂಗಕ್ಕೆ ಅವರ ಆಡುವ ಭಾಷೆಯಾದ ತ್ರಿಪುರಿಯಲ್ಲಿ ಸರ್ಕಾರದ ಮಹತ್ವದ ಪ್ರಕಟಣೆಗಳನ್ನು ಪ್ರಕಟಿಸುತ್ತಿಲ್ಲ. ಯಾಕೆಂದರೆ ತ್ರಿಪುರಿ ಭಾಷೆಗೆ ಲಿಪಿಯು ಅಷ್ಟೊಂದು ಸಮರ್ಥನೀಯ ಪ್ರಮಾಣದಲ್ಲಿ ಸಿದ್ಧವಾಗಿಲ್ಲ.

ರಾಜ್ಯದಲ್ಲಿ ಲೋಕಸೇವಾ ಆಯೋಗದ ಮೂಲಕ ನಡೆಯುವ ಪರೀಕ್ಷೆಗಳೆಲ್ಲ ಇಂಗ್ಲೀಷ್, ಹಿಂದೀ ಅಥವಾ ಬೆಂಗಾಲಿ ಭಾಷೆಗಳಲ್ಲಿ ನಡೆಯುತ್ತವೆ. ರಾಜ್ಯ ಭಾಷೆಯನ್ನೂ ಕೂಡಾ ಸರ್ಕಾರಿ ಅಧಿಕಾರಿಗಳು ಆದಷ್ಟು ಬೇಗ ಕಲಿತುಕೊಳ್ಳಬೇಕೆಂಬ ಆದೇಶವನ್ನು ನೀಡಿದೆ. ಈ ರಾಜ್ಯದಲ್ಲಿ ಭಾಷಾಅಲ್ಪ ಸಂಖ್ಯಾತರಿಗೆ ಅವರವರ ಮಾತೃ ಭಾಷೆಯಲ್ಲಿ ಸರಕಾರದ ಮಹತ್ವದ ತಿಳಿವಳಿಕೆಗಳನ್ನು ನೀಡುತ್ತಿಲ್ಲ. ಕಮೀಷ್‌ನರ್ ಅವರು ಈ ಬಗ್ಗೆ ಮೇಲಿಂದ ಮೇಲೆ ರಾಜ್ಯ ಸರಕಾರವನ್ನು ಎಚ್ಚರಿಸುತ್ತ ಬಂದಿದ್ದರೂ ಯಾವ ಪ್ರಯೋಜನವು ಆಗಿಲ್ಲ.

ತ್ರಿಪುರ

೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೧೫,೫೬,೩೪೨

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದಲ್ಲಿ ಬಹುಸಂಖ್ಯಾತರು ಬೆಂಗಾಲಿ ಾಷೆಯನ್ನಾಡುವವರಾಗಿದ್ದಾರೆ. ತದನಂತರ ಮಣಿಪುರಿ, ಹಿಂದಿ, ಹಾಲಂ; ಜೋ ಭಾಷೆಗಳು ಹೆಚ್ಚು ಬಳಕೆಯಲ್ಲಿವೆ. ಸಾಮಾನ್ಯವಾಗಿ ಬೆಂಗಾಲಿ ಮತ್ತು ಜೋ ಭಾಷೆಗಳು ಈ ರಾಜ್ಯದ ಶೈಕ್ಷಣಿಕ ಭಾಷಾ ಮಾಧ್ಯಮಗಳಾಗಿವೆ. ಮಿಜೋ ಾಷೆಯನ್ನಾಡುವ ಜನಸಂಖ್ಯೆಯುಳ್ಳ ಪ್ರದೇಶದಲ್ಲಿ ಒಂದು ಮತ್ತು ಎರಡನೇ ತರ ಗಳಿಗೆ ಮಣಿಪುರಿ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಪ್ರಾಯೋಗಿಕವಾಗಿ ಚಲಿತಗೊಳಿಸಲಾಗಿದೆ. ಈ ಭಾಷೆಗಳನ್ನು ಕೂಡಾ ಎಷ್ಟರ ಮಟ್ಟಿಗೆ ಬಳಸ ಾಗಿದೆ ಎಂಬ ಬಗ್ಗೆ ಸರಕಾರದಿಂದ ೧೯೭೪-೭೫ ರಿಂದ ಈಚೆಗೆ ಯಾವ ಮಾಹಿ ಯೂ ದೊರೆತಿರುವುದಿಲ್ಲ. ಈ ರಾಜ್ಯದ ಪಶ್ಚಿಮ ತ್ರಿಪುರಾ ಭಾಗದ ಜನರು ಮ್ಮ ಭಾಗದಲ್ಲಿ ತ್ರಿಪುರಿ ಭಾಷೆಯನ್ನು ಶೈಕ್ಷಣಿಕ ಮಾಧ್ಯಮಕ್ಕೆ ಬಳಸಬೇಕೆಂಬ ೇಡಿಕೆಯನ್ನು ಸಲ್ಲಿಸಿದ್ದು, ಈ ಬಗ್ಗೆಯೂ ಸರಕಾರದಿಂದ ಸ್ಪಷ್ಟ ಅಭಿಪ್ರಾಯ ತಿಳಿದು ುದಿಲ್ಲ.

ಇದೇ ರೀತಿ ಉತ್ತರ ತ್ರಿಪುರಾ ಭಾಗದ ಬಿಲ್‌ಥೇಯಿ ಭಾಷೆಯ ಜನಾಂಗದವರು ಿಂದೀ ಭಾಷೆಯ ಬಗ್ಗೆ ಬೇಡಿಕೆಯನ್ನು ಸಲ್ಲಿಸಿದ್ದು ಅವರ ಬೇಡಿಕೆಯೂ ಕೂಡ ಡೇರಿದಂತಿಲ್ಲ.

ಮುಖ್ಯವಾಗಿ ಈ ರಾಜ್ಯದ ಶಿಕ್ಷಣ ಕ್ರಮದಲ್ಲಿ ಬೆಂಗಾಲಿ ಮತ್ತು ಮಿಜೋ ಾಷೆಗಳ ಮಾಧ್ಯಮದಲ್ಲಿ ಶಿಕ್ಷಣವನ್ನು ನಡೆಸಲ್ಪಡುತ್ತಿದ್ದು, ಇನ್ನಿತರ ಭಾಷಾಅಲ್ಪ ಂಖ್ಯಾತರ ಮಾತೃ ಭಾಷೆಗಳನ್ನು ಕಡೆಗಣಿಸಲಾಗಿದೆ.

೧೯೭೪-೭೫ ರಿಂದೀಚೆಗೆ ಇಡೀ ರಾಜ್ಯದ ಭಾಷಾಅಲ್ಪಸಂಖ್ಯಾತರ ಹಿತರಕ್ಷಣೆಗೆ ಂಬಂಧಪಟ್ಟ ಯಾವುದೇ ಮಾಹಿತಿಯನ್ನು ಸರಕಾರ ಒದಗಿಸಿಲ್ಲ. ಈಚೆಗೆ ತ್ರಿಪುರಾ ಾಷೆಯನ್ನು ರಾಜ್ಯದಲ್ಲಿ ಜನಪ್ರಿಯಗೊಳಿಸಲು ೧೧೮ ಪ್ರಾಥಮಿಕ ಶಾಲೆಗಳಲ್ಲಿ ಈ ಭಾಷೆಗಳಿಗೆ ಸಂಬಂಧ ಪಟ್ಟಂತೆ ಹಲಕೆಲವು ಪಠ್ಯ ಪುಸ್ತಕಗಳನ್ನು ಸಿದ್ಧ ೊಳಿಸಲಾಗಿದೆ.

ಹೀಗೆ ಹಲವಾರು ರೀತಿಯಿಂದ ಪ್ರಯತ್ನಿಸುತ್ತಿದ್ದರೂ ಈ ಭಾಷೆಯು ಟ್ಟೊಂದು ಜನಪ್ರಿಯವಾಗುತ್ತಿಲ್ಲ. ಆದರೂ ಸರಕಾರವು ಈ ಬಗ್ಗೆ ಹೆಚ್ಚು ್ರಯತ್ನಿಸುವ ಆಶಾಭಾವನೆಯನ್ನು ಹೊಂದಿದೆ.

೪. ನಾಗಾಲ್ಯಾಂಡ್

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ-೫,೧೬,೪೪೯.

ಈ ರಾಜ್ಯದಲ್ಲಿ ಕೋನ್ಯಾಕ್, ಅವೋ, ಸೀಮಾ, ಚಕೇಸಂಗ್, ಅಂಗಾಮಿ, ಲೋಥಾ, ಸಂಗತಾನ್, ಪೋಮ್, ಇಮ್‌ಚುಂಗಾರ್, ಚಿಮುಂಗಾಮ್ ಝುಲಿಂಗ್, ರೆಂಗನ್ ಮತ್ತು ಕುಕಿ ಭಾಷೆಗಳು ಪ್ರಚಲಿತದಲ್ಲಿವೆ.

ಇಲ್ಲಿಯೂ ಕೂಡಾ ಭಾಷಾಅಲ್ಪಸಂಖ್ಯಾತರಿಗೆ ಒದಗಿಸಿರುವ ಶಿಕ್ಷಣ ಸೌಲಭ್ಯದ ಮಾಹಿತಿಯು ದೊರೆಯುವುದಿಲ್ಲ.

ಈ ರಾಜ್ಯದಲ್ಲಿ ೧೨ ಗುಡ್ಡಗಾಡು ಭಾಷೆಗಳು ಪ್ರಾಥಮಿಕ ಶಿಕ್ಷಣದ ಭಾಷಾ ಮಾಧ್ಯಮವಾಗಿ ಬಳಸಲ್ಪಡುತ್ತಿವೆ ಎಂಬ ಮಾಹಿತಿ ದೊರೆಯುತ್ತಿದ್ದರೂ ಅವು ಗಳನ್ನು ಜಾರಿಗೊಳಿಸಿದ ಸ್ಪಷ್ಟ ಚಿತ್ರಣ ಗೋಚರವಾಗುತ್ತಿಲ್ಲ. ಭಾಷಾಅಲ್ಪಸಂಖ್ಯಾ ತರ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಒದಗಿಸುವ ಬಗ್ಗೆ ಸರ್ಕಾರ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ. ಇಲ್ಲಿ ಮಾಧ್ಯಮಿಕ ಶಿಕ್ಷಣದ ಭಾಷಾಮಾಧ್ಯಮವು ಇಂಗ್ಲೀಷಿನಲ್ಲಿದೆ. ತ್ರಿಭಾಷಾ ಸೂತ್ರದನ್ವಯ ಇಲ್ಲಿ ಓದುವ ಎಲ್ಲ ಮಕ್ಕಳೂ ಎಂಟನೇ ತರಗತಿಯವರೆಗೆ ಮಾತೃಭಾಷೆಯ ಜೊತೆಗೆ ಹಿಂದೀ, ಇಂಗ್ಲೀಷ್ ಭಾಷೆಯನ್ನು ತೆಗೆದುಕೊಳ್ಳದೇ ಗತ್ಯಂತರವಿಲ್ಲ. ಆದರೆ ಇಲ್ಲಿರುವ ಅನೇಕ ಗುಡ್ಡಗಾಡು ಜನರ ಹಾಗೂ ಭಾಷಾಅಲ್ಪಸಂಖ್ಯಾತರ ಮಾತೃಭಾಷೆಗಳಿಗೆ ಪಠ್ಯಪುಸ್ತಕಗಳು ದೊರೆಯು ತ್ತಿಲ್ಲ. ಹೀಗಾಗಿ ಭಾಷಾಅಲ್ಪಸಂಖ್ಯಾತರ ಮಕ್ಕಳಿಗೆ ಇಲ್ಲಿಯ ವಿದ್ಯಾಭ್ಯಾಸದ ಕ್ರಮವು ತುಂಭಾ ತೊಂದರೆದಾಯಕವಾಗಿದೆ. ಆದರೂ ೪ ನೇ ತರಗತಿಯವರೆಗೆ ಓದುವ ವಿದ್ಯಾರ್ಥಿಗಳಿಗೆ ಸ್ಥಳೀಯ ೧೨ ಪ್ರಮುಖ ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಲಾಗಿದೆ ಎಂದು ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಶಿಕ್ಷಕರ ತರಪೇತಿ ವಿಷಯದಲ್ಲಿಯೂ ಕೂಡಾ ೨೫ ಶಿಕ್ಷಕರಿಗೆ ರಾಜ್ಯದಲ್ಲಿಯೂ, ೫೦ ಶಿಕ್ಷಕರಿಗೆ ನೆರೆಯ ರಾಜ್ಯಗಳಲ್ಲಿಯೂ ತರಪೇತಿ ನೀಡಲಾಗುವುದೆಂದು ಸರ್ಕಾರ ವರದಿಮಾಡಿದೆ.

ನಾಗಾಲ್ಯಾಂಡ್ ರಾಜ್ಯದ ಆಡಳಿತ ಭಾಷೆ ಇಂಗ್ಲೀಷ್. ಸರ್ಕಾರಿ ನೌಕರಿ ಸೇರಬೇಕೆನ್ನುವವರಿಗೆ ರಾಜ್ಯ ಭಾಷೆ ಗೊತ್ತಿರಬೇಕೆಂಬ ನಿಯಮವಿಲ್ಲದಿದ್ದರೂ ಲೋಕ ಸೇವಾ ಆಯೋಗದಿಂದ ನಿಯೋಜಿಸಲ್ಪಟ್ಟ ಸರ್ಕಾರಿ ನೌಕರರು ಭಡ್ತಿ ಪಡೆಯುವ ಪೂರ್ವದಲ್ಲಿಯೇ ರಾಜ್ಯಭಾಷೆಯ ಟೆಸ್ಟಿನಲ್ಲಿ ಪಾಸಾಗಲೇ ಬೇಕು. ನಾಗಾಲ್ಯಾಂಡ ಪ್ರದೇಶದಲ್ಲಿರುವ ನಾಗಾಗುಡ್ಡಗಾಡು ಜನರಿಗೆ ನೌಕರಿ ಕೊಡುವಲ್ಲಿ, ಭಡ್ತಿನೀಡುವಲ್ಲಿ ಪ್ರಥಮ ಪ್ರಾಶಸ್ತ್ಯ ನೀಡಲಾಗುವುದು.

೦ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ-೧೦,೧೧, ೬೯೯.

ಈ ರಾಜ್ಯದಲ್ಲಿ ಖಾಸಿ ಮತ್ತು ಗಾರೋ ಈ ಎರಡು ಭಾಷೆಗಳು ಪ್ರಮುಖ ಷೆಗಳಾಗಿವೆ. ಬೆಂಗಾಲಿ, ನೇಪಾಳಿ, ಅಸಾಮಿ ಮತ್ತು ಹಿಂದೀ ಭಾಷೆಗಳೂ ಕೂಡ ಪ್ರಚಲಿತವಾಗಿವೆ. ಈ ರಾಜ್ಯದಲ್ಲಿ ಕೂಡಾ ಭಾಷಾಅಲ್ಪಸಂಖ್ಯಾತರಿಗೆ ವುದೇ ರೀತಿಯ ಶಿಕ್ಷಣ ಸೌಲಭ್ಯಗಳನ್ನು ನೀಡಿರುವ ವಿವರಣೆಗಳು ದೊರೆತಿಲ್ಲ.

ಸಾರ್ವಜನಿಕರಿಂದ ಸರ್ಕಾರಕ್ಕೆ ಸಲ್ಲಿಸಲ್ಪಡುವ ಬೇಡಿಕೆಗಳಿಗೆ ಯಾವುದೇ ಭಾಷೆ ನ್ನು ಬಳಸಿದ್ದರೂ ಸರ್ಕಾರದ ಉತ್ತರವು ಮಾತ್ರ ಇಂಗ್ಲೀಷಿನಲ್ಲಿಯೇ ಕೊಡಲ್ಪ ತ್ತಿದೆ. ಯಾಕಂದರೆ ಈ ರಾಜ್ಯದಲ್ಲಿ ೧೫ ರಿಂದ ೨೦ ಪ್ರಮಾಣದ ಭಾಷಾಅಲ್ಪ ಖ್ಯಾತರು ವಾಸಿಸಿರುವ ಪ್ರದೇಶಗಳ ಪಟ್ಟಿಯನ್ನೇ ಸರಕಾರವು ಸಿದ್ಧಪಡಿಸಿ ೦ಡಿಲ್ಲ. ಆದುದರಿಂದ ಸರ್ಕಾರದ ಕೆಲವು ಮಹತ್ವದ ಪ್ರಕಟಣೆಗಳು ಗಾರೋ ತ್ತು ಖಾಸಿ ಭಾಷೆಗಳಲ್ಲಿ ತರ್ಜುಮೆಗೊಂಡು ಪ್ರಕಟಗೊಳ್ಳುತ್ತಿವೆ.

ಈ ರಾಜ್ಯದ ಆಡಳಿತ ಭಾಷೆ ಇಂಗ್ಲಿಷ್ ಆಗಿರುವುದರಿಂದ ಲೋಕಸೇವಾ ಯೋಗದ ಪರೀಕ್ಷಾ ಮಾಧ್ಯಮವೂ ಕೂಡಾ ಇಂಗ್ಲೀಷೇ ಆಗಿರುತ್ತದೆ. ೧೯೭೫-೭೬ ಅಂಕಿ-ಅಂಶಗಳ ರೀತ್ಯ ಈ ರಾಜ್ಯದಲ್ಲಿ ಒಟ್ಟು ೩೧೫ ಭಾಷಾಅಲ್ಪಸಂಖ್ಯಾತರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿದ್ದು, ೨೯೩೮೦ ವಿದ್ಯಾರ್ಥಿಗಳು ಓದುತ್ತಿ ದ್ದಾರೆ. ೧೧೩೭ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಇವುಗಳಲ್ಲಿ ಅಸಾಮಿ, ಬೆಂಗಾಲಿ ಭಾಷೆಗಳ ಶಾಲೆಗಳೇ ಹೆಚ್ಚು. ಉರ್ದು, ನೇಪಾಳಿ, ಮಿರ್ಝೋ ಭಾಷೆಗಳ ಶಾಲೆಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿವೆ. ಈ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರ ಭಾಷೆ ಯ ಪಠ್ಯಪುಸ್ತಕಗಳಿಗೆ ಕೊರತೆ ಇಲ್ಲವೆಂದು ತಿಳಿಸಿದೆ. ಆದರೆ ಈವರೆಗೆ ಸರಕಾರವು ಪಠ್ಯಪುಸ್ತಕಗಳ ಪ್ರಕಟನಾ ಯೋಜನೆಯನ್ನು ಕೈಗೊಂಡಿಲ್ಲ. ೧೯೭೫-೭೬ ರಿಂದೀಚೆಗೆ ಭಾಷಾಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ ಶಿಕ್ಷಣ ಸೌಲಭ್ಯಗಳ ಅಂಕಿ-ಅಂಶಗಳನ್ನು ದಗಿಸಿಲ್ಲ.

೩. ಮಣಿಪುರ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ—೧೦,೭೨,೭೫೩.

ಈ ರಾಜ್ಯದಲ್ಲಿ ಮಣಿಪುರಿ ಭಾಷೆಯನ್ನೇ ಬಹುಸಂಖ್ಯಾತರು ಆಡುತ್ತಿದ್ದು (೬೩.೪%) ಥಾಡೋ ಟಂಕೂಲ್, ಕಬೂಯಿ, ಮಾಯೋ, ಪೈಟೀ, ನೂರ್, ಕಚ್, ನಾಗಾ, ವೈಫೆಲ್, ಬಂಗಾಲಿ ಇತ್ಯಾದಿ ಭಾಷೆಗಳನ್ನು ಹೊಂದಿದ ಭಾಷಾಅಲ್ಪ ಸಂಖ್ಯಾತರಿದ್ದಾರೆ. ಈ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಒದಗಿಸಿದ ಯಾವುದೇ ಶಿಕ್ಷಣ ಸೌಲಭ್ಯದ ವಿವರಣೆಯನ್ನು ನೀಡಿಲ್ಲ. ಕಮಿಷನರ್ ಅವರು ಮೇಲಿಂದ ಮೇಲೆ ಮಣಿಪುರ ರಾಜ್ಯ ಸರ್ಕಾರವನ್ನು ಪ್ರಾರ್ಥಿಸಿಕೊಂಡರೂ ಯಾವ ಪ್ರಯೋಜನವೂ ಆಗಿಲ್ಲ. ೧೯೬೧ ರ ಮುಖ್ಯಮಂತ್ರಿಗಳ ಸಭೆಯ ತೀರ್ಮಾನದ ರೀತ್ಯ ಭಾಷಾಅಲ್ಪಸಂಖ್ಯಾತರಿಗೆ ರಾಜ್ಯಸರ್ಕಾರವು ಯಾವುದೇ ಸೌಲಭ್ಯವನ್ನು ನೀಡಿರುವುದಿಲ್ಲ. ಮಾತೃಭಾಷೆಯಲ್ಲಿ ಓದಬಯಸುವ ಭಾಷಾಅಲ್ಪಸಂಖ್ಯಾತರಿಗೆ ಸರ್ಕಾರಿ ಶಾಲೆಗಳಲ್ಲಿ ಪ್ರವೇಶದ ನೋಂದಣಿಯನ್ನು ಮುಂಗಡವಾಗಿ ಮಾಡಿಕೊಳ್ಳಬೇಕೆಂಬ ಬಗ್ಗೆ ಸರ್ಕಾರವು ಒಂದು ಆದೇಶವನ್ನು ನೀಡಿದ್ದರೂ ಸಹಾ, ಅದನ್ನು ಕಾರ್ಯಗತಗೊಳಿಸಿದ ಮಾಹಿತಿಯೇ ದೊರೆಯುತ್ತಿಲ್ಲವಾದ್ದರಿಂದ ಕಮಿಷನರ್ ಅವರು ಯಾವುದೇ ತೀರ್ಮಾನಕ್ಕೆ ಬರುವುದು ಸಾಧ್ಯವಾಗಿಲ್ಲ. ರಾಜ್ಯದಲ್ಲಿಯ ಅನೇಕ ಭಾಷಾಅಲ್ಪ ಸಂಖ್ಯಾತರು ಸರ್ಕಾರಿ ಶಾಲೆಗಳಲ್ಲಿ ತಮ್ಮ ಮಾತೃಭಾಷಾ ಮಾಧ್ಯಮದ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ಮೇಲಿಂದ ಮೇಲೆ ಸರ್ಕಾರವನ್ನು ಪ್ರಾರ್ಥಿಸಿಕೊಂಡಿದ್ದರೂ ಯಾವ ಪ್ರಯೋಜನವೂ ಆಗಿಲ್ಲ. ಈವರೆಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಯಾವ ಯಾವ ರೀತಿಯ ಶೈಕ್ಷಣಿಕ ಸೌಲಭ್ಯವನ್ನು ಮಣಿಪುರ ರಾಜ್ಯವು ಒದಗಿಸಿದೆ ಎಂಬ ಬಗ್ಗೆ ಯಾವ ಮಾಹಿತಿಯೂ ಕಮಿಷನರ್ ಅವರಿಗೆ ತಲುಪಿರುವುದಿಲ್ಲ.

ಒಂದರಿಂದ ಹತ್ತನೇ ತರಗತಿಯವರೆಗೆ ಭಾಷಾಅಲ್ಪಸಂಖ್ಯಾತರ ಭಾಷೆಗಳಲ್ಲಿ ಪಠ್ಯಪುಸ್ತಕಗಳು ದೊರೆಯುತ್ತಿವೆ. ಎಂದು ಸರ್ಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದರೂ ವಿವರಣಾತ್ಮಕ ವರದಿಯನ್ನು ಸರ್ಕಾರ ಕಮಿಷನರ್ ಅವರಿಗೆ ನೀಡಿರುವುದಿಲ್ಲ. ಭಾಷಾಅಲ್ಪಸಂಖ್ಯಾತರ ಶಿಕ್ಷಕರಿಗೆ ತರಪೇತಿ ನೀಡಲು ಅಲ್ಲಿರುವ ತರಪೇತಿ ಕೇಂದ್ರಗಳಲ್ಲಿ ಭಾಗಶಃ ಮೂವತ್ತರಷ್ಟು ಜಾಗೆಗಳನ್ನು ಕಾದಿರಿಸಲಾಗಿದೆ ಎಂಬ ಸರ್ಕಾರದ ಆದೇಶವಿದ್ದರೂ ತರಪೇತಿ ಹೊಂದಿದ ಶಿಕ್ಷಕರ ಅಂಕಿ-ಅಂಶಗಳನ್ನು ಸರ್ಕಾರ ಒದಗಿಸಿಲ್ಲ. ಭಾಗಶಃ ೧೫ ರಿಂದ ೨೦ ರ ವರೆಗೆ ಭಾಷಾಅಲ್ಪಸಂಖ್ಯಾತರು ರಾಜ್ಯದ ಯಾವ ಭಾಗದಲ್ಲಿರುವರೋ ಅವರಿಗೆ ಅವರವರ ಭಾಷೆಯಲ್ಲಿ ಮಹತ್ವದ ಸರ್ಕಾರಿ ಪ್ರಕಟಣೆಗಳನ್ನು ನೀಡುತ್ತಿಲ್ಲ. ಈ ಬಗ್ಗೆ ಕಮಿಷನರ್ ಅವರು ರಾಜ್ಯ ಸರ್ಕಾರಕ್ಕೆ ಉಗ್ರ ಎಚ್ಚರಿಕೆಯನ್ನು ನೀಡಿದ್ದಾರೆ.

ಉತ್ತರ-ಪೂರ್ವ ವಲಯ

(North-Eastearn Zone)

೧. ಆಸಾಮ್ ೨. ಮಣಿಪುರ ೩. ಮೇಘಾಲಯ
೪. ನಾಗಾಲ್ಯಾಂಡ್ ೫. ತ್ರಿಪುರ
೬. ಅರುಣಾಚಲ ಪ್ರದೇಶ ೭. ಮಿಝೋರಾಂ

೧. ಆಸಾಮ್ :

೧೯೮೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯ ೧,೪೬,೨೫೧೫೭

ಇಲ್ಲಿ ೩೭೬೭೭ ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ ೨೫೪೪ ಬಂಗಾಳಿ ಭಾಷೆಯ ಶಾಲೆಗಳಿವೆ. ಅವುಗಳಲ್ಲಿ ೨೦೧೫೫೪ ಬಂಗಾಳಿ ವಿದ್ಯಾರ್ಥಿಗಳಿದ್ದರೆ ಕೆಲಸ ಮಾಡುವ ಒಟ್ಟು ೮೩೪೪ ಶಿಕ್ಷಕರಲ್ಲಿ ೬೧೧೮ ಬಂಗಾಳಿ ಶಿಕ್ಷಕರು, ೧೨೮೦ ಬೋಡೋ ಭಾಷೆಯ ಶಿಕ್ಷಕರು, ೪೦೦ ಹಿಂದೀ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಇನ್ನುಳಿದ ಭಾಷಾಅಲ್ಪಸಂಖ್ಯಾತರಿಗೆ ದೊರೆತಿರುವ ಪ್ರಾಧಾನ್ಯತೆ ಏನು? ೩೮೯೫೨೬ ವಿದ್ಯಾರ್ಥಿಗಳಲ್ಲಿ ಬಂಗಾಳಿ, ಬೋಡೋ, ಹಿಂದೀ ವಿದ್ಯಾರ್ಥಿಗಳೇ ಅಧಿಕ. ಆಸಾಮ್ ರಾಜ್ಯವು ಕೂಡಾ ಈಚಿನ ಮೂರು ವರ್ಷಗಳಲ್ಲಿ ಯಾವುದೇ ರೀತಿಯ ಅಂಕಿಅಂಶಗಳನ್ನು ಒದಗಿಸಿಲ್ಲ.

ಆಸಾಮ್ ರಾಜ್ಯದಲ್ಲಿ ಆಸಾಮಿ ಭಾಷೆಯನ್ನು ಬಿಟ್ಟು, ಇನ್ನುಳಿದ ಭಾಷಾ ಅಲ್ಪಸಂಖ್ಯಾತರು ಕೂಡಾ ಮಾಧ್ಯಮಿಕ ಶಿಕ್ಷಣವನ್ನು ಆಸಾಮಿ ಭಾಷೆಯಲ್ಲಿಯೋ ಕಡ್ಡಾಯವಾಗಿ ಕಲಿಯಬೇಕೆಂದು ೧೧-೧-೧೯೭೩ರ ಕ್ಯಾಬಿನೇಟ್ ಸಭೆಯಲ್ಲಿ ತೀರ್ಮಾನಿಸಿದ್ದಾರೆ. ಅಲ್ಲಿನ ಸರಕಾರವು ಆಸಾಮಿ ಭಾಷೆಯನ್ನು ಇತರ ಭಾಷಾಅಲ್ಪಸಂಖ್ಯಾತರ ಮಾಧ್ಯಮಿಕ ಶಿಕ್ಷಣದಲ್ಲಿ ಕಡ್ಡಾಯವಾಗಿ ಕಲಿಯಲೇಬೇಕೆಂದು ತೀರ್ಮಾನಿಸಿರುವುದು ಆಡಳಿತಾನುಕೂಲತೆಯ ದೃಷ್ಟಿಯಿಂದ ಎಂಬುದನ್ನು ಇಲ್ಲಿ ಗಮನಿಸಬೇಕು.

ರಾಜ್ಯದಲ್ಲಿ ಆಸಾಮಿ ಭಾಷೆಯನ್ನು ಹೊರತು ಪಡಿಸಿರುವ ಬೋಡೋ, ನೇಪಾಳಿ, ಮಿರಿ, ಓರಿಯಾ ಹಾಗೂ ಗುಡ್ಡಗಾಡು ಜನಗಳ ಭಾಷೆ, ಉಪಭಾಷೆಗಳು ಗಾರೋ, ಹಮ್ರ, ಬೇಸಿ, ಲೂಷಾಯಿ, ಮಿಕ್ಕಿರ್ ಭಾಷೆಗಳಿಗೆ ಪ್ರಾಥಮಿಕ ಶಾಲೆಗಳಲ್ಲಿ ಭಾಷಾ ಮಾಧ್ಯಮದ ಅವಕಾಶವಿದ್ದರೂ ಅವು ಯಾವುದೇ ರೀತಿಯ ಏಳಿಗೆಯನ್ನು ಹೊಂದಿಲ್ಲ. ಆಶ್ಚರ್ಯವೆಂದರೆ ಆಸಾಮ್ ರಾಜ್ಯದಲ್ಲಿ ಶೇಖಡ ೧೫ ಪ್ರಮಾಣದಲ್ಲಿ ವಾಸಿಸಿರುವ ಭಾಷಾ ಅಲ್ಪಸಂಖ್ಯಾತರ ಪ್ರದೇಶಗಳು ಎಲ್ಲಿವೆ? ಎಂಬ ಯಾದಿಯನ್ನೇ ಸರಕಾರ ಸಿದ್ಧಪಡಿಸಿಕೊಂಡಿಲ್ಲವಾದ ಕಾರಣ ಸರ್ಕಾರದ ಯಾವುದೇ ಮಹತ್ವದ ಪ್ರಕಟಣೆಗಳನ್ನು ಅವರವರ ಮಾತೃ ಭಾಷೆಯಲ್ಲಿ ಪ್ರಕಟಿಸುತ್ತಿಲ್ಲ.

ಅವಶ್ಯಕತೆಯಿಲ್ಲ. ಆದರೆ ಪಂಜಾಬಿ ಭಾಷೆಗೆ ಮಹತ್ವದ ಸರಕಾರಿ ತಿಳುವಳಿಕೆಗಳನ್ನು ತರ್ಜುಮೆ ಮಾಡುವ ವಿಭಾಗಗಳನ್ನು ಸರಕಾರೀ ವಲಯದಲ್ಲಿ ನಿರ್ಮಿಸಬೇಕೆಂಬ ಬೇಡಿಕೆಯನ್ನು ಈವರೆಗೂ ಈಡೇರಿಸಿಲ್ಲ. ಲೋಕ ಸೇವಾ ಆಯೋಗದಿಂದ ನೇಮಿಸಿ ಕೊಳ್ಳುವ ಉನ್ನತ ಸರಕಾರಿ ಹುದ್ದೆಗಳಿಗೆ ಸೇರುವವರ ಮೇಲೆ ಯಾವುದೇ ಭಾಷೆಯ ನಿರ್ಬಂಧವಿಲ್ಲದಿದ್ದರೂ ಹಿಂದೀ ಮತ್ತು ಇಂಗ್ಲೀಷ್ ಭಾಷೆಗಳು ಅತ್ಯಾವಶ್ಯಕವಾಗಿ ಗೊತ್ತಿರಲೇಬೇಕು. ಭಾಷಾಅಲ್ಪಸಂಖ್ಯಾತರ ರಕ್ಷಣೆಯ ವಿಷಯವಾಗಿ ಬೆಂಗಾಲಿ ಇಂಗ್ಲೀಷ್, ಗುಜರಾತಿ, ಹಿಂದೀ, ಕನ್ನಡ, ಮಲೆಯಾಳಂ, ಮರಾಠಿ, ಪಂಜಾಬಿ, ಸಿಂಧೀ, ತಮಿಳು, ತೆಲುಗು, ಉರ್ದುಭಾಷೆಗಳಲ್ಲಿ ಕರಪತ್ರಗಳನ್ನು ಹಂಚಲಾಗಿದೆ. ಉರ್ದು ಅಕಾಡೆಮಿಯನ್ನು ದೆಹಲಿಯಲ್ಲಿ ನಿರ್ಮಿಸುವ ಬಗ್ಗೆ ಸಲ್ಲಿಸಿದ ಬೇಡಿಕೆಯನ್ನು ಈವರೆಗೆ ಗಣನೆಗೆ ತೆಗೆದುಕೊಂಡಿಲ್ಲ.

**

ೂಡಬೇಕೆಂದು ದೆಹಲಿಯ ಕೇಂದ್ರ ಮಾಧ್ಯಮಿಕ ಶಿಕ್ಷಣ ಸಂಸ್ಥೆಗೆ ಬೇಡಿಕೆಯನ್ನು ಸಲ್ಲಿ ದ್ದು, ಈ ವರೆವಿಗೂ ಈಡೇರುವುದಿಲ್ಲ. ಅದರಂತೆಯೇ ಇತರ ಭಾಷಾ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೂ ಕೂಡಾ ಅವರವರ ಮಾತೃಭಾಷೆಯ ಪ್ರಶ್ನೆ ಪತ್ರಿಕೆ ಗಳನ್ನು ಪೂರೈಸುವ ಬಗ್ಗೆ ಬೇಡಿಕೆಯನ್ನು ಸಲ್ಲಿಸಿದ್ದರೂ ಅದಕ್ಕೆ ಮನ್ನಣೆ ದೊರೆತಿಲ್ಲ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಸಿಂಧೀ ಭಾಷೆಯಲ್ಲಿ ಶಿಕ್ಷಣವನ್ನು ನೀಡುತ್ತಿದ್ದರೂ ಅವರಿಗಾಗಿ ಅವರ ಭಾಷೆಯಲ್ಲಿ ಪಠ್ಯಪುಸ್ತಕಗಳಿಲ್ಲ. ಚಿಕ್ಕ ಪ್ರಮಾಣ ದಲ್ಲಿ ಭಾಷಾಅಲ್ಪಸಂಖ್ಯಾತರ ಪಠ್ಯಪುಸ್ತಕಗಳನ್ನು ಅಚ್ಚುಮಾಡುವುದು ಸಾಧ್ಯವಾಗುವು ದಿಲ್ಲ. ಖಾಸಗೀ ಸಂಸ್ಥೆಯವರಾಗಲಿ ಇಲ್ಲವೇ ಖಾಸಗೀ ಶಿಕ್ಷಣ ಸಂಸ್ಥೆಯವರಾಗಲಿ ಈ ಪಠ್ಯಪುಸ್ತಕಗಳ ವ್ಯವಸ್ಥೆಯನ್ನು ಮಾಡಿಕೊಂಡು ಭಾಷಾಅಲ್ಪಸಂಖ್ಯಾತರ ಸಂರಕ್ಷಣೆ ಮಾಡಿಕೊಳ್ಳುವುದು ಅವರ ಹೊಣೆಗಾರಿಕೆಯಾಗಿದೆ. ಎಂದು ಡಿಲ್ಲಿ ಆಡಳಿತೆಯು ಸ್ಪಷ್ಟವಾಗಿ ತಿಳಿಸಿದೆ. ಡಿಲ್ಲಿ ಆಡಳಿತವು ಭಾಷಾ ಶಿಕ್ಷಕರನ್ನು ನೇಮಿಸಿ ಕೊಳ್ಳುವಾಗ ಯಾವ ಯಾವ ಭಾಷೆಯ ಶಿಕ್ಷಕರು ಬೇಕಾಗಿದ್ದಾರೆಂಬುದನ್ನು ಜಾಹೀ ರಾತುಗಳಲ್ಲಿ ನಮೂದಿಸದೇ, ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿರುವುದರಿಂದ ಭಾಷಾ ಅಲ್ಪಸಂಖ್ಯಾತರಿಗೆ ಶಿಕ್ಷಣರಂಗದಲ್ಲಿ ಭಾಷಾ ಶಿಕ್ಷಕರಾಗಿ ಕೆಲಸ ಮಾಡುವ ಅವಕಾಶವೇ ತಪ್ಪಿ ಹೋಗುತ್ತಿದೆ. ಎಂದು ದೆಹಲಿಯ ಪಂಜಾಬಿ ಭಾಷಾ ಶಿಕ್ಷಕರ ಸಂಘವು ಸಲ್ಲಿಸಿದ ಬೇಡಿಕೆಗೆ ಸರಕಾರದ ಉತ್ತರವಿಲ್ಲ. ಹಾಗೂ ದೆಹಲಿಯ ಅನೇಕ ಭಾಗಗಳ ಶಾಲೆಗಳಲ್ಲಿ ಸಿಂಧೀಭಾಷೆಯಲ್ಲಿ ಓದುವ ಅವಕಾಶವಿದ್ದರೂ ಕಲಿಸುವ ಶಿಕ್ಷಕರೇ ಇರುವುದಿಲ್ಲ. ಹಾಗೂ ಸಿಂಧೀ ಶಿಕ್ಷಕರ ನೇಮಕಾತಿ, ಭಡ್ತಿ ಇತ್ಯಾದಿ ವಿಷಯಗಳಲ್ಲಿ ಅನ್ಯಾಯವಾಗು ತ್ತಿದೆ ಎಂದು ಸಿಂಧೀಭಾಷಾ ಶಿಕ್ಷಕರ ಸಂಸ್ಥೆಯು ತನ್ನ ಬೇಡಿಕೆಯನ್ನು ಸಲ್ಲಿಸಿದೆ. ಅದರಂತೆಯೇ ಉರ್ದು ಮಾಧ್ಯಮದಲ್ಲಿ ಓದುವ ಅವಕಾಶವಿದ್ದರೂ ಶಾಲೆಗಳಲ್ಲಿ ಗಣಿತ, ವಿಜ್ಞಾನ, ಭಾಷೆ, ಇತ್ಯಾದಿಗಳನ್ನು ಹಿಂದೀ ಭಾಷೆಯ ಮೂಲಕ ಕಲಿತು, ಉರ್ದು ಮಾಧ್ಯಮದಲ್ಲಿ ಓದಬೇಕಾಗಿರುವುದರಿಂದ ತೊಂದರೆಯಾಗುತ್ತಿದೆ. ಕೂಡಲೇ ಉರ್ದು ಶಿಕ್ಷಕರನ್ನು ನೇಮಿಸಬೇಕೆಂದು ಅನೇಕ ಮುಸಲ್ಮಾನರು ತಮ್ಮ ಅಹವಾಲವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ೧೫ ರಿಂದ ೨೦ ಪ್ರಮಾಣದ ಭಾಷಾ ಅಲ್ಪಸಂಖ್ಯಾತರು ಯಾವೊಂದು ಭಾಗದಲ್ಲಿಯೂ ನೆಲೆಗೊಂಡಿಲ್ಲವೆಂಬ ಕಾರಣದಿಂದ ೧೯೭೭ ಜುಲೈ ತಿಂಗಳಿಂದ ೧೯೭೭ ರಲ್ಲಿ ಲೆಫ್ಟಿನೆಂಟ್ ಗೌವರ್ನ್‌ರರ ೩೫೦ ಪುಟದ ಆಯುವ್ಯಯ ಪತ್ರವನ್ನು ಹಾಗೂ ಸರಕಾರದ ಪ್ರಮುಖ ಹಾಗೂ ಮಹತ್ವದ ತಿಳು ವಳಿಕೆಗಳನ್ನು ಉರ್ದುಭಾಷೆಯೊಂದರಲ್ಲಿ ಮಾತ್ರ ಪ್ರಕಟಿಸಿದ್ದಾರಲ್ಲದೆ, ಇತರ ಯಾವ ಭಾಷಾಅಲ್ಪಸಂಖ್ಯಾತರ ಭಾಷೆಯಲ್ಲಿಯೂ ಈ ತಿಳುವಳಿಕೆಯನ್ನು ನೀಡಿಲ್ಲ. ದೆಹಲಿಯಲ್ಲಿ ಎಲ್ಲ ಸರಕಾರಿ ಕಛೇರಿಗಳಲ್ಲಿ ಉರ್ದುಭಾಷೆಯ ಅರ್ಜಿಗಳು ಹಾಗೂ ಕಾಗದ ಪತ್ರ ಗಳನ್ನು ಸ್ವೀಕರಿಸಲಾಗುತ್ತಿದೆ. ಇವುಗಳನ್ನು ಯಾವುದೇ ಭಾಷೆಗೆ ತರ್ಜುಮೆ ಮಾಡುವ

ಕೊನೆಯದಾಗಿ ೧೯೫೭ ರಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ ಇ.ಎಂ.ಎಸ್. ನಂಬೂದ್ರಿಪಾದ್ ಅವರು "The national question In Kerala" ಎಂಬ ಗ್ರಂಥದಲ್ಲಿ Conceeds that the people of the Northern half of the then Kasaragodu taluk (which is mainly inhabited by Tulu people) are closer to Karnataka and also that this portion is not part of Kerala".

ಎಂದು ಹೇಳಿರುವುದನ್ನು ಗಮನಿಸಿ ಈಗಲಾದರೂ ಕೇರಳ ಸರ್ಕಾರವು ಬಹು ಭಾಷಾ ಸಂಖ್ಯಾತರಾಗಿರುವ ಕೇರಳದ ಕನ್ನಡಿಗರ ಮೇಲೆ ಪ್ರಾಮುಖ್ಯವಾಗಿ ಕಾಸರಗೋಡು ತಾಲೂಕಿನ ಮೇಲೆ ಭಾಷಾದ್ವೇಷವನ್ನು ಸಾಧಿಸದಿರಲಿ.

೧೯೬೦-೬೧ ರ ಅಂಕಿ-ಅಂಶಗಳ ರೀತ್ಯ ಕಣ್ಣಾನೂರು ಜಿಲ್ಲೆಯಲ್ಲಿ ೧೬೬ ಪ್ರಾಥಮಿಕಶಾಲೆಗಳಿದ್ದು ೨೬೮೪೮ ವಿದ್ಯಾರ್ಥಿಗಳು ಓದುತ್ತಿದ್ದರು ೧೦೦೭ ಕನ್ನಡ ಶಿಕ್ಷಕರು ಕೆಲಸ ಮಾಡುತ್ತಿದ್ದರು ಆದರೆ ಈಗ ಈ ಅಂಕಿ-ಅಂಶಗಳು ದೊರೆಯುತ್ತಿಲ್ಲ. ಇದಕ್ಕೆ ಕೇರಳ ಸರಕಾರದ ಉತ್ತರವೇನು ?

ತಮಿಳುನಾಡು

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೪,೧೧,೯೯,೧೬೮.

ಕರ್ನಾಟಕದಲ್ಲಿ ತಮಿಳು ಭಾಷಾ ಐಚ್ಛಿಕವಿಷಯವಾಗಿ ತೆಗೆದುಕೊಂಡ ಹಾಗೂ ತಮಿಳು ಪ್ರಾಥಮಿಕ ಶಾಲೆಗಳಲ್ಲಿ ೮೫೮೬೦ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗಾಗಿ ೧೮೮೯ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ೨೫೩ ಕ್ಕೂ ಹೆಚ್ಚು ತಮಿಳು ಪ್ರಾಥಮಿಕ ಶಾಲೆಗಳಿವೆ. ಅಷ್ಟೆಅಲ್ಲ, ಕೋಲಾರ ಚಿನ್ನದ ಗಣಿಯಲ್ಲಿಯ ಬಹು ಸಂಖ್ಯಾತ ಕೆಲಸಗಾರರು ತಮಿಳು ನಾಡಿನವರಿರುವುದರಿಂದ ಅವರ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ದೃಷ್ಟಿಯಿಂದ ಕೆ.ಜಿ.ಎಫ್‌ನಲ್ಲಿ ೫೦ ಕ್ಕೂ ಹೆಚ್ಚು ತಮಿಳು ಪ್ರಾಥಮಿಕ ಶಾಲೆಗಳಿವೆ. ಆದರೆ ತಮಿಳು ನಾಡಿನಲ್ಲಿ ಕನ್ನಡ ಭಾಷೆಯೇ ಸಮೂಲ ನಾಶವನ್ನು ಹೊಂದಿದೆ. ೧೯೭೬-೭೭ ರಲ್ಲಿ ತಮಿಳು ನಾಡಿನಲ್ಲಿ ಕೇವಲ ೫೩ ಪ್ರಾಥಮಿಕ ಶಾಲೆಗಳಿದ್ದು ೬೮೪೩ ವಿದ್ಯಾರ್ಥಿಗಳು ಓದುತ್ತಿದ್ದರು. ಮಾಧ್ಯಮಿಕ ಶಾಲೆಗಳಲ್ಲಿ ೪೬೦ ಕನ್ನಡ ವಿದ್ಯಾರ್ಥಿಗಳಿದ್ದು ಒಟ್ಟು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ೧೮೭ ಕನ್ನಡ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಕರ್ನಾಟಕದ ಅವಿಭಾಜ್ಯ ಅಂಗವಾಗಿ ಈಗಲೂ ತಮಿಳುನಾಡಿನಲ್ಲಿ ಉಳಿದು ಕೊಂಡಿರುವ ನೀಲಗಿರಿ ಜಿಲ್ಲೆಯ ಗುಡಲೂರು, ಕುನ್ನೂರು, ಊಟಿ ತಾಲೂಕುಗಳಲ್ಲಿ ಶೇಕಡಾ ೯೫ ರಷ್ಟು ಕನ್ನಡಿಗರಿದ್ದು, ರಾಜ್ಯ ಪುನರ್ವಿಂಗಡಣೆಯ ಪೂರ್ವದಲ್ಲಿ ಅಲ್ಲಿ ನಡೆಸಲ್ಪಡುತ್ತಿದ್ದ ಕನ್ನಡದ ಶಾಲೆಗಳನ್ನು ಈಗ

ಮುಚ್ಚಲಾಗಿದೆ. ಇದಲ್ಲದೆ ಸಾವಿರಾರು ಕನ್ನಡ ಕುಟುಂಬಗಳು ಒಲಸೆ ಹೋಗು ವಂತೆಮಾಡಿ, ಅಲ್ಲಿರುವ ಕನ್ನಡಿಗರ ಆಸ್ತಿ-ಪಾಸ್ತಿಗಳನ್ನು ಸಿಲೋನಿನಿಂದ ಬಂದು ನೆಲಸುತ್ತಿರುವ ತಮಿಳರಿಗೆ ಹಂಚುತ್ತಿದ್ದಾರೆ. ತಲೆಮಾರಿನಿಂದ ಗುಡಲೂರಿನಲ್ಲಿ ವಾಸವಾಗಿರುವ ಕನ್ನಡಿಗರ ಕಾಫಿ, ಚಹಾ ಹಾಗೂ ಕರಿಮೆಣಸಿನ ತೋಟಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಹಾಳು ಮಾಡುತ್ತಿದ್ದಾರೆ. ಅವ್ಯಾಹತವಾಗಿ ನಡೆಯು ತ್ತಿರುವ ಈ ದೌರ್ಜನ್ಯವನ್ನು ಖಂಡಿಸಿ ತಮಗೆ ರಕ್ಷಣೆ ನೀಡಬೇಕೆಂದು ಅಲ್ಲಿಯ ಕನ್ನಡಿ ಗರು ಕರ್ನಾಟಕ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದ್ದಾರೆ.

ಇಂಥ ಸನ್ನಿವೇಶದಲ್ಲಿ ಈ ಭಾಗದಲ್ಲಿ ಕನ್ನಡದ ಶಾಲೆಗಳು ಅಲ್ಲೊಂದು ಇಲ್ಲೊಂದು ಉಳಿದುಕೊಂಡಿವೆ. ೧೯೬೩–೬೪ ರ ಅಂಕಿ–ಅಂಶಗಳ ರೀತ್ಯ ಸೇಲಂನಲ್ಲಿ ೬ ಕನ್ನಡ ಶಾಲೆಗಳು ೩೯೦ ವಿದ್ಯಾರ್ಥಿಗಳು, ೧೦ ಶಿಕ್ಷಕರಿದ್ದರು. ಕೋಯಿಮತ್ತೂ ರಲ್ಲಿದ್ದ ೩೭ ಕನ್ನಡ ಶಾಲೆಗಳಲ್ಲಿ ೩೦೮೯ ವಿದ್ಯಾರ್ಥಿಗಳು ಓದುತ್ತಿದ್ದು, ೬೫ ಜ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಅಂತೆಯೇ ನೀಲಗಿರಿಯಲ್ಲಿ ೭ ಜನ ಶಿಕ್ಷಕರು ೩ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಶಿಕ್ಷಣ ನೀಡುತ್ತಿದ್ದರು. ಈ ಅಂಕಿ–ಅಂಶಗಳು ಈಚೆ ಮಾಯವಾಗಿವೆ. ಮದರಾಸು ಪಟ್ಟಣದಲ್ಲಿ ಒಂದೂ ಕನ್ನಡ ಶಾಲೆಗಳಿಲ್ಲದಿರುವುದು ಆಶ್ಚರ್ಯಕರವಲ್ಲವೆ ? ತಮಿಳುನಾಡಿನಲ್ಲಿ ತಮಿಳು ಭಾಷೆಯನ್ನು ಹೊರತು ಪಡಿಸಿ ಅರ್ಜಿಗಳನ್ನು ಸಹಾ ಕಚೇರಿಗಳಲ್ಲಿ ಸ್ವೀಕರಿಸಲಾಗುವುದಿಲ್ಲ. ಅಲ್ಪಸಂಖ್ಯಾತರ ಹಿ ರಕ್ಷಣೆಗೆ ಸಂಬಂಧಪಟ್ಟ ಕಾನೂನುಗಳನ್ನು ತತ್ವಶಃ ಒಪ್ಪಿಕೊಂಡಿದ್ದಾರೆಯೇ ಹೊರತು ಕಾರ್ಯತಃ ಯಾವುದನ್ನೂ ಆಚರಿಸುತ್ತಿಲ್ಲ.

ತಮಿಳು ಭಾಷೆ ಬಾರದಿದ್ದವರಿಗೆ ಅಲ್ಲಿ ಸರ್ಕಾರಿ ಹುದ್ದೆಗಳನ್ನು ನೀಡುತ್ತಿಲ್ಲ. ತಮಿಳು ಭಾಷೆಯನ್ನು ಕಲಿಯದಿದ್ದರೆ ಬೇರೆ ಮಾರ್ಗವೇ ಇಲ್ಲವೆಂಬ ವಾತಾವರಣ ಅಲ್ಲಿ ವಾಸಿಸುವ ಭಾಷಾಅಲ್ಪಸಂಖ್ಯಾತರ ಮನಸ್ಸಿನ ಮೇಲೆ ಅಚ್ಚಳಿಯದೇ ಮೂಡಿ ದ್ದಾರೆ. ಆಶ್ಚರ್ಯವೆಂದರೆ ಇತ್ತಿತ್ತಲಾಗಿ ಬೆಂಗಳೂರು ನಗರವೊಂದರಲ್ಲೇ ಇರುವ ೩೫೦ ಕೊಳಚೆ ಪ್ರದೇಶಗಳಲ್ಲಿ ೫ ರಲ್ಲಿ ಕನ್ನಡಿಗರು, ೩ ರಲ್ಲಿ ತೆಲುಗರು ಇನ್ನುಳಿದ ೩ ಕೊಳಚೆ ಪ್ರದೇಶಗಳನ್ನು ೩ ಲಕ್ಷಕ್ಕೂ ಮಿಕ್ಕಿ ತಮಿಳರು ಅಕ್ರಮಿಸಿಕೊಂಡಿದ್ದಾರೆ. ಅವರೆಲ್ಲರಿಗೂ ತಮಿಳು ನಾಡಿಗಿಂತ ಕರ್ನಾಟಕ ರಾಜ್ಯವೇ ಹೆಚ್ಚು ಹಿತಕಾ ಎನಿಸಿದೆ.

ಪಾಂಡಿಚೇರಿ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೪.೭೧,೭೦೭,

ಈ ರಾಜ್ಯದಲ್ಲಿ ತಮಿಳು ಪ್ರಮುಖ ಭಾಷೆಯಾಗಿದ್ದು ಗಣನೀಯ ಪ್ರಮಾಣದಲ್ಲಿ ಮಲೆಯಾಳಂ, ಮತ್ತು ತೆಲುಗು ಭಾಷೆಗಳು ಪ್ರಚಲಿತದಲ್ಲಿವೆ. ಮಲೆಯಾಳೀ ಭಾಷೆಯ ಹನ್ನೊಂದು ಪ್ರಾಥಮಿಕ ಶಾಲೆಗಳಲ್ಲಿ, ೪೨೯೩ ವಿದ್ಯಾರ್ಥಿಗಳು ಓದುತಿದ್ದು ೧೩೧ ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಅವರಂತೆಯೇ ತೆಲುಗು ಭಾಷೆಯ ೧೨ ಪ್ರಾಥಮಿಕ ಶಾಲೆಗಳಲ್ಲಿ ೨೧೪೪ ವಿದ್ಯಾರ್ಥಿಗಳು ಓದುತ್ತಿದ್ದು ೬೭ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ೪ ಭಾಷಾ ವಿಭಾಗಗಳಿದ್ದು ಆಡಳಿತೆಯ ದೃಷ್ಟಿಯಿಂದ ಆಡಳಿತಭಾಷೆ ಪ್ರಾಮುಖ್ಯವಾಗಿ ತಮಿಳಾಗಿದ್ದರೂ ಮಲೆಯಾಳಂ, ಇಂಗ್ಲೀಷ್ ಫ್ರೆಂಚ್ ಭಾಷೆಗಳನ್ನೂ ಕೂಡಾ ಆಡಳಿತ ಭಾಷೆಯನ್ನಾಗಿ ಅಂಗೀಕರಿಸಿರುವುದರಿಂದ ಭಾಗಶಃ ೧೫ ರಿಂದ ೨೦ ರ ವರೆಗೆ ಅಲ್ಲಲ್ಲಿ ನೆಲೆಸಬಹುದಾಗಿದ್ದ ಭಾಷಾ ಅಲ್ಪಸಂಖ್ಯಾತರ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆ ಕಾರಣಕ್ಕಾಗಿ ಸರಕಾರದ ಮಹತ್ವದ ತಿಳಿವಳಿಕೆಗಳನ್ನು ತಮಿಳು, ಇಂಗ್ಲಿಷ್ ಮಳೆಯಾಳಂ, ತೆಲುಗು ಭಾಷೆಗಳಲ್ಲಿ ಪ್ರಕಟಿಸುತ್ತಿದ್ದಾರೆ.



ಪಶ್ಚಿಮ ವಲಯ
(Western Zone)

೧. ಗುಜರಾತ್ ೨. ಮಹಾರಾಷ್ಟ್ರ
೩. ದಾದರಾ ಮತ್ತು ನಗರಹವೇಲಿ ೪. ಗೋವಾ ದೀವ್ ದಮನ್
೫. ಅಂದಮಾನ್ ಮತ್ತು ನಿಕೋಬಾರ್ ದ್ವೀಪಗಳು ೬. ಲಕ್ಷದ್ವೀಪ

೧. ಗುಜರಾತ್ :

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೨,೬೬,೯೭,೪೭೫.

ಗುಜರಾತಿನಲ್ಲಿ ಭಾಷಾಅಲ್ಪಸಂಖ್ಯಾತರ ೭೦೬ ಶಾಲೆಗಳಿದ್ದು ೧,೮೯,೬೧೪ ವಿದ್ಯಾರ್ಥಿಗಳು ಓದುತ್ತಿದ್ದಾರೆ. ೪೪೪೯ ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಅವರಲ್ಲಿ ೪೪,೫೩೩ ವಿದ್ಯಾರ್ಥಿಗಳು ಇಂಗ್ಲೀಷ್ ಮಾಧ್ಯಮದಲ್ಲಿ, ೩೧,೩೮೮ ವಿದ್ಯಾರ್ಥಿಗಳು ಹಿಂದೀ ಮಾಧ್ಯಮದಲ್ಲಿ, ೨೫,೩೪೭ ವಿದ್ಯಾರ್ಥಿಗಳು ಮರಾಠೀಮಾಧ್ಯಮದಲ್ಲಿ, ೩೮,೭೨೪ ವಿದ್ಯಾರ್ಥಿಗಳು ಸಿಂಧೀ ಭಾಷಾ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಇಲ್ಲಿಯೂ ಕೂಡಾ ಭಾಷಾಅಲ್ಪಸಂಖ್ಯಾತರ ಅನೇಕ ಗುಂಪುಗಳಿಗೆ ಹಾನಿಯಾಗುತ್ತಿದೆ.

ಪ್ರಾಮುಖ್ಯವಾಗಿ ೧೯೭೭ ರಲ್ಲಿ ಸಿಂಧೀ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಿಂಧೀ ಭಾಷೆಯು ಪ್ರಶ್ನೆ ಪತ್ರಿಕೆಗಳನ್ನೇ (ಎಸ್.ಎಸ್.ಸಿ) ಒದಗಿಸಿಲ್ಲ. ಪ್ರಶ್ನೆಗಳೇ ಬೇರೆ ಭಾಷೆಯಲ್ಲಿದ್ದಾಗ ಸಿಂಧೀ ವಿದ್ಯಾರ್ಥಿಗಳು ಉತ್ತರ ಬರೆಯುವ ಬಗೆ ಹೇಗೆ ? ಇವರುಗಳಿಗೆ ಪಠ್ಯ ಪುಸ್ತಕಗಳನ್ನು ಒದಗಿಸುವಾಗಲು ಮುದ್ರಣ ಸೌಕರ್ಯವಿಲ್ಲದ ನೆಪವನ್ನು ಮುಂದೆಮಾಡಿ ತೊಂದರೆ ಕೊಡುತ್ತಿದ್ದಾರೆ. ಇದಲ್ಲದೆ ಅನೇಕ ಸಿಂಧೀ ಖಾಸಗೀ ಶಾಲೆಗಳಿಗೆ ಸರ್ಕಾರ ಮಾನ್ಯತೆಯನ್ನು ನೀಡುತ್ತಿಲ್ಲ. ಹೀಗೆ ಕೊಡುತ್ತಿರುವ ಕಿರುಕುಳಗಳ ಬಗ್ಗೆ ಅಹಮದಾಬಾದಿನ ಸಿಂಧೀ ಸಂಘ, ಗಾಂಧೀ ಧಾಮದ ಸಾಮಾಜಿಕ ಸಂಸ್ಥೆ ಇತ್ಯಾದಿಯವರು ಅನೇಕ ದೂರುಗಳನ್ನು ಸರಕಾರಕ್ಕೆ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಇದೇ ರೀತಿ ಬುಲ್ಸಾರ್ ಜಿಲ್ಲೆಯ ಉಂಬರ ಗಾಮ್ ಮರಾಠೀ ಮಂಡಳದವರು ಅಲ್ಲಿಯ ಮರಾಠೀ ಶಾಲೆಗಳನ್ನು ಗುಜರಾತೀ ಶಾಲೆಗಳಾಗಿ ಪರಿವರ್ತಿಸುತ್ತಿರುವ ಬಗ್ಗೆ ಸರ್ಕಾರಕ್ಕೆ ದೂರು ಸಲ್ಲಿಸಿದರು. ಆಗ ಗುಜರಾತ್ ಸರ್ಕಾರವು ''ನಮ್ಮ ರಾಜ್ಯದ ಆಡಳಿತ ಭಾಷೆಯು ಗುಜರಾತಿಯಾಗಿರುವುದರಿಂದ ಮರಾಠೀ ವಿದ್ಯಾರ್ಥಿಗಳ ಪಾಲಕರು ಸ್ವಾಭಾವಿಕ

ವಾಗಿಯೇ ತಮ್ಮ ಮಕ್ಕಳನ್ನು ಗುಜರಾತೀ ಶಾಲೆಗೆ ಕಳುಹಿಸುತ್ತಿದ್ದಾರೆ. ಶ್ರೀಮಂತ ಮರಾಠೀ ಕುಟುಂಬಗಳು ಮಹಾರಾಷ್ಟ್ರ ದೇಶದಲ್ಲಿ ಹೋಗಿ ನೆಲೆಸುತ್ತಿದ್ದಾರೆ. ಇದಕ್ಕೆ ನಾವು ಹೊಣೆಗಾರರಲ್ಲ'' ಎಂದು ಉತ್ತರ ಕೊಟ್ಟಿತು. ಇದಲ್ಲದೆ ಭಾಷಾ ಅಲ್ಪ ಸಂಖ್ಯಾತ ಶಿಕ್ಷಕರಿಗೆ ಪ್ರತ್ಯೇಕವಾಗಿ ತರಬೇತಿ ಕೇಂದ್ರಗಳನ್ನು ತೆರೆದಿರುವುದಿಲ್ಲ. ಗುಜರಾತೀ ಭಾಷಾ ತರಬೇತಿ ಕೇಂದ್ರಗಳಲ್ಲಿಯೇ ಭಾಷಾಅಲ್ಪಸಂಖ್ಯಾತ ಮರಾಠಿ, ಹಿಂದೀ, ಸಿಂಧೀ ಹಾಗೂ ಉರ್ದು ಶಿಕ್ಷಕರಿಗೆ ಶಿಕ್ಷಣ ನೀಡುವ ತರಗತಿಗಳನ್ನು ವ್ಯವಸ್ಥೆ ಮಾಡಲಾಗಿದೆ. ಪ್ರತ್ಯೇಕ ಭಾಷಾಅಲ್ಪಸಂಖ್ಯಾತ ತರಬೇತಿ ಕೇಂದ್ರಗಳ ಬೇಡಿಕೆಗಳು ಸರಕಾರಕ್ಕೆ ಸಲ್ಲಿಸಲ್ಪಟ್ಟಿದ್ದರೂ ಅವು ತಿರಸ್ಕೃತವಾಗಿವೆ.

ಆಶ್ಚರ್ಯವೆಂದರೆ ೧೫ ಪ್ರಮಾಣಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಭಾಷಾ ಅಲ್ಪಸಂಖ್ಯಾತರಿಗೆ ಅವರವರ ಮಾತೃಭಾಷೆಯಲ್ಲಿಯೇ ಸರಕಾರದ ಮಹತ್ವದ ಕಾನೂನು, ತಿಳುವಳಿಕೆ ಇತ್ಯಾದಿ ಪ್ರಕಟಣೆಗಳನ್ನು ನೀಡಬೇಕೆಂಬ ಅಖಿಲಭಾರತ ತೀರ್ಮಾನವನ್ನು ಕಾರ್ಯಗತಗೊಳಿಸಬೇಕೆಂದು ಇಲ್ಲಿಯ ಮುಸಲ್ಮಾನರು ತಮ್ಮ ಬೇಡಿಕೆಯನ್ನು ಸಲ್ಲಿಸಿದರು. ಆಗ ಗುಜರಾತ ಸರ್ಕಾರವು "ಗುಜರಾತ್ ರಾಜ್ಯದಲ್ಲಿ ತಲೆತಲಾಂತರದಿಂದ ಇಲ್ಲಿಯೇ ಹುಟ್ಟಿ ಬೆಳೆದು, ವಾಸಿಸಿರುವ ಮುಸಲ್ಮಾನರ ಭಾಷೆಯು ನಿಜವಾಗಿಯೂ ಗುಜರಾತಿಯೇ, ಗುಜರಾತಿಯಲ್ಲಿಯೇ ಅವರು ಶಿಕ್ಷಣವನ್ನು ಹೊಂದಿದ್ದಾರೆ. ಇದು ಉರ್ದು, ಮುಸಲ್ಮಾನರ ಧಾರ್ಮಿಕ ಭಾಷೆಯೇ ಹೊರತು, ಮಾತೃಭಾಷೆಯಲ್ಲಿ ಈ ಕಾರಣಕ್ಕಾಗಿ ಸರ್ಕಾರವು ಯಾವುದೇ ಪ್ರಕಟಣೆಯನ್ನು ಉರ್ದು ಭಾಷೆಯಲ್ಲಿ ನೀಡಲು ಸಾಧ್ಯವಿಲ್ಲ" ಎಂದು ಸ್ಪಷ್ಟವಾಗಿ ತಿಳಿಸಿತು.

ಹೀಗೆ ಈ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರಿಗೆ ಯಾವುದೇ ರೀತಿಯ ರಕ್ಷಣೆ ಯಿರುವುದಿಲ್ಲ-ಎಂಬುದನ್ನು ಉರ್ದುಭಾಷೆಯ ಬಗ್ಗೆ ಅಲ್ಲಲ್ಲಿಯ ಸರ್ಕಾರತಳೆದಿರುವ ಧೋರಣೆಯೇ ಸಾಕ್ಷಿ.

೨. ಮಹಾರಾಷ್ಟ್ರ :

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೫,೦೪,೧೨,೨೩೫.

ಭಾರತದ ಭೂ ನಕ್ಷೆಯಲ್ಲಿ ಮಹಾರಾಷ್ಟ್ರದ ವೈಶಿಷ್ಟ್ಯವೇ ಬೇರೆ. ಸಂವಿಧಾನವನ್ನು ಗೌರವಿಸುವ ಹಾಗೂ ಭಾಷಾಅಲ್ಪಸಂಖ್ಯಾತರೊಂದಿಗೆ ಸೌಹಾರ್ದಯುತವಾಗಿ ನಡೆದುಕೊಳ್ಳುವ ಅಭ್ಯಾಸವೇ ಈ ರಾಜ್ಯಕ್ಕಿಲ್ಲ. ಇದಕ್ಕೆ ನಿದರ್ಶನವೆಂದರೆ ಶ್ರೀ ಶರತ್ ಪವಾರರು ಮುಖ್ಯಮಂತ್ರಿಗಳಾಗಿದ್ದಾಗ ಹೊಸದಾಗಿ ಪ್ರಾರಂಭಿಸುವ ಕನ್ನಡ ಶಾಲೆಗಳಿಗೆ ಸರಕಾರದ ಪರವಾನಿಗೆ ಕೊಡಲಾಗುವುದಿಲ್ಲವೆಂದು ಆದೇಶ ನೀಡಿದ್ದಾರೆ. ಹಾಗೂ ಈಗಿರುವ ಕನ್ನಡ ಮತ್ತು ಇತರ ಭಾಷಾಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳು ಸುರಕ್ಷಿತವಾಗಿ ಬದುಕದಂತೆ ಕಿರುಕುಳ ಕೊಡುತ್ತಿದ್ದಾರೆ. ಅಲ್ಲಿರುವ ೩೯೬೮ ಪ್ರಾಥಮಿಕ ಶಾಲೆಗಳಲ್ಲಿ, ೯,೮೪,೨೬೪ ವಿದ್ಯಾರ್ಥಿಗಳು ಓದುತ್ತಿದ್ದು, ಅವರಲ್ಲಿ ೨,೨೧,೨೩೧ ವಿದ್ಯಾರ್ಥಿಗಳು ಇಂಗ್ಲೀಷ್ ಮಾಧ್ಯಮದಲ್ಲಿ ೧,೨೫,೩೪೯ ವಿದ್ಯಾರ್ಥಿಗಳು ಗುಜರಾತ್ ಮಾಧ್ಯಮದಲ್ಲಿ, ೧,೪೭,೭೧೫ ವಿದ್ಯಾರ್ಥಿಗಳು ಹಿಂದೀ ಮಾಧ್ಯಮದಲ್ಲಿ, ೩,೮೭,೭೫೦ ವಿದ್ಯಾರ್ಥಿಗಳು ಉರ್ದು ಮಾಧ್ಯಮದಲ್ಲಿ ಓದುತ್ತಿದ್ದಾರೆ. ಮುಂಬೈ ಪಟ್ಟಣವೊಂದರಲ್ಲೇ ಹದಿನೈದು ಲಕ್ಷಕ್ಕೂ ಹೆಚ್ಚು ಇರುವ ಕನ್ನಡಿಗರಿಗೆ ಹಾಗೂ ಅಚ್ಚ ಕನ್ನಡ ಪ್ರದೇಶವಾಗಿರುವ ಸೊಲ್ಲಾಪುರ ನಗರ, ಸಂಪೂರ್ಣ ದಕ್ಷಿಣ ಸೊಲ್ಲಾಪುರ, ಜತ್ತ, ಅಕ್ಕಲಕೋಟಗಳಲ್ಲಿರುವ ಭಾಷಾಅಲ್ಪಸಂಖ್ಯಾತರಾದ ಕನ್ನಡಿಗರಿಗೆ ಕೊಡುತ್ತಿರುವ ಕಿರುಕುಳವನ್ನು ಯಾವ ಸ್ವಾಭಿಮಾನಿಯೂ ಸಹಿಸಲಾರನು. ೧೯೭೬-೭೭ ರ ಅಂಕಿ-ಅಂಶಗಳ ರೀತ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶೈಕ್ಷಣಿಕ ರಂಗದಲ್ಲಿ ೨೪೫ ಶಾಲೆಗಳಿದ್ದು ೪೫,೦೨೫ ವಿದ್ಯಾರ್ಥಿಗಳು ಓದುತ್ತಿದ್ದು ೧೫೦೭ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಸೊಲ್ಲಾಪುರ ಜಿಲ್ಲೆಯೊಂದರಲ್ಲೇ ೫ ಲಕ್ಷಕ್ಕೂ ಹೆಚ್ಚು ಕನ್ನಡಿಗರು ಅಂದರೆ ಜಿಲ್ಲಾ ಜನಸಂಖ್ಯೆಯ ಪ್ರತಿಶತ ಅರವತ್ತು ಜನ ಕನ್ನಡಿಗರಿದ್ದಾರೆ. ಆ ಕಾರಣಕ್ಕಾಗಿಯೇ ಇದು ಕರ್ನಾಟಕಕ್ಕೆ ಸೇರಬೇಕೆಂದು ೧೯೫೦ ರಲ್ಲಿ ಪೂಜ್ಯ ವಿನೋಬಾಭಾವೆ ಹೇಳಿದ್ದರು. ಮಹಾರಾಷ್ಟ್ರದಲ್ಲಿ ಓದುವ ೨೦೦ ಕನ್ನಡವಿದ್ಯಾರ್ಥಿಗಳಿಗೆ ಮಹಾರಾಷ್ಟ್ರ ಸರಕಾರವು ಒಬ್ಬ ಶಿಕ್ಷಕನನ್ನು ನೇಮಿಸಿದ್ದರೆ, ಕರ್ನಾಟಕದಲ್ಲಿ ಮರಾಠಿಯಲ್ಲಿ ಓದುವ ೪೦ ವಿದ್ಯಾರ್ಥಿಗಳಿಗೆ ಒಬ್ಬ ಮರಾಠಿ ಶಿಕ್ಷಕನನ್ನು ನೇಮಿಸಲಾಗಿದೆ.

೧೯೬೦-೬೧ ರಲ್ಲಿ ಮುಂಬೈ ನಗರದಲ್ಲಿ ೩೪ ಕನ್ನಡ ಪ್ರಾಥಮಿಕ ಶಾಲೆಗಳಿದ್ದು ೪೨೦೦ ವಿದ್ಯಾರ್ಥಿಗಳು ಓದುತ್ತಿದ್ದರು. ೯೯ ಶಿಕ್ಷಕರು ಕೆಲಸಮಾಡುತ್ತಿದ್ದರು. ಕನ್ನಡ ಮಾಧ್ಯಮಿಕ ಶಾಲೆಗಳಲ್ಲಿ ೬೩೦೦ ವಿದ್ಯಾರ್ಥಿಗಳು ಓದುತ್ತಿದ್ದು, ೧೮೯ ಕನ್ನಡ ಶಿಕ್ಷಕರು ಕೆಲಸಮಾಡುತ್ತಿದ್ದರು. ಅಲ್ಲಿದ್ದ ಕನ್ನಡ ಭಾಷಾ ಶೈಕ್ಷಣಿಕ ಸಂಸ್ಥೆಗಳು ಈಗ ಇದ್ದಂತಿಲ್ಲ. ಠಾಣಾದಲ್ಲಿ ಶಾಲೆಗಳ ಸಂಖ್ಯೆ ದೊರೆತಿಲ್ಲವಾದರೂ ೩೪೯ ವಿದ್ಯಾರ್ಥಿಗಳು ಓದುತ್ತಿದ್ದು ೭ ಜನ ಶಿಕ್ಷಕರು ಕೆಲಸಮಾಡುತ್ತಿದ್ದರು.

ಪುಣೆಯಲ್ಲಿ ೧೯೮ ವಿದ್ಯಾರ್ಥಿಗಳು ಓದುತ್ತಿದ್ದು, ೬ ಜನ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಸೊಲ್ಲಾಪುರದಲ್ಲಿ ೭೮ ಕನ್ನಡ ಶಾಲೆಗಳಿದ್ದು ೭೪೯೩ ವಿದ್ಯಾರ್ಥಿಗಳು ಓದುತ್ತಿದ್ದರು ೨೩೭ ಕನ್ನಡ ಶಿಕ್ಷಕರು ಕೆಲಸಮಾಡುತ್ತಿದ್ದರು. ಕೊಲ್ಲಾಪುರದಲ್ಲಿ ೧೧ ಶಾಲೆಗಳಿದ್ದು, ೧೫೬೫ ವಿದ್ಯಾರ್ಥಿಗಳು ಓದುತ್ತಿದ್ದರು ೩೮ ಕನ್ನಡ ಶಿಕ್ಷಕರು ಕೆಲಸಮಾಡುತ್ತಿದ್ದರು. ಅದೇರೀತಿ ಉಸ್ಮಾನಾಬಾದಿನಲ್ಲಿ ೬ ಜನ ಶಿಕ್ಷಕರು ಸಾಂಗ್ಲಿಯಲ್ಲಿ ೫೫ ಶಾಲೆಗಳು, ೪೯೧೮ ವಿದ್ಯಾರ್ಥಿಗಳು, ೧೨೯ ಜನ ಶಿಕ್ಷಕರು ಕೆಲಸ ಮಾಡುತ್ತಿದ್ದರೆಂಬ ಅಂಕಿ–ಅಂಶಗಳನ್ನು ಕಮಿಷನರ್ ಅವರ ಆರನೇ ವರದಿಯಿಂದ ತಿಳಿದುಕೊಳ್ಳಬಹುದು. ಆದರೆ ಮೇಲ್ಕಾಣಿಸಿದ ಭಾಗದಲ್ಲಿ ಕನ್ನಡ ಶೈಕ್ಷಣಿಕ ರಂಗದ ಆಗಿನ ಸ್ಥಿತಿ ಈಗ ಸಂಪೂರ್ಣನಾಶವಾಗಿದೆ. ಇದಕ್ಕೆ ಮಹಾರಾಷ್ಟ್ರ ಸರಕಾರ ಏನು ಉತ್ತರಿಸುತ್ತದೆ ?

ಮಹಾರಾಷ್ಟ್ರದಲ್ಲಿ ಕನ್ನಡ ಭಾಷೆ ಹಾಗೂ ಕನ್ನಡ ಶೈಕ್ಷಣಿಕ ಸಂಸ್ಥೆಗಳ ಮೇಲೆ ಮಹಾರಾಷ್ಟ್ರ ಸರಕಾರವು ದಬ್ಬಾಳಿಕೆ ನಡೆಸಿದ್ದರೂ ಕರ್ನಾಟಕದಲ್ಲಿ ಮರಾಠಿ ಭಾಷೆಯು ಮಾತ್ರ ಉನ್ನತ ರೀತಿಯಲ್ಲಿ ಬೆಳವಣಿಗೆ ಹೊಂದುತ್ತಲಿದೆ, ೧೯೭೭-೭೭ ರ ಅಂಕಿ-ಅಂಶಗಳ ರೀತ್ಯ ಕರ್ನಾಟಕದಲ್ಲಿ ಮರಾಠಿ ಮಾಧ್ಯಮದ ಶಾಲೆಗಳು ೯೬೩ ಪ್ರಾಥಮಿಕ ಶಾಲೆಗಳು, ೪೨ ಮಾಧ್ಯಮಿಕ ಶಾಲೆಗಳು ೧೦೪ ತರಗತಿಯ ವಿಭಾಗಗಳಿದ್ದು ೧,೪೭೦೯೬ ವಿದ್ಯಾರ್ಥಿಗಳು, ಪ್ರಾಥಮಿಕ ಶಾಲೆಯಲ್ಲಿ ೪೧೯೩೬ ವಿದ್ಯಾರ್ಥಿಗಳು, ಮಾಧ್ಯಮಿಕ ಶಾಲೆಗಳಲ್ಲಿ ಮತ್ತು ಮರಾಠಿ ಭಾಷಾ ಐಚ್ಛಿಕ ವಿಷಯದಲ್ಲಿ ಓದುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೧,೪೯,೩೨. ಮರಾಠಿ ಶಿಕ್ಷಕರು ೪೨೪೮ ಇದ್ದಾರೆ. ಹೀಗೆ ಕರ್ನಾಟಕದಲ್ಲಿ ಮರಾಠಿ ಸರ್ವ ರೀತಿಯಿಂದಲೂ ಬೆಳವಣಿಗೆಯನ್ನು ಹೊಂದುತ್ತಿದೆಯಲ್ಲದೆ ೭೬-೭೭ ರಲ್ಲಿ ಮರಾಠಿ ವಾಚನಾಲಯಗಳಿಗೆ ೧೮ ಸಾವಿರ ರೂ.ಗಳ ಅನುದಾನವನ್ನೂ ಕೂಡಾ ಸರಕಾರ ನೀಡಲಾಗಿದೆ. ಮೇಲೆ ವಿವರಿಸಿದ ಅಂಕಿ–ಅಂಶಗಳನ್ನು ಅವಲೋಕಿಸಿದರೆ ಮಹರಾಷ್ಟ್ರದ ಭಾಷಾ ದುರಭಿಮಾನ ವ್ಯಕ್ತವಾಗುತ್ತದೆ. ಆದರೆ ಮರಾಠಿ ಭಾಷೆಯ ವಿಷಯವಾಗಿ.

"ಮಹಾರಾಷ್ಟ್ರ ಬೇರೆ, ಕರ್ನಾಟಕ ಬೇರೆಯಲ್ಲ. ಎರಡೂ ಒಂದೇ. ಎರಡೂ ದೇಶಗಳ ಭಾಷೆಯೂ ಮೊದಲು ಒಂದೇ ಅಂದರೆ ಕನ್ನಡವೇ ಇತ್ತು. ಭಾಷೆಗಳ ವಿಷಯದಲ್ಲಿ ಮಹಾರಾಷ್ಟ್ರವು ತನ್ನ ಮೊದಲಿನ ಭಾಷೆಯನ್ನು ಅಂದರೆ ಕನ್ನಡವನ್ನು ಬಿಟ್ಟು ಮರಾಠಿಯಾಗಿದೆ." ಎಂದು ಬೆಳಗಾವಿ ಜಿಲ್ಲೆಯ ಗುರ್ಲಹೊಸುರಿನಲ್ಲಿ ಮಹಾರಾಷ್ಟ್ರದವರೇ ಆದ ಲೋಕಮಾನ್ಯ ತಿಲಕರು ೨೬-೧೧-೧೯೦೭ ರಂದು ಭಾಷಣ ಮಾಡುತ್ತ ಕನ್ನಡ ಭಾಷೆಯ ವ್ಯಾಪ್ತಿ ಹಾಗೂ ಪ್ರಾಚೀನತೆಯನ್ನು ಎತ್ತಿ ತೋರಿಸಿರುವುದನ್ನು ಮಹಾರಾಷ್ಟ್ರದ ಜನತೆ ಅರಿತುಕೊಳ್ಳಬೇಕು. ಭಾಷಾ ಬಾಂಧವ್ಯವನ್ನು ಸಾಧಿಸಬೇಕು.

೩. ದದ್ರಾ ಮತ್ತು ನಗರಹವೇಲಿ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೭೪,೧೬೫.

ಈ ರಾಜ್ಯವು ಅತ್ಯಂತ ಚಿಕ್ಕದಾಗಿದ್ದು ೧೯೭೧ ರ ಜನಗಣತಿಯ ರೀತ್ಯ೭೪,೧೬೫ ಜನಸಂಖ್ಯೆಯುಳ್ಳದ್ದಾಗಿದೆ. ಇಲ್ಲಿ ವಾರ್ಲಿ ಭಾಷೆಯು ಪ್ರಮುಖ ಭಾಷೆಯಾಗಿದ್ದು ಗುಜರಾತಿ, ಕೊಂಕಣಿ, ಕುಕಾನಾ, ಥೋದಿಯಾ, ಮರಾಠಿ ಇತ್ಯಾದಿ ಭಾಷೆಗಳನ್ನಾಡುವ ಜನರು ಇದ್ದಾರೆ. ಈ ರಾಜ್ಯದಲ್ಲಿ ಬಹು ಸಂಖ್ಯಾತರು ವಾರ್ಲಿ ಭಾಷೆಯನ್ನಾಡು ತ್ತಿದ್ದರೂ ಈ ಭಾಷೆಗೆ ಲಿಪಿಯೇ ಇಲ್ಲದ ಕಾರಣ ಈ ಭಾಷೆಯನ್ನು ಶೈಕ್ಷಣಿಕ ಮಾಧ್ಯ ಮವನ್ನಾಗಿ ಬಳಸಲು ಆಗುತ್ತಿಲ್ಲ.

ಈ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಆವರವರ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ಸರ್ಕಾರಿ ಆದೇಶವಿದ್ದರೂ ಯಾರಿಂದಲೂ ಬೇಡಿಕೆಯಿಲ್ಲ. ಆ ಕಾರಣ ಗುಜರಾತಿ ಮತ್ತು ಮರಾಠಿಭಾಷೆಯಲ್ಲಿ ಶಿಕ್ಷಣವನ್ನು ನೀಡಲಾಗುತ್ತಿದೆ. ಇದಲ್ಲದೆ ಶಿಕ್ಷಣದ ಎಲ್ಲ ಹಂತಗಳ ಪಠ್ಯಪುಸ್ತಕಗಳೂ ಕೂಡಾ ಗುಜರಾತಿ, ಮರಾಠಿ, ಇಂಗ್ಲೀಷ್ ಭಾಷೆಯಲ್ಲಿ ಅಚ್ಚಾಗುತ್ತಲಿವೆ, ಆಶ್ಚರ್ಯವೆಂದರೆ ಈ ರಾಜ್ಯಕ್ಕೆ ರಾಜ್ಯಭಾಷೆಯೇ ಇಲ್ಲ. ಅದಕ್ಕಾಗಿಯೇ ಸರ್ಕಾರಿ ನೌಕರಿ ಸೇರಬೇಕೆನ್ನುವವರಿಗೆ ರಾಜ್ಯಭಾಷೆಯ ಅಭ್ಯಾಸವಿರಬೇಕೆಂಬ ನಿಬಂಧನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸರಕಾರಿ ನೌಕರಿ ಸೇರುವವರಿಗೆ ಪರೀಕ್ಷೆಗಳಲ್ಲಿ ಭಾಷಾ ಮಾಧ್ಯಮವಾಗಿ ಇಂಗ್ಲೀಷ್, ಗುಜರಾತಿ, ಹಿಂದಿ ಮತ್ತು ಮರಾಠಿ ಭಾಷೆಗಳನ್ನು ಬಳಸಲಾಗುತ್ತಿದೆ.

೪. ಗೋವಾ, ದೀವ್-ದಮನ್

೧೯೭೧ ರ ಜನಗಣತಿಯ ಪ್ರಕಾರ ಈ ರಾಜ್ಯದ ಜನಸಂಖ್ಯೆ ೮,೫೭,೭೭೧

ಈ ರಾಜ್ಯದಲ್ಲಿ ೬೪.೮೫ ಪ್ರಮಾಣದಲ್ಲಿ ಕೊಂಕಣಿಯು ಜನರಾಡುವ ಭಾಷೆಯಾಗಿದೆ. ಇದಲ್ಲದೆ ಮರಾಠಿ, ಗುಜರಾತಿ, ಉರ್ದು, ಕನ್ನಡ ಹಿಂದೀ ಭಾಷೆಯುಳ್ಳ ಜನರೂ ಕೂಡಾ ಗಣನೀಯ ಪ್ರಮಾಣದಲ್ಲಿದ್ದಾರೆ. ಭಾಷಾಅಲ್ಪಸಂಖ್ಯಾತರ ಶೈಕ್ಷಣಿಕ ಸೌಲಭ್ಯದ ಬಗ್ಗೆ ಸರಕಾರವು ಆದೇಶವನ್ನು ನೀಡಿದ್ದು, ಎಲ್ಲ ಶಾಲೆಗಳಲ್ಲಿ ಅಭ್ಯಾಸದ ಅನೂಕೂಲತೆಗಳನ್ನು ಒದಗಿಸಲಾಗಿದೆ. ಕೊಂಕಣಿ ಭಾಷೆಯು ಇಲ್ಲಿಯ ಬಹುಸಂಖ್ಯಾತರ ಮಾತೃ ಭಾಷೆಯಾಗಿದ್ದು ಅದು ಕನ್ನಡದ ಲಿಪಿಯ ಆಶ್ರಯವನ್ನು ಹೊಂದಿದೆ.

೧೫೧೦ರಲ್ಲಿ ಪೋರ್ತುಗೀಜರು ಗೋವಾ ವಸಾಹತನ್ನು ಕೈವಶಮಾಡಿಕೊಂಡ ನಂತರ ಅಲ್ಲಿ ನಡೆದ ಧಾರ್ಮಿಕ ಪ್ರಕ್ಷುಬ್ದತೆಗೆ ಬೇಸತ್ತ ಕೆಲವರು, ಗೋವಾ ಪ್ರದೇಶವನ್ನು ತ್ಯಜಿಸಿ, ಉತ್ತರಕ್ಕಿರುವ ರತ್ನಗಿರಿ ಜಿಲ್ಲೆಯ ದಕ್ಷಿಣ ಭಾಗದಲ್ಲಿಯೂ ಇನ್ನುಳಿದವರು ದಕ್ಷಿಣಕ್ಕಿರುವ ಕಾರವಾರ ಜಿಲ್ಲೆಯಲ್ಲಿಯೂ ಹೋಗಿ ನೆಲೆಸಿದರು. ಇನ್ನು ಹಲವರು ದಕ್ಷಿಣದ ಮಂಗಳೂರು ಹಾಗೂ ಕೊಚ್ಚೀನುಗಳಲ್ಲಿಯೂ ನೆಲೆಸಿದರೆಂಬುದು ದಕ್ಷಿಣ ಕನ್ನಡ ಜಿಲ್ಲೆಯ ಗೆಜೆಟಿಯರ್‌ನಿಂದ ಸ್ಪಷ್ಟವಾಗುತ್ತದೆ. ಇದಲ್ಲದೆ ಗೋವೆಗೆ ಪೋರ್ತುಗೀಜರು ಬರುವುದಕ್ಕಿಂತ ಪೂರ್ವದಲ್ಲಿ ಕೊಂಕಣಿ ಭಾಷೆಯು ಬರವಣಿಗೆಗೆ ಕನ್ನಡ ಅಕ್ಷರಗಳನ್ನು ಬಳಕೆ ಮಾಡುತ್ತಿದ್ದರೆಂಬುದಕ್ಕೂ ಅನೇಕ ಆಧಾರಗಳಿವೆ. ಶತಮಾನಗಳಿಂದ ಗೋವೆಯಲ್ಲಿ ಕನ್ನಡವು ಬಳಕೆಯ ಭಾಷೆಯಾಗಿದ್ದುದಕ್ಕೆ ಕನ್ನಡ ಅರಸರು ಈ ಭಾಗವನ್ನಾಳಿದುದು ಇನ್ನೊಂದು ಪ್ರಮುಖ ಕಾರಣವಾಗಿದೆ. ಕದಂಬರು ಸೋಂದೆಯವರು (ಸ್ವಾದಿ) ಹಾಗೂ ವಿಜಯನಗರದ ಅರಸರು ಈ ಭಾಗವನ್ನಾಳಿದುದಲ್ಲದೆ. ಸೋಂದ್ಯಾ ಆಳರಸರ ಜಹಾಗೀರುಗಳನ್ನು ಈಗಲೂ ಕಾಣಬಹುದು. ಆ ಕಾರಣಕ್ಕಾಗಿ ಗೋವೆಯಲ್ಲಿ ಕನ್ನಡವು ಆಡಳಿತ ಭಾಷೆಯಾಗಿದ್ದಿತು.* ಗೋವಾ ಭಾಗದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿದ್ದ ಕನ್ನಡವು ದಿನದಿನಕ್ಕೆ ನಶಿಸಿ ಹೋಗುವುದಕ್ಕೆ ಕಾರಣವೇನು?

೧೯೭೫-೭೬ದಲ್ಲಿ ಕನ್ನಡದ ೪ ಶಾಲೆಗಳು, ೨೬೬ ವಿದ್ಯಾರ್ಥಿಗಳು, ೯ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಆದರೆ ೧೯೭೭-೭೮ಕ್ಕೆ ಕನ್ನಡ ಮಾಧ್ಯಮದಲ್ಲಿ ಓದುವ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಶಾಲೆಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿವೆ. ಇಲ್ಲಿ ಓದುವ ಕನ್ನಡ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳಿಲ್ಲದ ಕಾರಣ ಸಮಾನ ಶೈಕ್ಷಣಿಕ ನಿಬಂಧನೆಗಳನ್ನು ಹೊಂದಿದ ಕರ್ನಾಟಕದ ಪಠ್ಯಪುಸ್ತಕಗಳು ಗೋವೆಯಲ್ಲಿ ಬಳಸಲ್ಪ

* (A short history of Goa written by C. F. Saldanha.)

ಡುತ್ತಿದ್ದವು. ಭಾಷಾಅಲ್ಪಸಂಖ್ಯಾತರ ಶಿಕ್ಷಕರನ್ನು ತರಬೇತಿಗೊಳಿಸಲು ನೆರೆಯ ರಾಜ್ಯಗಳಿಗೆ ಕಳುಹಿಸಿಕೊಡಲಾಗುತ್ತಿತ್ತು. ಭಾರತ ಸರಕಾರದ ಆದೇಶದಂತೆ ಅದನ್ನೀಗ ನಿಲ್ಲಿಸಲಾಗಿದೆ. ಅನೇಕ ಜಾಗೆಗಳು ಖಾಲಿಯಿದ್ದು ತರಬೇತಿ ಹೊಂದಿದ ಶಿಕ್ಷಕರ ಅಭಾವವು ವಿಶೇಷವಾಗಿದ್ದರೂ, ಶಿಕ್ಷಕರ ತರಬೇತಿಗಾಗಿ ಬೇರೆ ಯಾವ ವ್ಯವಸ್ಥೆಯನ್ನು ಮಾಡಿಲ್ಲ. ಈ ರಾಜ್ಯದಲ್ಲಿ ಶೇಖಡ ೧೫ ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ವಾಸವಾಗಿರುವ ಭಾಷಾಅಲ್ಪಸಂಖ್ಯಾತರ ಪ್ರದೇಶಗಳೇ ಇಲ್ಲದ್ದರಿಂದ ಅವರವರ ಮಾತೃಭಾಷೆಯಲ್ಲಿ ಸರಕಾರದ ಮಹತ್ವದ ಕಾಗದ ಪತ್ರಗಳನ್ನು ಪ್ರಕಟಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ರಾಜ್ಯದಲ್ಲಿ ಲೋಕಸೇವಾ ಆಯೋಗದಿಂದ ನಡೆಸಲ್ಪಡುವ ಪರೀಕ್ಷೆಗಳಲ್ಲಿ ಇಂಗ್ಲೀಷನ್ನೇ ಬಳಸಲಾಗುತ್ತಿದೆ. ಇಲ್ಲಿಯ ಆಡಳಿತ ಭಾಷೆಯು ಇಂಗ್ಲೀಷೇ ಆಗಿರುವುದರಿಂದ ಬೇರೆ ಭಾಷೆಗಳಿಗೆ ಇಲ್ಲಿ ಪ್ರಾಧಾನ್ಯತೆಯಿಲ್ಲ. ೧೯.೭೮ ಪ್ರಮಾಣದಲ್ಲಿರುವ ಮರಾಠಿಗರಿಗೆ ಮಾತ್ರ ಅವರ ಭಾಷೆಯಲ್ಲಿ ಕೆಲವು ಪ್ರಕಟಣೆಗಳು ಅಚ್ಚಾಗುತ್ತಲಿವೆ.

೫. ಅಂದಮಾನ್-ನಿಕೋಬಾರ್ ದ್ವೀಪ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೧,೧೫,೧೩೩

೧೯೭೧ರ ಜನಗಣತಿಯ ರೀತ್ಯ ಈ ರಾಜ್ಯದಲ್ಲಿ ೧,೧೫,೧೩೩ ಜನರಿದ್ದಾರೆ. ಬೆಂಗಾಲಿ, ನಿಕೋಬಾರಿಸ್, ಎಮಿಲ್ ಹಿಂದಿ ಮಲೆಯಾಳಂ, ತೆಲುಗು ಹಾಗೂ ಉರ್ದು ಭಾಷೆಗಳನ್ನಾಡುತ್ತಾರೆ. ಅವರಲ್ಲಿ ೨೪.೪೨ ಪ್ರಮಾಣದಲ್ಲಿ ಆಡುವ ಬೆಂಗಾಲಿ ಭಾಷೆಯೇ ಪ್ರಮುಖವಾದುದು. ರಾಷ್ಟ್ರದಲ್ಲಿಯೇ ಈ ರಾಜ್ಯವು ಅತ್ಯಂತ ಕಿರಿಯ ಎರಡನೇ ರಾಜ್ಯವಾಗಿದೆ.

ಇಲ್ಲಿ ೧೫೭ ಶಾಲೆಗಳಿದ್ದು ಬಹುಶಃ ಎಲ್ಲ ಶಾಲೆಗಳಲ್ಲಿಯೂ ಭಾಷಾಅಲ್ಪಸಂಖ್ಯಾತರಿಗೆ ಪ್ರವೇಶವಿದೆ. ಬೆಂಗಾಲಿ, ಕರೀನ್, ಮಲೆಯಾಳಂ, ನಿಕೋಬಾರಿಸ್ ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ನೀಡಲಾಗುತ್ತಿದೆ. ಹಿಂದೀಯೇತರ ವಿದ್ಯಾರ್ಥಿಗಳಿಗೆ, ರಾಜ್ಯಭಾಷೆಯಾಗಿ ಹಿಂದಿಯಲ್ಲಿಯೇ ಶಿಕ್ಷಣ ನೀಡಲಾಗುತ್ತಿದೆ. ಸ್ವಲ್ಪ ಹೆಚ್ಚೂ ಕಡಿಮೆ ಯಾವ ಭಾಷೆಗಳೂ ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದುಕೊಂಡಿಲ್ಲ. ಬೆಂಗಾಲಿ ಮತ್ತು ಉರ್ದು ಭಾಷೆಗಳು ಮಾಧ್ಯಮಿಕ ಹಾಗೂ ಹೆಚ್ಚಿನ ಶಿಕ್ಷಣದಲ್ಲಿ ಭಾಷಾ ಮಾಧ್ಯಮವಾಗಿ ಬಳಸಲ್ಪಡುತ್ತಿದ್ದರೆ, ಬೆಂಗಾಲಿ ತಮಿಳು ಹಾಗೂ ಉರ್ದು ಭಾಷೆಗಳು ಮಿಡಲ್ ಸ್ಕೂಲ್‌ಗಳಲ್ಲಿ ಬಳಕೆಯಾಗುತ್ತಿವೆ.

ಈ ರಾಜ್ಯದಲ್ಲಿ ಸರ್ಕಾರಿ ಮುದ್ರಣ ಸೌಕರ್ಯವಿಲ್ಲದ ಕಾರಣ ಇಲ್ಲಿಯ ಭಾಷಾ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಬೇಕಾಗುವ ವಿವಿಧ ಭಾಷಾ

ಪಠ್ಯಪುಸ್ತಕಗಳನ್ನು ಆಯಾ ಭಾಷೆಗಳಿಗೆ ಸಂಬಂಧಪಟ್ಟ ನೆರೆಯ ರಾಜ್ಯಗಳಿಂದಲೇ ಪಡೆಯಬೇಕು. ಹೀಗಾಗಿ ಡೆಲ್ಲಿಯಲ್ಲಿರುವ ಕೇಂದ್ರ ಮಾಧ್ಯಮಿಕ ಶಿಕ್ಷಣ ಸಂಸ್ಥೆಯ ಪಠ್ಯ ಕ್ರಮಕ್ಕೂ ರಾಜ್ಯದಲ್ಲಿ ಶಿಕ್ಷಣ ಪಡೆಯುವ ವಿಧಾನಕ್ಕೂ ಹೊಂದಾಣಿಕೆ ಇಲ್ಲದಾಗಿ ವಿದ್ಯಾರ್ಥಿಗಳು ತೊಂದರೆಗೆ ಈಡಾಗಿದ್ದಾರೆ.

ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತ ಶಿಕ್ಷಕರಿಗೆ ತರಬೇತಿ ಪಡೆಯುವ ಸೌಲಭ್ಯವೂ ಇಲ್ಲ. ಈ ರಾಜ್ಯದ ಭಾಷೆಯು ಹಿಂದೀ ಮತ್ತು ಇಂಗ್ಲೀಷ್ ಆಗಿರುವುದರಿಂದ ರಾಜ್ಯದ ಎಲ್ಲ ಪ್ರಕಟಣೆಗಳು ಇಂಗ್ಲೀಷ್ ಮತ್ತು ಹಿಂದೀ ಭಾಷೆಯಲ್ಲಿಯೇ ಪ್ರಕಟವಾಗುತ್ತಿವೆ. ಭಾಷಾಅಲ್ಪಸಂಖ್ಯಾತರಿಗೆ ಯಾವುದೇ ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ. ಈ ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ನೌಕರಿ ಸೇರಬೇಕೆನ್ನುವವರಿಗೆ ಹಿಂದೀ ಭಾಷೆಯ ಪರಿಜ್ಞಾನವಿರಲೇ ಬೇಕು. ಹಾಗೂ ಸರ್ಕಾರಿ ಹುದ್ದೆಗಳಿಗೆ ನೇಮಿಸಿಕೊಳ್ಳುವಾಗ ಮಣ್ಣಿನ ಮಕ್ಕಳಿಗೆ ಆದ್ಯತೆ ನೀಡಲಾಗುವುದು. ನೌಕರಿ ಸೇರಬಯಸುವವರು ಕನಿಷ್ಟ ಪಕ್ಷ ಈ ರಾಜ್ಯದಲ್ಲಿ ೫ ವರ್ಷಗಳ ಕಾಲ ಶಿಕ್ಷಣ ಪಡೆದಿರಬೇಕು ಇಲ್ಲವೆ ಆ ವ್ಯಕ್ತಿಯ ತಂದೆ–ತಾಯಿಗಳು ಈ ರಾಜ್ಯದಲ್ಲಿಯೇ ಹುಟ್ಟಿದವರಾಗಿರಬೇಕು. ಎಂಬ ನಿಬಂಧನೆಯನ್ನು ಕೇಂದ್ರ ಸರಕಾರ ಈ ರಾಜ್ಯದ ಮೇಲೆ ಹೇರಿದೆ. ಇಲ್ಲಿ ರಾಜ್ಯದಲ್ಲೇ ವಾಸಿಸಿರುವ ಜನರಿಗೆ ಪಕ್ಷಪಾತ ಮಾಡಿದಂತಾಗುವುದಿಲ್ಲವೆ ?

೬. ಲಕ್ಷದ್ವೀಪ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೩೧,೮೧೦.

ಪ್ರಾಯಶಃ ರಾಷ್ಟ್ರದಲ್ಲಿಯೇ ಈ ರಾಜ್ಯವು ಅತ್ಯಂತ ಕಿರಿಯ ರಾಜ್ಯವಾಗಿದೆ. ೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ಕೇವಲ ೩೧,೮೧೦. ಮಲೆಯಾಳಂ ಈ ರಾಜ್ಯದ ಪ್ರಮುಖ ಭಾಷೆಯಾಗಿದೆ (೮೩.೨೦). ತದನಂತರ ಮಹಲ್ ಭಾಷೆಯೇ ಪ್ರಮುಖಭಾಷೆಯಾಗಿದೆ. ಈ ಎರಡೂ ಭಾಷೆಗಳು ಇಲ್ಲಿಯ ಶಿಕ್ಷಣ ಮಾಧ್ಯಮವಾಗಿ ಬಳಸಲ್ಪಡುತ್ತಿವೆ. ಮಿನಿಕ್ವಾಯ್ ದ್ವೀಪದಲ್ಲಿ ಮಾತ್ರ ಮಾಧ್ಯಮಿಕ ಶಾಲೆಗಳಲ್ಲಿ ತರಬೇತಿ ಪಡೆದ ಶಿಕ್ಷಕರು ಹಾಗೂ ಪಠ್ಯಪುಸ್ತಕಗಳ ಕೊರತೆ ಇರುವುದರಿಂದ ಮಹಲ್ ಭಾಷೆಯನ್ನು ಇಲ್ಲಿ ಬಳಸಲಾಗುವುದಿಲ್ಲ. ಈ ಭಾಷೆಯ ಶಿಕ್ಷಕರನ್ನು ಹೆಚ್ಚಾಗಿ ಪ್ರಾಥಮಿಕ ಶಾಲೆಯಲ್ಲಿಯೇ ಭರ್ತಿ ಮಾಡಿಕೊಳ್ಳಲಾಗುತ್ತಿದೆ, ಈ ರಾಜ್ಯದಲ್ಲಿ ಸರ್ಕಾರಿ ಮಹತ್ವದ ಪ್ರಕಟಣೆಗಳನ್ನು ಮುದ್ರಣ ಸೌಕರ್ಯವಿಲ್ಲದ ಕಾರಣ ಪ್ರಕಟಗೊಳಿಸದೇ ಮಹತ್ವದ ಸುದ್ಧಿ ಸಂಗ್ರಹಗಳನ್ನು ಕ್ಯಾಲಿಕಟ್ ಬಾನುಲಿಯ ಮೂಲಕ ಪ್ರಸಾರಪಡಿಸಲಾಗುತ್ತಿದೆ.

೭. ಕರ್ನಾಟಕ

೧೯೭೧ ರ ಜನಗಣತಿಯ ರೀತ್ಯ ಈ ರಾಜ್ಯದ ಜನಸಂಖ್ಯೆ ೨,೯೨,೯೯,೦೧೪,

ಕರ್ನಾಟಕ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ ೪೯೧೨ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿದ್ದು, ೯,೦೮,೦೭೭ ವಿದ್ಯಾರ್ಥಿಗಳು ಓದುತ್ತಿದ್ದಾರೆ. ೨೮೧೪ ಶಿಕ್ಷಕರು ಕೆಲಸಮಾಡುತ್ತಿದ್ದಾರೆ. ಇವುಗಳಲ್ಲಿ ೧೯೭೫-೭೬ ರಲ್ಲಿ ೨೭೨೯ ಪ್ರಾಥಮಿಕ ಹಾಗೂ ಮಾಧ್ಯಮಿಕ ಉರ್ದು ಶಾಲೆಗಳಿದ್ದು ೩,೫೭,೫೪೬ ವಿದ್ಯಾರ್ಥಿಗಳು ಓದುತ್ತಿದ್ದರಲ್ಲದೆ ೮೪೪೦ ಉರ್ದು ಶಿಕ್ಷಕರು ಕೆಲಸಮಾಡುತ್ತಿದ್ದರು. ೧೯೭೬-೭೭ರಲ್ಲಿ ಅಂದರೆ ಕೇವಲ ಒಂದೇ ವರ್ಷದಲ್ಲಿ ಉರ್ದು ಶೈಕ್ಷಣಿಕ ರಂಗವು ಗಣನೀಯ ಪ್ರಮಾಣದಲ್ಲಿ ಪ್ರಗತಿಯಾಯಿತು, ಅಂದರೆ ೨೭೩೨ ಪ್ರಾಥಮಿಕ ಹಾಗೂ ಮಾಧ್ಯಮಿಕ ಉರ್ದು ಶಾಲೆಗಳಲ್ಲಿ ೩,೬೧,೧೦೪ ವಿದ್ಯಾರ್ಥಿಗಳು ಓದುತ್ತಿದ್ದು ೮,೭೬೬ ಶಿಕ್ಷಕರು ಕೆಲಸಮಾಡತೊಡಗಿದರು. ಇದಲ್ಲದೆ ರಾಜ್ಯದಲ್ಲಿ ಉರ್ದು ಅಕಾಡಮಿ, ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ತರಗತಿಗಳು ನಡೆಯುತ್ತಿದ್ದು ಭಾಷಾಅಲ್ಪಸಂಖ್ಯಾತರಾದ ಮುಸಲ್ಮಾನರ ಆಡಳಿತೆಯಲ್ಲಿಯೇ ಕಾನೂನು ಕಾಲೇಜು ಹಾಗೂ ತಾಂತ್ರಿಕ ಕಾಲೇಜುಗಳು ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳು ನಡೆಸಲ್ಪಡುತ್ತಿವೆ. ಅಲ್ಪಸಂಖ್ಯಾತರಾದ ಮುಸಲ್ಮಾನರಿಗೆ ಕರ್ನಾಟಕ ರಾಜ್ಯದಲ್ಲಿ ಅತ್ಯುನ್ನತ ಸಾಮಾಜಿಕ ಸ್ಥಾನಮಾನಗಳು ಲಭಿಸುತ್ತಿದ್ದು ಗಣನೀಯ ಪ್ರಮಾಣದಲ್ಲಿ ಸರ್ಕಾರಿ ಹುದ್ದೆಗಳಲ್ಲಿಯೂ ಸೇವಾವಕಾಶವನ್ನು ಪಡೆದಿದ್ದಾರೆ.

ಶೈಕ್ಷಣಿಕ ಸೌಲಭ್ಯವನ್ನು ಪಡೆದು ಯಾವುದೇ ರೀತಿಯ ಅನ್ಯಾಯಕ್ಕೊಳಗಾಗದಿದ್ದರೂ ಸಮಗ್ರ ಆಲೋಚನೆಯ ಅಭಾವದಿಂದಾಗಿ ಹಲ ಕೆಲವರು ಸರಕಾರದ ಭಾಷಾನೀತಿಯನ್ನು ವಿರೋಧಿಸುತ್ತಿದ್ದಾರೆ.

೧೯೭೬-೭೭ ರಲ್ಲಿ ೧೦೪೦ ಪ್ರಾಥಮಿಕ ಹಾಗೂ ಮಾಧ್ಯಮಿಕ ಮರಾಠಿ ಶಾಲೆಗಳಿದ್ದು ೧,೯೯,೫೭೮ ವಿದ್ಯಾರ್ಥಿಗಳು ಓದುತ್ತಿದ್ದರಲ್ಲದೆ ೪೫೩೧ ಶಿಕ್ಷಕರು ಕೆಲಸಮಾಡುತ್ತಿದ್ದರು. ಇದೇ ಸಾಲಿನಲ್ಲಿ ೨೯೯ ಪ್ರಾಥಮಿಕ ಹಾಗೂ ಮಾಧ್ಯಮಿಕ ತಮಿಳು ಶಾಲೆಗಳಲ್ಲಿ ೭೮,೫೬೮ ವಿದ್ಯಾರ್ಥಿಗಳು ಓದುತ್ತಿದ್ದು, ೧೬೨೯ ತಮಿಳು ಶಿಕ್ಷಕರು ಕೆಲಸಮಾಡುತ್ತಿದ್ದರು. ಅದೇ ರೀತಿ ೧೧೧ ತೆಲುಗು ಶಾಲೆಗಳಲ್ಲಿ, ೧೭,೯೪೪ ವಿದ್ಯಾರ್ಥಿಗಳು ಓದುತ್ತಿದ್ದು. ೪೫೦ ಶಿಕ್ಷಕರು ಕೆಲಸಮಾಡುತ್ತಿದ್ದರು. ಅದೇ ರೀತಿ ೫ ಮಲೆಯಾಳಿ ಶಾಲೆಗಳಲ್ಲಿ ೮೨೬ ವಿದ್ಯಾರ್ಥಿಗಳು ಓದುತ್ತಿದ್ದು ೧೯ ಶಿಕ್ಷಕರು ಕೆಲಸಮಾಡುತ್ತಿದ್ದರು. ಇದೇ ಸಾಲಿನಲ್ಲಿ ೨೭೩೩ ಉರ್ದುಶಾಲೆಗಳಿದ್ದು, ೩,೬೫,೨೭೦ ವಿದ್ಯಾರ್ಥಿಗಳು ಓದುತ್ತಿದ್ದರಲ್ಲದೆ, ೮೯೩೨ ಶಿಕ್ಷಕರು ಕೆಲಸಮಾಡುತ್ತಿದ್ದರು. ತದನಂತರ ಕರ್ನಾಟಕ ರಾಜ್ಯ

ದಲ್ಲಿ ಭಾಷಾಅಲ್ಪಸಂಖ್ಯಾತರ ಶೈಕ್ಷಣಿಕ ಪ್ರಗತಿಯು ಅದ್ಭುತ ರೀತಿಯಿಂದ ಹೆಚ್ಚುಗೊಂಡಿತು. ೧೯೮೦–೮೧ ರ ತೀರ ಇತ್ತೀಚಿನ ಅಂಕಿ-ಅಂಶಗಳನ್ನು ಅವಲೋಕಿಸಿದರೆ ಹಣನೀಯ ಪ್ರಮಾಣದ ಹೆಚ್ಚಳ ಕಂಡುಬರುವುದು.

1980–81

ಭಾಷೆ	ಶಾಲೆಗಳು (ಪ್ರಾಥಮಿಕ ಹಾಗೂ ಮಾಧ್ಯಮಿಕ)	ವಿದ್ಯಾರ್ಥಿಗಳು	ಶಿಕ್ಷಕರು
ಉರ್ದು	೨೮೭೫	೩,೭೫,೨೯೦	೯,೧೯೨
ಇಂಗ್ಲೀಷ್	೫೨೨	೨,೩೫,೮೪೩	೬,೨೬೫
ತಮಿಳು	೨೬೫	೭೮,೪೩೧	೧,೭೭೪
ತೆಲುಗು	೧೧೯	೨೦,೧೮೧	೬೧೮
ಹಿಂದಿ	೪೦	೧೦,೫೬೯	೩೧೯
ಮಲೆಯಾಳಂ	೬	೧,೪೭೯	೨೭
ಗುಜರಾತಿ	೭	೬೦೧	೨೦
ಸಿಂಧಿ	೨	೫೦೫	೧೩
ಮರಾಠಿ	೧೦೭೬	೧,೮೫,೧೭೮	೪,೫೮೬

ಮೇಲೆ ಕಾಣಿಸಿದ ಅಂಕಿ-ಅಂಶಗಳ ರೀತ್ಯ ೧೯೭೬–೭೭ ರಿಂದ ೧೯೮೦–೮೧ ರ ವರೆಗೆ ಅಂದರೆ ಈಚಿನ ಐದು ವರ್ಷಗಳಲ್ಲಿ ೧೫೨ ಉರ್ದು ಶಾಲೆಗಳು, ೧೦,೦೨೦ ಉರ್ದು ವಿದ್ಯಾರ್ಥಿಗಳು, ೧೮೬೦ ಉರ್ದು ಶಿಕ್ಷಕರು ಹೆಚ್ಚಾಗಿದ್ದಾರೆ. ಅದೇರೀತಿ ೨೬ ತಮಿಳು ಶಾಲೆಗಳು ೧೩೫ ಶಿಕ್ಷಕರು ಹೆಚ್ಚಿಗೆ ಆಗಿದ್ದಾರೆ. ಹಾಗೂ ೮ ತೆಲುಗು ಶಾಲೆಗಳು ೨೨೩೭ ವಿದ್ಯಾರ್ಥಿಗಳು ೧೬೮ ತೆಲುಗು ಶಿಕ್ಷಕರು ಹೆಚ್ಚಾಗಿದ್ದಾರೆ. ಅದೇ ರೀತಿ ೩೬ ಮರಾಠಿ ಶಾಲೆಗಳು ೫೫ ಶಿಕ್ಷಕರು ಹೆಚ್ಚಾಗಿದ್ದಾರೆ. ಮಲೆಯಾಳಿ, ಗುಜರಾತಿ, ಸಿಂಧಿ ಶಾಲೆ, ವಿದ್ಯಾರ್ಥಿ ಮತ್ತು ಶಿಕ್ಷಕರಲ್ಲಿ ಕೇವಲ ಅಲ್ಪಪ್ರಮಾಣದ ಹೆಚ್ಚಳ ಕಂಡು ಬರುತ್ತದೆ. ಇದಲ್ಲದೆ ಇಂಗ್ಲೀಷ್ ಮತ್ತು ಹಿಂದೀ ಮಾಧ್ಯಮದಲ್ಲಿ ಓದುವ ವಿದ್ಯಾರ್ಥಿಗಳ ಶಾಲೆಗಳ ಹಾಗೂ ಶಿಕ್ಷಕರ ಪ್ರಮಾಣವು ಕೂಡಾ ಅಧಿಕಗೊಂಡಿದೆ.

ಹೀಗೆ ಕರ್ನಾಟಕ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರ ಶೈಕ್ಷಣಿಕ ಪ್ರಗತಿಗೆ ಯಾವುದೇರೀತಿಯ ಅಡ್ಡಿ ಆತಂಕಗಳು ಒದಗಿರುವುದಿಲ್ಲ.

ಸನ್ನಿವೇಶವು ಹೀಗಿರುವಾಗ ಭಾಷಾಅಲ್ಪಸಂಖ್ಯಾತರಿಗೆ ಕರ್ನಾಟಕ ರಾಜ್ಯದಲ್ಲಿ ಅನ್ಯಾಯವಾಗಿದೆ ಎಂಬ ಅಪಸ್ವರದಲ್ಲಿ ಅರ್ಥವಿಲ್ಲ. ಸಂವಿಧಾನದ ರೀತ್ಯ ಹಾಗೂ ಅಖಿಲ ಭಾರತ ಮುಖ್ಯಮಂತ್ರಿಗಳ ತೀರ್ಮಾನದ ಅನ್ವಯ ಕರ್ನಾಟಕ ಸರಕಾರವು

ಭಾಷಾ ಅಲ್ಪಸಂಖ್ಯಾತರಿಗೆ ನೀಡಬೇಕಾದ ಸೌಲಭ್ಯಗಳನ್ನು ಯಾವುದೇ ಕಾರಣಗಳಿಂದ ಮೊಟಕುಗೊಳಿಸದೆ, ಸಮರ್ಪಕ ರೀತಿಯಲ್ಲಿ ಸಂದರ್ಭಾನುಸಾರವಾಗಿ ಒದಗಿಸುತ್ತ ಬಂದಿದೆ. ಇದಕ್ಕೆ ಮೇಲಿನ ಅಂಕಿ–ಅಂಶಗಳೇ ನಿದರ್ಶನ.

ಇದಲ್ಲದೆ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಅಲ್ಪಸಂಖ್ಯಾತರ ಅಂದರೆ ಉರ್ದು, ತೆಲುಗು, ತಮಿಳು, ಮರಾಠಿ ಮುಂತಾದ ಭಾಷೆಗಳಲ್ಲಿ ಸ್ನಾತಕೋತ್ತರ (ಎಂ.ಎ.)ಶಿಕ್ಷಣವನ್ನು ನೀಡಲಾಗುತ್ತಿದೆಯಲ್ಲದೆ, ಆಯಾ ಭಾಷೆಗಳ ಪೀಠಗಳನ್ನು ನಿರ್ಮಿಸಿ, ಬಹುಸಂಖ್ಯಾತರ ಭಾಷೆಗಳಿಗಿರುವಂತಹ ಸ್ಥಾನಮಾನಗಳನ್ನು ಕಲ್ಪಿಸಿಕೊಡಲಾಗಿದೆಯಲ್ಲದೆ ಶೈಕ್ಷಣಿಕ ಸಮಾಜದ ಅರ್ಹತೆಯನ್ನು ಒದಗಿಸಲಾಗಿದೆ. ಇಷ್ಟೇ ಅಲ್ಲ ಗುಲ್ಬುರ್ಗದ ಹೆಣ್ಣು ಮಕ್ಕಳ ಬೀಬಿ ರಾಜಾ ಪದವೀ ಕಾಲೇಜನ್ನು ಪ್ರಾರಂಭಿಸುವಾಗ ವ್ಯವಸ್ಥಾಪಕರು ಸರಕಾರಕ್ಕೆ ಕಟ್ಟಬೇಕಾಗಿದ್ದ ೫ ಲಕ್ಷ ರೂ.ಗಳನ್ನು ಮನ್ನಾ ಮಾಡಿ, ಉರ್ದು ಶೈಕ್ಷಣಿಕ ಸಂಸ್ಥೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಲಾಗಿದೆ. ಅದಲ್ಲದೆ ತೆಲುಗು, ತಮಿಳು, ಮರಾಠಿ ಭಾಷೆಗಳ ಶೈಕ್ಷಣಿಕ ಸೌಲಭ್ಯವನ್ನು ಪ್ರಾಥಮಿಕ ಹಂತದಿಂದ ಹಿಡಿದು ಸ್ನಾತಕೋತ್ತರ ಹಂತದವರೆಗೆ ನೀಡಲಾಗಿದೆ. ಭಾಷಾಅಲ್ಪಸಂಖ್ಯಾತರ ಪತ್ರಿಕೆಗಳಿಗೆ ಆಯಾ ಪತ್ರಿಕೆಗಳ ಪ್ರಸಾರ ಪ್ರಮಾಣಕ್ಕನುಗುಣವಾಗಿ ಸರ್ಕಾರದ ಜಾಹೀರಾತುಗಳನ್ನು ಕೂಡಾ ನೀಡಲಾಗುತ್ತಿದೆ.

ಅವರು ನಡೆಸುವ ವಾಚನಾಲಯಗಳಿಗೆ ಸರ್ಕಾರದ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

ನೆರೆಯ ರಾಜ್ಯಗಳಲ್ಲಿ ಅಂದರೆ ಕೇರಳ, ತಮಿಳುನಾಡು, ಆಂದ್ರಪ್ರದೇಶ,ಮಹಾರಾಷ್ಟ್ರ ಪ್ರದೇಶಗಳಲ್ಲಿ ಕನ್ನಡ ಭಾಷೆಯು ನಶಿಸಿ ಹೋಗುತ್ತಿರುವಾಗ ಕರ್ನಾಟಕ ರಾಜ್ಯದಲ್ಲಿ ಭಾಷಾಅಲ್ಪಸಂಖ್ಯಾತರ ಎಲ್ಲ ಭಾಷೆಗಳು ಪ್ರಗತಿ ಪಥದಲ್ಲಿ ಮುನ್ನಡೆಯುತ್ತಲಿವೆ.

ಪರಿಸ್ಥಿತಿ ಹೀಗಿರುವಾಗ ಕರ್ನಾಟಕದ ಭಾಷಾಅಲ್ಪಸಂಖ್ಯಾತರ ಮೇಲೆ ಕನ್ನಡವನ್ನು ಒತ್ತಾಯವಾಗಿ ಹೇರುತ್ತಿದ್ದಾರೆಂಬ ಅಪವಾದವು ಹಾಗೂ ಕರ್ನಾಟಕ ಭಾಷಾ ಸೂತ್ರವು ಪ್ರಜಾಸತ್ತಾತ್ಮಕ ಮಾರ್ಗವಲ್ಲವೆಂಬ ಟೀಕೆಯಲ್ಲಿ ಏನಾದರೂ ಅರ್ಥ ಇದೆಯೇ ?

೧) ಅಖಿಲ ಭಾರತ ತೀರ್ಮಾನದನ್ವಯ ಭಾಷಾಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಸಕಲ ಸೌಲಭ್ಯಗಳನ್ನು ಒದಗಿಸಬೇಕೆಂದು ರಾಜ್ಯ ಸರಕಾರವು ಆದೇಶವನ್ನಿತ್ತಿದೆ. ರಾಜ್ಯದ ೩೪,೫೪೬ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ೨೬೮೯ ಮಾಧ್ಯಮಿಕಶಾಲೆಗಳಲ್ಲಿ ಭಾಷಾಅಲ್ಪಸಂಖ್ಯಾತರು ತರಗತಿಯಲ್ಲಿ ಹತ್ತು ವಿದ್ಯಾರ್ಥಿ

ಗಳು, ಇಲ್ಲವೆ ಶಾಲೆಯಲ್ಲಿ ಒಟ್ಟು ೩೦ ರಿಂದ ೪೦ ವಿದ್ಯಾರ್ಥಿಗಳು ಇದ್ದು, ಅವರವರ ಮಾತೃಭಾಷೆಯಲ್ಲಿ ಓದುವ ಇಚ್ಛೆ ತೋರಿಸಿದರೆ ಅವರಿಗೆ ಅವಕಾಶ ನೀಡಲಾಗುವುದು. ರಾಜ್ಯದಲ್ಲಿರುವ ಭಾಗಶಃ ೧೫ ಕ್ಕೆ ಮೇಲ್ಪಟ್ಟ ಸಂಖ್ಯೆಯಲ್ಲಿ ವಾಸಿಸಿರುವ ಪ್ರದೇಶಗಳಲ್ಲಿ ಅವರವರ ಭಾಷೆಯಲ್ಲಿ ಸರಕಾರದ ಮಹತ್ವದ ಪ್ರಕಟಣೆಗಳನ್ನು ಪ್ರಕಟಿಸಲಾಗುತ್ತಿದೆ.

೨) ಪ್ರಾಥಮಿಕ ಶಾಲೆಯಲ್ಲಿ ಓದುವ ೧ ರಿಂದ ೭ನೇ ತರಗತಿಯವರೆಗೆ ಹಿಂದೀ, ಮರಾಠಿ, ತಮಿಳು, ತೆಲಗು ಹಾಗೂ ಉರ್ದು ಭಾಷೆಗಳಲ್ಲಿ ಭಾಷಾ ಪಠ್ಯ ಪುಸ್ತಕಗಳ ಜೊತೆಗೆ ಗಣಿತ, ಸಾಮಾನ್ಯ ವಿಜ್ಞಾನ, ಸಮಾಜ ಶಾಸ್ತ್ರಗಳ ಪಠ್ಯಪುಸ್ತಕಗಳನ್ನು ಕೂಡಾ ಪೂರೈಸಲಾಗುತ್ತಿದೆ. ಅಂತೆಯೇ ಮಾಧ್ಯಮಿಕ ಶಾಲೆಯಲ್ಲಿ ಓದುವ ಹಿಂದೀ, ತಮಿಳು, ತೆಲುಗು, ಮರಾಠಿ ವಿಧ್ಯಾರ್ಥಿಗಳಿಗೆ ಅವರವರ ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಲಾಗುತ್ತಿದೆ.

೩) ರಾಜ್ಯದಲ್ಲಿ ತರಬೇತಿಹೊಂದ ಬಯಸುವ ಮರಾಠಿ, ಉರ್ದು, ತೆಲುಗು, ತಮಿಳು ಶಿಕ್ಷಕರಿಗೆ ತರಬೇತಿ ಹೊಂದುವ ಕೇಂದ್ರಗಳನ್ನು ಹಾಗೂ ಡಿಪ್ಲೋಮಾ ಕೋರ್ಸ್ ಮಾಡಿಕೊಳ್ಳಬಯಸುವ ಭಾಷಾಅಲ್ಪಸಂಖ್ಯಾತರಿಗೆ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಇತರ ಕಡೆಗಳಲ್ಲಿ ಅವಕಾಶವನ್ನು ಮಾಡಿಕೊಡಲಾಗಿದೆ.

೪) ಕರ್ನಾಟಕ ರಾಜ್ಯದ ಆಡಳಿತ ಭಾಷೆ ಕನ್ನಡವಾಗಿರುವುದರಿಂದ ಸರಕಾರಿ ನೌಕರಿ ಸೇರಿದ ಭಾಷಾಅಲ್ಪಸಂಖ್ಯಾತರು ಮೂರು ವರ್ಷಗಳಲ್ಲಿ ಕನ್ನಡದ ಒಂದು ಪ್ರಶ್ನೆ ಪತ್ರಿಕೆಗೆ ಕನ್ನಡದಲ್ಲಿ ಉತ್ತರಿಸಬೇಕು. ಆದರೆ ಕನ್ನಡ ಬಾರದಿದ್ದವರಿಗೆ ಲೋಕಸೇವಾ ಆಯೋಗದ ಮೂಲಕ ಸರಕಾರಿ ಹುದ್ದೆಗಳನ್ನು ಪಡೆಯಲು ಅವಕಾಶ ವಿಲ್ಲ ಎಂಬ ನಿರ್ಬಂಧವಿಲ್ಲ.

ಮೇಲೆ ಕಾಣಿಸಿದ ಎಲ್ಲ ರೀತಿಯ ಸೌಲಭ್ಯಗಳನ್ನು ಭಾಷಾಅಲ್ಪಸಂಖ್ಯಾತರಿಗೆ ಒದಗಿಸಿ ಕೊಟ್ಟಿರುವ ಕರ್ನಾಟಕ ರಾಜ್ಯವು, ಪ್ರಾಯಶಃ ಭಾರತದ ಎಲ್ಲ ರಾಜ್ಯಗಳಿಗೂ ಮಾದರಿಯು ಹಾಗೂ ಅನುಕರಣೀಯ ರೀತಿಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸಿದೆ ಎಂದು ಹೇಳಬಹುದು. ಕರ್ನಾಟಕ ರಾಜ್ಯದಲ್ಲಿ ರಾಜ್ಯ ಭಾಷೆ ಹಾಗೂ ಆಡಳಿತ ಭಾಷೆ ಕನ್ನಡವೇ ಆಗಿರುವುದರಿಂದ ಕರ್ನಾಟಕದ ನೆಲ-ಜಲವನ್ನು ಆಶ್ರಯಿಸಿಕೊಂಡು ಬದುಕಬೇಕೆನ್ನುವ ಭಾಷಾಅಲ್ಪಸಂಖ್ಯಾತರು ಕನ್ನಡವನ್ನು ಕಲಿಯಬಾರದೇಕೆ ? ಕನ್ನಡ ಭಾಷೆಯೇ ಬಾರದಿದ್ದವರು ಕನ್ನಡಿಗರೊಡನೆ ಬೆರೆತು, ವ್ಯವಹರಿಸುವ ವಿಧಾನವಾದರೂ ಯಾವುದು ? ರಾಜ್ಯದ ಆಡಳಿತೆಯಲ್ಲಿ ಕನ್ನಡವೇ ಮಾಧ್ಯಮವಾಗಿರುವುದರಿಂದ ಕನ್ನಡ ಭಾಷೆ ಬಾರದಿದ್ದವರು ಜನತೆಯ ಬೇಕು-ಬೇಡಗಳನ್ನು ಅರಿತು ಆಡಳಿತ ಮಾಡಲು ಸಾಧ್ಯವೇ ?

ಭಾಷಾಸೂತ್ರದ ಸರ್ಕಾರಿ ಆಜ್ಞೆ : ರಾಜ್ಯದ ಪ್ರೌಢ ಶಿಕ್ಷಣಗಳಲ್ಲಿ ೧೯೮೭-೮೮ನೇ ಸಾಲಿನಿಂದ ಪ್ರದೇಶ ಭಾಷೆಯಾಗಿ ೧೨೫ ಅಂಕಗಳಿರುವ ಕನ್ನಡ ಕಲಿಕೆ ಕಡ್ಡಾಯಗೊಳಿಸುವ ಆಜ್ಞೆಯನ್ನು ಸರಕಾರ ೨೦-೭-೧೯೮೨ರ ಶನಿವಾರ ಹೊರಡಿಸಿದೆ; ಈ ಆಜ್ಞೆಯು ಡಾ|| ಗೋಕಾಕ್ ವರದಿಯನ್ನು ಆದರಿಸಿ ರಾಜ್ಯವಿಧಾನ ಮಂಡಳದ ಒಪ್ಪಿಗೆ ಪಡೆದ ಸೂತ್ರಕ್ಕೆ ಅನುಗುಣವಾದ ಪರಿಷ್ಕೃತ ಆಜ್ಞೆಯಾಗಿದೆ. ಹೊಸ ಭಾಷಾ ಸೂತ್ರ ಜಾರಿಗೆ ಬಂದಾಗ ಪ್ರದೇಶ ಭಾಷೆಯ ಜೊತೆಗೆ ರಾಜ್ಯದ ವಿದ್ಯಾರ್ಥಿಗಳು ಹನ್ನೊಂದು ಭಾಷೆಗಳ ಪೈಕಿ ಯಾವುದಾದರೂ ಎರಡು ಭಾಷೆಗಳನ್ನು ಕಲಿಯಬೇಕಾಗುತ್ತದೆ. ಇವುಗಳಿಗೆ ಒನ್ನೊಂದಕ್ಕೂ ೧೦೦ ಅಂಕಗಳಿರುತ್ತವೆ. ಭಾಷೆಗಳು : ಉರ್ದು, ತಮಿಳು, ತೆಲುಗು, ಮರಾಠಿ, ಇಂಗ್ಲಿಷ, ಹಿಂದೀ. ಸಂಸ್ಕೃತ, ಮಲೆಯಾಳಿ, ಅರೇಬಿಕ್, ಪರ್ಶಿಯನ್ ಮತ್ತು ಕನ್ನಡ. ರಾಜ್ಯದಲ್ಲಿ ಎಲ್ಲರೂ ಕಲಿಯ ಬೇಕಾದ ಪ್ರದೇಶ ಭಾಷೆಯಲ್ಲಿ (ಕನ್ನಡ) ಹತ್ತು ವರ್ಷಗಳಕಾಲ ೧೫ ಕೃಪಾಂಕಗಳನ್ನು (grace marks) ಕನ್ನಡೇತರ ವಿದ್ಯಾರ್ಥಿಗಳಿಗೆ ಮತ್ತು ಹಿಂದೀ ತಾಯ್ನುಡಿಯಲ್ಲದವರು ಹಿಂದೀ ಕಲಿತಲ್ಲಿ (ಬೇರೆ ಎರಡು ಭಾಷೆಗಳ ಪೈಕಿ ಹಿಂದೀ ಆಯ್ಕೆ ಮಾಡಿಕೊಂಡಿದ್ದರೆ) ೧೫ ಕೃಪಾಂಕಗಳು ದೊರೆಯುತ್ತವೆ.

ರಿಯಾಯಿತಿ : ನೆರೆಯ ರಾಜ್ಯಗಳಿಂದ ಬಂದು ಕರ್ನಾಟಕ ರಾಜ್ಯದಲ್ಲಿ ೮,೯ ಇಲ್ಲವೆ ೧೦ನೇ ತರಗತಿಗಳಿಗೆ ಸೇರುವ ವಿದ್ಯಾರ್ಥಿಗಳಿಗೆ ಅವರು ಆ ಮೊದಲು ಕನ್ನಡ ಕಲಿಯದಿದ್ದವರಾದರೆ ಅಂಥವರು ಇಂಗ್ಲೀಷ್ ಅಥವಾ ಹಿಂದಿಯನ್ನು ಕಲಿಯಬಹುದು. (ಪ್ರದೇಶ ಭಾಷೆಯ ಬದಲು) ಇದೊಂದ ವಿಶೇಷ ರಿಯಾಯಿತಿ; ಕನ್ನಡೇತರ ಶಾಲೆಗಳಲ್ಲೆಲ್ಲ ಪ್ರಸಕ್ತ ಶಿಕ್ಷಣ ವರ್ಷದಿಂಲೇ ಕನ್ನಡದ ಕಲಿಕೆ ಪ್ರಥಮ ತರಗಳಿಯಿಂದ ಆರಂಭವಾಗುತ್ತದೆ. ಈ ರೀತಿ ಕಲಿತವರು ೮ನೇ ತರಗತಿಗೆ ೧೯೮೭-೮೮ ರಲ್ಲಿ ಪ್ರವೇಶ ಪಡೆಯುತ್ತಾರೆ.

ಸಂಸ್ಕೃತದ ಸ್ಥಾನ : ಪ್ರಸಕ್ತ ಶಿಕ್ಷಣ ವರ್ಷದಲ್ಲಿ ಪ್ರೌಢಶಾಲೆಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಪ್ರಥಮ ಭಾಷೆ (ಪ್ರದೇಶ ಭಾಷೆ) ಯಾಗಿ ಸಂಸ್ಕೃತವನ್ನು ಕಲಿಯಲು ಅವಕಾಶವಿಲ್ಲ. ಇಷ್ಟೇಅಲ್ಲ ಸಮಿಶ್ರ ಭಾಷಾ ವ್ಯವಸ್ಥೆಯಲ್ಲೂ ಸಂಸ್ಕೃತ ಕಲಿಯಲು ಅವಕಾಶವಿಲ್ಲ, ತೃತೀಯ ಭಾಷೆಯಾಗಿ ಮಾತ್ರ ಸಂಸ್ಕೃತ ಕಲಿಯಲು ಅವಕಾಶವಿದೆ. ಇದೇ ವ್ಯವಸ್ಥೆ ೧೯೮೬-೮೭ರ ಶಿಕ್ಷಣ ವರ್ಷದ ಪರ್ಯಂತವಿರುತ್ತದೆ;

೨೦-೭-೧೯೮೨ ರಂದು ಪ್ರಕಟವಾದ ಈ ಆಜ್ಞೆಯು ಇದಕ್ಕೆ ಮೊದಲುಏಪ್ರಿಲ್ ೩೦ ರಂದು ಸರಕಾರ ಹೊರಡಿಸಿದ್ದ ಆಜ್ಞೆಯನ್ನು ಅನೂರ್ಜಿತ ಗೊಳಿಸಿದೆ,

ಮೇಲಿನ ಭಾಷಾ ಸೂತ್ರದದಿಂದ ಭಾಷಾಅಲ್ಪಸಂಖ್ಯಾತರಿಗೆ ಯಾವುದೇ ರೀತಿಯ ಅನ್ಯಾಯವಾಗುವುದಿಲ್ಲ, ಇಷ್ಟೇ ಅಲ್ಲ, ಕನ್ನಡೇತರ ವಿದ್ಯಾರ್ಥಿಗಳಿಗೆ ೧೫

ಕೃಪಾಂಕಗಳು ದೊರೆಯುತ್ತಿರುವುದು ಅವರಿಗೆ ಇನ್ನೂ ಹೆಚ್ಚಿನ ಸೌಲಭ್ಯವನ್ನು ಒದಗಿಸಿದಂತಾಗುತ್ತದೆ.

ಹಂತ ಹಂತವಾಗಿ ಕನ್ನಡವನ್ನು ಕಲಿತು ಕರ್ನಾಟಕ ರಾಜ್ಯದ ಜನತೆಯೊಂದಿಗೆ ಭಾಷಾಬಾಂಧವ್ಯದ ಮೂಲಕ, ಸುಖೀಜೀವನ ಸಾಗಿಸಲು ಕರ್ನಾಟಕ ಸರ್ಕಾರವು ಭಾಷಾಅಲ್ಪಸಂಖ್ಯಾತರಿಗೆ ಸುವರ್ಣಾವಕಾಶವನ್ನು ಒದಗಿಸಿಕೊಟ್ಟಿದೆ.

ಈ ಎಲ್ಲ ಸೌಜನ್ಯಶೀಲ ಕ್ರಮಗಳನ್ನು ಧಿಕ್ಕರಿಸಿ ಕನ್ನಡ ಕಲಿಯುವುದೇ ನಮಗೆ ಬೇಡ ಎನ್ನುವವರಿಗೆ ಕರ್ನಾಟಕದ ಆಶ್ರಯವಾದರೂ ಏಕೆ ಬೇಕು ?

ಸರ್ಕಾರಿ ಆಜ್ಞೆಯು ಹೊಸ ಭಾಷಾ ಸೂತ್ರದಿಂದಾಗುವ ಪರಿಣಾಮಗಳು :

ಕನ್ನಡ ನಾಡಿನ ಶಿಕ್ಷಣದಲ್ಲಿ ಕನ್ನಡವೇ ಕಡ್ಡಾಯದ ಏಕೈಕ ಪ್ರಥಮ ಭಾಷೆಯಾಗಬೇಕೆಂಬುದು ನಾಡಿನಾದ್ಯಂತ ನಡೆದ ಚಳವಳಿಯ ಗುರಿಯಾಗಿತ್ತು. ಸರ್ಕಾರಿ ಆಜ್ಞೆಯಿಂದ ಈ ಗುರಿಯು ತಕ್ಕಮಟ್ಟಿಗೆ ಸಮಾಧಾನವನ್ನು ನೀಡಿದೆ.

ಈ ರಾಜ್ಯದಲ್ಲಿ ಓದುವ ವಿದ್ಯಾರ್ಥಿಗಳು ಇನ್ನುಮುಂದೆ ಪ್ರಾಥಮಿಕ ಮೊದಲನೆಯ ತರಗತಿಯಿಂದಲೇ ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇ ಬೇಕು. ಪ್ರಾದೇಶಿಕ ಭಾಷೆ ಎಂಬ ದೃಷ್ಟಿಯಿಂದ ಕನ್ನಡಕ್ಕೆ ಪ್ರಥಮಸ್ಥಾನ, ಇನ್ನುಳಿದ ಎರಡು ಭಾಷೆಗಳಲ್ಲಿ ಯಾವ ಭಾಷೆಗಳನ್ನು ಆಯ್ದುಕೊಳ್ಳಬೇಕೆಂಬುದು ಓದುವ ವಿದ್ಯಾರ್ಥಿಗಳಿಗೆ ಬಿಟ್ಟುಕೊಟ್ಟಿರುವ ವಿಷಯವಾಗಿದೆ. ಈ ಭಾಷೆಗಳೆಂದರೆ ಇಂಗ್ಲೀಷ್, ಹಿಂದೀ, ತಮಿಳು, ತೆಲುಗು, ಸಂಸ್ಕೃತಿ, ಮಲೆಯಾಳಂ, ಮರಾಠಿ, ಉರ್ದು, ಪರ್ಶಿಯನ್, ಅರೇಬಿಕ್ ಭಾಷೆಗಳು. ಇವುಗಳ ಜೊತೆಗೆ ಮತ್ತೆ ಕನ್ನಡವನ್ನೂ ಒಂದು ಭಾಷೆಯನ್ನಾಗಿ ಸೇರಿಸಲಾಗಿದೆ. ವಿದ್ಯಾರ್ಥಿ ಆಯ್ದುಕೊಳ್ಳುವ ಈ ಎರಡೂ ಭಾಷೆಗಳಿಗೆ ತಲಾ ೧೦೦ ಅಂಕಗಳೆಂದು ನಿರ್ಧರಿಸಲಾಗಿದೆ. ಈ ಹಿಂದಿನ ಗೋಕಾಕ ವರದಿಯ ರೀತ್ಯ ಭಾಷಾ ವಿಷಯುಗಳಿಗೆ ೩೫೦ ಅಂಕಗಳನ್ನು ಗೊತ್ತುಮಾಡಲಾಗಿತ್ತು. ಇದಲ್ಲದೆ ಪ್ರಾಥಮಿಕ ಮೂರನೆಯ ತರಗತಿಯಿಂದ ಎರಡನೇ ಭಾಷೆಯಾಗಿ, ಮಾತೃಭಾಷೆಯನ್ನು ಓದಬಹುದಾಗಿತ್ತು. ಇದೇ ರೀತಿ ಮಾಧ್ಯಮಿಕ ಶಿಕ್ಷಣದಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನು, ದ್ವಿತೀಯ ಭಾಷೆಯಾಗಿ ಮಾತೃಭಾಷೆಯನ್ನು ತೆಗೆದುಕೊಳ್ಳಬಹುದೆಂದು ಗೋಕಾಕ ವರದಿಯಲ್ಲಿ ನಮೂದಿಸಲಾಗಿತ್ತು. ೧೯೮೧–೮೨ ರಲ್ಲಿ ಕನ್ನಡೇತರರು ಪ್ರಾಥಮಿಕ ಹಂತದಲ್ಲಿ ದ್ವಿತೀಯ ಭಾಷೆಯಾಗಿ ಕನ್ನಡವನ್ನು ಹಂತ-ಹಂತವಾಗಿ ಕಲಿತು ೧೯೮೬–೮೭ ರ ಹೊತ್ತಿಗೆ ಅಂದರೆ ೮ ನೇ ತರಗತಿಯಿಂದ ಎಲ್ಲ ವಿದ್ಯಾರ್ಥಿಗಳು ಕನ್ನಡವನ್ನು ೧೫೦ ಅಂಕಗಳ ಪ್ರಥಮ ಭಾಷೆಯಾಗಿ ಕಡ್ಡಾಯವಾಗಿ ಓದಬೇಕಿತ್ತು.

ಭಾಷಾ ವಿಷಯವೊಂದಕ್ಕೆ ೫೦ ಅಂಕಗಳ [illegible] ಸಾಧ್ಯವಿಲ್ಲವೆಂದು, ಇತರ ವಿಷಯಗಳ ಜ್ಞಾನಾರ್ಜನೆಗೆ ಕಡಿಮೆ ಅಂಕಗಳಾಗುವವೆಂದು, ಶಿಕ್ಷಣ ತಜ್ಞರು ಒಟ್ಟಾರೆ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಅಂಶವನ್ನು ಗಮನಿಸಿ ಸರಕಾರವು ಕಡ್ಡಾಯದ ಪ್ರಥಮ ಭಾಷೆಯಾದ ಕನ್ನಡಕ್ಕೆ ೧೨೫ ಅಂಕಗಳನ್ನು, ಕನ್ನಡವನ್ನು ಹೊರತುಪಡಿಸಿದ ಇತರ ಭಾಷೆಗಳಿಗೆ ಸಮಾನ ೧೦೦ ಅಂಕಗಳನ್ನು ನಿಗದಿ ಪಡಿಸಿ ವಿದ್ಯಾರ್ಥಿಗಳ ಕಲಿವಿಟ್ಟಿನ ಭಾರವನ್ನು ಕಡಿಮೆಮಾಡುವ ಜೊತೆಗೆ ೧ ನೇ ತರಗತಿಯಿಂದ ೩ ನೇ ತರಗತಿಯವರೆಗೆ ಕನ್ನಡವನ್ನೇ ಕಲಿಯದಿದ್ದ ವಿದ್ಯಾರ್ಥಿಗಳು ಒಮ್ಮೆಲೇ ೩ ನೇ ತರಗತಿಯಿಂದ ಕನ್ನಡಭಾಷಾ ಕಲಿಕೆಯನ್ನು ಪ್ರಾರಂಭಿಸುವುದರಿಂದ, ೮ ನೇ ತರಗತಿಯಲ್ಲಿ ಕನ್ನಡವನ್ನೇ ಪ್ರಥಮ ಭಾಷೆಯಾಗಿ ಅಭ್ಯಾಸ ಮಾಡುವುದು ಅಷ್ಟೊಂದು ಸುಗಮವಾಗಲಾರದು ಎಂದು ಯೋಚಿಸಿ, ಹೊಸ ಭಾಷಾ ಸೂತ್ರದಲ್ಲಿ ಕನ್ನಡದ ಕಲಿಕೆಯನ್ನು ಮೊದಲ ತರಗತಿಯಿಂದಲೇ ಕಡ್ಡಾಯಗೊಳಿಸಿರುವುದು ಸೂಕ್ತವೂ, ವ್ಯವಹಾರಿಕವೂ ಆಗಿದೆ. ಈಗ ಸಂಸ್ಕೃತ, ಹಿಂದೀ ಭಾಷೆಗಳ ಹೊರೆಯಿಲ್ಲದೆ ಕನ್ನಡದಲ್ಲಿ ೧೨೫ ಗುಣಗಳನ್ನು ಪಡೆಯಬಹುದು.

ಈ ಸೂತ್ರವು ಜಾರಿಗೆ ಬರಲು ಇನ್ನೂ ಆರು ವರ್ಷಗಳು ಬೇಕು. ಅನಂತರ ಹತ್ತು ವರ್ಷಗಳ ಕಾಲ ಕನ್ನಡೇತರ ವಿದ್ಯಾರ್ಥಿಗಳಿಗೆ ಕೃಪಾಂಕಗಳು ದೊರೆಯುತ್ತಿರುವುದರಿಂದ ಭಾಷಾ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಕನ್ನಡ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿನ ಸೌಕರ್ಯವು ಒದಗಿದಂತಾಗುತ್ತದೆ. ಈ ಕೃಪಾಂಕಗಳು ಪರೀಕ್ಷೆಯಲ್ಲಿ ಕನ್ನಡವನ್ನು ತೆಗೆದುಕೊಂಡು ಓದುವವರಿಗೆ ಪರೀಕ್ಷೆಯಲ್ಲಿ ಪಾಸಾಗುವ ಮಟ್ಟಿಗೆ ಪರಿಗಣಿಸಲ್ಪಡಬೇಕೇ ವಿನಃ ಹೆಚ್ಚಿಗೆ ಕೃಪಾಂಕಗಳಾಗಿ ಮಾರ್ಪಡಬಾರದು-ಅಂದರೆ ಕನ್ನಡ ಬಿಟ್ಟು ೧೨೫ ಅಂಕಗಳಿಗೆ ಪಾಸಾಗಲು ಕನಿಷ್ಟ ೪೫ ಅಂಕಗಳಾದರೂ ಬೇಕು. ಕನ್ನಡೇತರ ವಿದ್ಯಾರ್ಥಿಗಳು ಕನ್ನಡದಲ್ಲಿ ೪೫ ಅಂಕಗಳನ್ನು ಪಡೆದು ಪರಿಕ್ಷೆಯಲ್ಲಿ ತೇರ್ಗಡೆ ಹೊಂದುವಂತಿದ್ದರೂ ಕೃಪಾಂಕದ ೧೫ ಅಂಕಗಳನ್ನು ಆ ೪೫ ಅಂಕಗಳಿಗೆ ಸೇರಿಸಬಾರದು. ಅಂದರೆ ೩೦ ಅಂಕಗಳನ್ನು ಪಡೆದ ಕನ್ನಡೇತರ ವಿದ್ಯಾರ್ಥಿಗಳಿಗೆ ಪಾಸಾಗಲು ಬೇಕಾಗುವ ಈ ೧೫ ಕೃಪಾಂಗಳನ್ನು ಸೇರಿಸಿ, ಅವರಿಗೆ ಉತ್ತೀರ್ಣತೆಯ ಅರ್ಹತೆಯನ್ನು ನೀಡಬೇಕು. ಹಾಗಾಗದೇ ಹೋದರೆ ಕನ್ನಡದಲ್ಲಿ ಓದುವ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಏಕೆಂದರೆ ಕನ್ನಡಕ್ಕಿರುವ ೧೨೫ ಅಂಕಗಳಲ್ಲಿ ಕನ್ನಡ ವಿದ್ಯಾರ್ಥಿಗಳು ೫೦ ಗುಣಗಳನ್ನಾದರೂ ಪಡೆಯಬೇಕು. ಆಗ ಕನ್ನಡೇತರ ವಿದ್ಯಾರ್ಥಿಯು ೪೫ ಗುಣಗಳನ್ನು ಪಡೆದಾಗಲೂ ಜೊತೆಗೆ ೧೫ ಕೃಪಾಂಗಳನ್ನು ಸೇರಿಸಿದರೆ, ಕನ್ನಡ ವಿದ್ಯಾರ್ಥಿಗಳಿಗಿಂತಲೂ ಕನ್ನಡೇತರ ವಿದ್ಯಾರ್ಥಿಯು ೬೦ ಅಂಕಗಳನ್ನು ಪಡೆದಂತಾಗುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ತಾರತಮ್ಯ ಭಾವವು, ಅಸಮಾಧಾನವೂ ಹೆಚ್ಚುವ ಸಂಭವವಿದೆ. ಆದುದರಿಂದ ಪರೀಕ್ಷೆಯಲ್ಲಿ ಪಾಸಾಗಲು ಬೇಕಾಗುವ

ಅಂಕಗಳಿಗಿಂತಲೂ ಕಡಿಮೆ ತೆಗೆದುಕೊಂಡ ಕನ್ನಡೇತರ ವಿದ್ಯಾರ್ಥಿಗಳಿಗೆ ಈ ಕೃಪಾಂಕ ಗಳನ್ನು ಸೇರಿಸಬೇಕು ಎಂಬುದು ಕನ್ನಡಿಗರ ಅಭಿಪ್ರಾಯ. ಸರಕಾರಿ ಆಜ್ಞೆಯು ಈ ಭಾವನೆಗೆ ವ್ಯತಿರಿಕ್ತವಾಗಿಲ್ಲವೆಂಬುದನ್ನು ಎಲ್ಲರೂ ಗಮನಿಸಬೇಕು.

ಒಟ್ಟಿನಲ್ಲಿ ಸರಕಾರದ ಈ ಹೊಸ ಭಾಷಾ-ಸೂತ್ರದಲ್ಲಿ ಕನ್ನಡವನ್ನು ಕಡ್ಡಾಯದ ಏಕೈಕ ಭಾಷೆಯನ್ನಾಗಿ ಮಾಡಿರುವುದು ಕನ್ನಡಿಗರ ಹಾಗೂ ಕನ್ನಡ ಸಂಸ್ಕೃತಿಯ ಸರ್ವಾಭಿವೃದ್ಧಿಯ ದೃಷ್ಟಿಯಿಂದ ಸ್ವಾಗತಾರ್ಹವಾಗಿದೆ.

ರಾಜ್ಯದ ಶೈಕ್ಷಣಿಕರಂಗದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂಬ ಆಜ್ಞೆಯೊಂದೇ ಸಾಲದು. ಕನ್ನಡ ಭಾಷಾ ಬಳಕೆ ರಾಜ್ಯಾಂಗ ಮತ್ತು ಆಡಳಿತಾಂಗ ಗಳಲ್ಲಿ ಹಾಸು ಹೊಕ್ಕಾಗಬೇಕು. ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಲು ಹಾಗೂ ಎಲ್ಲ ಹಂತಗಳಲ್ಲಿ ಜಾರಿಗೆ ತರಲು ಕೈಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಲು ೧-೧೧-೧೯೭೦ ರಂದು ಸರಕಾರವು ಕನ್ನಡ ಭಾಷಾ ಸಮಿತಿಯೊಂದನ್ನು ನಿಯಮಿಸಿತ್ತು. ಆ ಸಮಿತಿಯು ೩೧-೩-೧೯೭೧ರಲ್ಲಿ ಸರಕಾರಕ್ಕೆ ತನ್ನ ಅಂತಿಮ ವರದಿಯನ್ನು ಸಲ್ಲಿಸಿತು. ಆ ಸಂದರ್ಭದಲ್ಲಿ ಅಧಿಕಾರಿ ವರ್ಗದವರು ಮತ್ತು ಸಾರ್ವಜನಿಕರಿಂದ ಹಲ ಕೆಲವು ಸೂಕ್ತ ಸಲಹೆ ಸೂಚನೆಗಳು ಬಂದವು. ಅವುಗಳನ್ನು ಯಥಾವತ್ತಾಗಿ ಈ ಕೆಳಗೆ ನಮೂದಿಸಲಾಗಿದೆ.

೧. ಅಧಿಕಾರಿ ವರ್ಗದವರಿಂದ ಬಂದ ಸಲಹೆಗಳು

ಸಮಿತಿಯ ಅವಗಾಹನೆಗೆ ಅಧಿಕಾರಿ ವರ್ಗದವರಿಂದ ಬಂದ ಕೆಲವು ಮುಖ್ಯ ಸಲಹೆಗಳು ಈ ಕೆಳಗಿನಂತಿವೆ :—

೧) ಎಲ್ಲಾ ಕಾರ್ಯಾಲಯಗಳಿಗೂ ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸಬೇಕು.

೨) "ಆಡಳಿತ ಶಬ್ದಕೋಶ" ಮತ್ತು "ಕಾರ್ಯಾಲಯ ಕೈಪಿಡಿ"ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಎಲ್ಲ ಕಾರ್ಯಾಲಯಗಳಿಗೆ ಒದಗಿಸಬೇಕು.

೩) ಎಲ್ಲ ವಾಣಿಜ್ಯ ವಿದ್ಯಾಸಂಸ್ಥೆ (Commercial Training Institutes) ಗಳಲ್ಲಿ ಕನ್ನಡ ಬೆರಳಚ್ಚು ಕಲಿಸಲು ಅವಕಾಶ ಕಲ್ಪಿಸಬೇಕು.

೪) ಇಂಗ್ಲೀಷ್ ಬೆರಳಚ್ಚುಗಾರರು ಕನ್ನಡ ಬೆರಳಚ್ಚನ್ನು ಕಲಿತರೆ ಅವರಿಗೆ ವಿಶೇಷ ಭತ್ಯವನ್ನು ಕೊಡಬೇಕು.

೫) ಅಧಿನಿಯಮಗಳು (Acts) ಮತ್ತು ನಿಯಮಾವಳಿಗಳೇ ಮುಂತಾದವುಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಎಲ್ಲ ಕಾರ್ಯಾಲಯಗಳಿಗೂ ಒದಗಿಸಬೇಕು.

೭) ಸರ್ಕಾರಿ ಕಾರ್ಯಾಲಯಗಳಲ್ಲಿ ಉಪಯೋಗದಲ್ಲಿರುವ ಎಲ್ಲ ನಮೂನೆ ಫಾರ್ಮ್, ವಹಿ ನೋಟೀಸು ಇತ್ಯಾದಿಗಳನ್ನು ಕನ್ನಡದಲ್ಲಿ ಮುದ್ರಿಸಿ ಎಲ್ಲ ಕಾರ್ಯಾಲಯಗಳಿಗೂ ಒದಗಿಸಬೇಕು.

೭) ಉಪ ವಿಭಾಗ ಮಟ್ಟದಲ್ಲಿ ಮಾತ್ರ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತಂದರೆ ಆಡಳಿತದ ದೃಷ್ಟಿಯಿಂದ ಕೆಲವು ಅನಾನುಕೂಲತೆಗಳುಂಟಾಗುತ್ತವೆ. ಇವುಗಳನ್ನು ನಿವಾರಿಸಲು ಜಿಲ್ಲಾ ಮಟ್ಟದಲ್ಲಿ ಎಲ್ಲ ಕಾರ್ಯಾಲಯಗಳಲ್ಲಿ ಕನ್ನಡವನ್ನು ಜಾರಿಗೆ ತಂದರೆ ವ್ಯವಹಾರವು ಸುಲಭವಾಗಿ ನಡೆಯುವುದು. ಉಪವಿಭಾಗದ ಕಾರ್ಯಾಲಯಗಳಲ್ಲಿ ವ್ಯವಹರಿಸುವ ಅಧಿಕಾರಿಯು ಮೇಲಾಧಿಕಾರಿಗಳಿಗೆ ಇಂಗ್ಲೀಷಿನಲ್ಲಿಯೂ, ಅಧೀನ ಕಾರ್ಯಾಲಗಳಿಗೆ ಕನ್ನಡದಲ್ಲಿಯೂ ಬರೆಯಬೇಕಾಗುವುದು. ಹೀಗೆ ಎರಡೂ ಭಾಷೆಗಳಲ್ಲಿ ನುರಿತ ಅಧಿಕಾರಿಗಳು ಸಿಗುವುದು ಕಷ್ಟ. ಆದ್ದರಿಂದ ಕನ್ನಡವನ್ನು ಜಿಲ್ಲಾ ಮಟ್ಟದ ಎಲ್ಲ ಕಾರ್ಯಾಲಯಗಳಲ್ಲಿ ಜಾರಿಗೆ ತಂದರೆ ಈ ತೊಡಕು ನಿವಾರಣೆಯಾಗುವುದು.

೮) ಅನೇಕ ಕಾರ್ಯಾಲಯಗಳಲ್ಲಿ ಬೆರಳಚ್ಚುಗಾರರೇ ಇಲ್ಲ. ಕೆಲವೆಡೆ ಇಂಗ್ಲೀಷು ಬೆರಳಚ್ಚುಗಾರರು ಮಾತ್ರ ಇದ್ದಾರೆ. ಇವರು ಕನ್ನಡ ಬೆರಳಚ್ಚನ್ನು ಕಲಿಯುವುದು ಅಷ್ಟು ಕಷ್ಟದ ಕೆಲಸವೇನಲ್ಲ. ಆದ್ದರಿಂದ ಇವರಿಗೆ ಕನ್ನಡ ಬೆರಳಚ್ಚು ಕಲಿಸುವ ಏರ್ಪಾಟು ಮಾಡಿ ಹೆಚ್ಚಿನ ಭತ್ಯ ಕೊಡುವ ಮೂಲಕ ಉತ್ತೇಜನ ನೀಡಬೇಕು.

೯) ಮುಂದೆ ಎಲ್ಲ ಹಂತಗಳಲ್ಲಿಯೂ ಕನ್ನಡವು ಆಡಳಿತ ಭಾಷೆಯಾಗಲಿರುವುದರಿಂದ ಜಿಲ್ಲೆ, ವಿಭಾಗ, ಸಚಿವಾಲಯ ಮಟ್ಟಗಳಲ್ಲೂ ಬೆರಳಚ್ಚುಗಾರರ ಹಾಗೂ ಶೀಘ್ರಲಿಪಿಗಾರರ ವಿಶೇಷ ಅವಶ್ಯಕತೆ ಇರುವುದರಿಂದ, ಈಗಿನಿಂದಲೇ ಈ ಕೊರತೆಯನ್ನು ನಿವಾರಿಸುವ ಪ್ರಯತ್ನ ನಡೆಯಬೇಕು.

೧೦) ಆಡಳಿತ ವ್ಯವಹಾರಕ್ಕೆ ಬೇಕಾದ ಕಾಗದ ಪತ್ರಗಳನ್ನೂ, ಟಿಪ್ಪಣಿಗಳನ್ನೂ ಕನ್ನಡದಲ್ಲಿ ಬರೆಯುವ ಬಗ್ಗೆ ಅವಶ್ಯಕವಿದ್ದ ಕಡೆಗಳಲ್ಲಿ ಕನಿಷ್ಠ ಒಂದು ವಾರದ ತರಬೇತಿ ನೀಡಬೇಕು,

೧೧) ಸಚಿವಾಲಯದಿಂದಲೂ, ಇಲಾಖಾ ಮುಖ್ಯಾಧಿಕಾರಿಗಳಿಂದಲೂ ಹೊರಡಿಸಲಾಗುವ ಆದೇಶಗಳೆಲ್ಲವೂ ಕನ್ನಡದಲ್ಲಿರಬೇಕು. ಹೀಗಾದರೆ ಮಾತ್ರ ಅವು ಅಧಿಕೃತವೆಂದು ತಿಳಿಯಲು ಬರುವುದಲ್ಲದೆ ಕೆಳಗಿನ ಅಧಿಕಾರಿಗಳು ತರ್ಜುಮೆ ಸಂಬಂಧವಾಗಿ ಎದುರಿಸಬೇಕಾಗಿ ಬರುವ ತೊಂದರೆಯೂ ತಪ್ಪುತ್ತದೆ.

೧೨) ಕೇಂದ್ರ ಹಾಗೂ ರಾಜ್ಯ ಲೋಕಸೇವಾ ಆಯೋಗ (ಪಬ್ಲಿಕ್ ಸರ್ವೀಸ್ ಕಮಿಷನ್) ದವರು ನಡೆಸುವ ಪರೀಕ್ಷೆಗಳಲ್ಲಿ ಕನ್ನಡ ಬಲ್ಲವರಿಗೆ ಪ್ರಾಶಸ್ತ್ಯ ನೀಡಬೇಕು. ಅವರು ನಡೆಸುವ ಎಲ್ಲ ಇಲಾಖಾ ಪರೀಕ್ಷೆಗಳಲ್ಲಿ ಕೆಲವಾದರೂ ಪ್ರಶ್ನೆ

ಗಳನ್ನು ಕನ್ನಡದಲ್ಲಿ ಕೇಳಿ ಅವುಗಳಿಗೆ ಕನ್ನಡದಲ್ಲಿಯೇ ಉತ್ತರ ನೀಡುವಂತೆ ಆಜ್ಞಾಪಿಸ ಬೇಕು. ಸರ್ಕಾರಿ ಹುದ್ದೆಗಳಿಗಾಗಿ ಏರ್ಪಡಿಸುವ ಸಂದರ್ಶನಗಳಲ್ಲೂ ಸಹ ಕನ್ನಡ ದಲ್ಲಿಯೇ ಉತ್ತರ ಪಡೆಯಬೇಕು.

೧೩) ಕೆಲವು ಪದಗಳು ಆಯಾ ಪ್ರದೇಶಗಳಲ್ಲಿ ವಿಶಿಷ್ಟವಾದ ಅರ್ಥದಲ್ಲಿ ಬಳಕೆಯಲ್ಲಿವೆ. ಆಡಳಿತ ಶಬ್ದಕೋಶವನ್ನು ಪುನರ್ಮುದ್ರಿಸುವಾಗ ಇಂಥ ಪದಗಳನ್ನು ಅದರಲ್ಲಿ ಸೇರಿಸಿ ಅವು ರಾಜ್ಯದ ಯಾವ ಪ್ರದೇಶಗಳಲ್ಲಿ ಬಳಕೆಯಲ್ಲಿರುವುದೆಂಬುದನ್ನು ಸೂಚಿಸಲು ಹಳೆಯ ಮೈಸೂರು, ಮುಂಬಯಿ, ಹೈದರಾಬಾದು, ಮದ್ರಾಸು, ಕೊಡಗು ಎಂಬ ಪ್ರದೇಶಗಳ ಸೂಚಕವಾಗಿ ಹ. ಮೈ.ಮು. ಹೈ., ಮ., ಕೊ., ಎಂಬ ಅಕ್ಷರಗಳನ್ನು ಅವುಗಳ ಮುಂದೆ ಬರೆಸುವ ಏರ್ಪಾಟು ಮಾಡಬೇಕು.

೧೪) ವಾರ್ತಾ ಇಲಾಖೆಯವರು ಜಿಲ್ಲೆಗಳ ಪ್ರಸಾರಾಧಿಕಾರಿಗಳಿಗೆ ಸುದ್ದಿ ಸಮಾಚಾರಗಳನ್ನೂ, ಆದೇಶಗಳನ್ನೂ ಕನ್ನಡದಲ್ಲಿಯೇ ಕಳುಹಿಸಿರಬೇಕು ಮತ್ತು ಕನ್ನಡ ಬೆರಳಚ್ಚು ಯಂತ್ರಗಳನ್ನು ಆ ಇಲಾಖೆಯ ಕೆಳಗಿನ ಎಲ್ಲ ಕಚೇರಿಗಳಿಗೂ ಒದಗಿಸಬೇಕು.

೧೫) ಕೆಲವು ಜಿಲ್ಲೆಗಳಿಗೆ ಭೂ ಸುಧಾರಣೆಗೆ (ಲ್ಯಾಂಡ್ ರಿಫಾರ್ಮ್ಸ್) ಸಂಬಂಧಪಟ್ಟ ಅನೇಕ ವ್ಯವಹಾರಗಳು ಇಂಗ್ಲೀಷ್‌ನಲ್ಲಿ ಇದ್ದು ರೈತರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಇವುಗಳಿಗೆ ಸಂಬಂಧಪಟ್ಟ ಎಲ್ಲ ನಮೂನೆಗಳು ಹಾಗೂ ದಾಖಲೆಗಳು ಕನ್ನಡದಲ್ಲಿರಬೇಕು.

೧೬) ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಒಬ್ಬ ಭಾಷಾಂತರಕಾರರನ್ನು ನೇಮಿಸಬೇಕು.

೧೭) ಎಲ್ಲ ಹಂತಗಳಲ್ಲೂ ಕನ್ನಡ ಆಡಳಿತ ಭಾಷೆಯಾಗಿ ಕೂಡಲೇ ಜಾರಿಗೆ ಬರಬೇಕು.

೨. ಸಾರ್ವಜನಿಕರಿಂದ ಬಂದ ಸಲಹೆಗಳು

ಸಮಿತಿಗೆ ಸಾರ್ವಜನಿಕರಿಂದ ಹಾಗೂ ಸಂಸ್ಥೆಗಳಿಂದ ಬಂದ ಕೆಲವು ಸಲಹೆಗಳು ಕೆಳಗಿನಂತಿವೆ :—

೧) ಕನ್ನಡವನ್ನು ಜಿಲ್ಲಾಮಟ್ಟದಲ್ಲಿಯೂ, ಆದಷ್ಟು ಬೇಗ ರಾಜ್ಯಮಟ್ಟ ದಲ್ಲಿಯೂ ಆಡಳಿತ ಭಾಷೆಯನ್ನಾಗಿ ಜಾರಿಗೆ ತರಬೇಕು.

೨) ಸರ್ಕಾರದ ವ್ಯವಹಾರ ಕನ್ನಡದಲ್ಲಿ ನಡೆಯಬೇಕಾದರೆ ಮೇಲಾಧಿಕಾರಿ ಗಳಿಂದ ಮೊದಲುಗೊಂಡು ಎಲ್ಲ ಅಧಿಕಾರಿಗಳೂ ಕನ್ನಡ ಬಲ್ಲವರಿರಬೇಕು.

೩) ಊರುಗಳ, ಕಾರ್ಯಾಲಯಗಳ, ಸಹಕಾರಿ ಸಂಘಗಳ, ಶಾಲೆಗಳ, ಸ್ಥಳೀಯ ಸಂಸ್ಥೆಗಳ ಮತ್ತು ಇತರೇ ಸಾರ್ವಜನಿಕ ಸಂಸ್ಥೆಗಳ ನಾಮಫಲಕಗಳು ಕನ್ನಡದಲ್ಲಿಯೇ ಇರಬೇಕು.

೪) ಸರ್ಕಾರಿ ಹುದ್ದೆಗಳಿಗೆ ನೇಮಕಗಳನ್ನು ಮಾಡುವಾಗ ಸಂದರ್ಶನದಲ್ಲಿ (ಇಂಟರ್‌ವ್ಯೂನಲ್ಲಿ) ಕನ್ನಡದಲ್ಲಿಯೇ ಪ್ರಶ್ನೆಗಳನ್ನು ಹಾಕಿ ಅಭ್ಯರ್ಥಿಗಳಿಂದ ಕನ್ನಡದಲ್ಲಿ ಉತ್ತರ ಪಡೆಯಬೇಕು. ಇದೇ ವಿಧಾನವನ್ನು ಕಾರ್ಖಾನೆಗಳಲ್ಲಿ ನೌಕರರನ್ನು ನೇಮಿಸುವಾಗಲೂ ಮತ್ತು ಇತರ ನೇಮಕಗಳನ್ನು ಮಾಡುವಾಗಲೂ ಅನುಸರಿಸಬೇಕು.

೫) ನ್ಯಾಯಾಲಯಗಳಲ್ಲಿಯೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರಬೇಕು.

೬) ಕನ್ನಡ ಬಾರದ ಅಧಿಕಾರಿಗಳು ಕನ್ನಡ ಕಲಿಯಬೇಕು. ಕಾಲಮಿತಿ ಗೊತ್ತುಮಾಡಿ ಅವರು ಆ ಅವಧಿಯೊಳಗೆ ಕಲಿಯದಿದ್ದರೆ ಅವರ ಸಂಬಳ ಬಡ್ತಿ (ಇಂಕ್ರಿಮೆಂಟ್) ಹಾಗೂ ಪದೋನ್ನತಿ (ಪ್ರಮೋಷನ್) ಇವುಗಳನ್ನು ತಡಹಿಡಿಯಬೇಕು.

೭) ಸರ್ಕಾರಿ ಇಲಾಖೆಗಳಿಂದ ಮತ್ತು ಸ್ಥಳೀಯ ಸಂಸ್ಥೆಗಳಿಂದ ಜನರಿಗೆ ಬರುವ ನೋಟೀಸು ಮೊದಲಾದುವುಗಳು ಕನ್ನಡದಲ್ಲಿರಬೇಕು.

೮) ಎಲ್ಲ ಶಾಲೆಗಳಲ್ಲಿಯೂ ಕನ್ನಡವು ಬೋಧ ಭಾಷೆಯಾಗಬೇಕು. ರಾಜ್ಯದಲ್ಲಿರುವ ಕಾನ್‌ವೆಂಟ್‌ಗಳಲ್ಲಿ ಮತ್ತು ಇತರೇ ಭಾಷಾ ಶಾಲೆಗಳಲ್ಲಿ ಕನ್ನಡವನ್ನೂ ಕಡ್ಡಾಯವಾಗಿ ಕಲಿಸಬೇಕು.

೯) ಮನ್ನಣೆ ಪಡೆದ ಕನ್ನಡ ಶೀಘ್ರಲಿಪಿ ಕಲಿಸುವ ಸಂಸ್ಥೆಗಳಿಗೆ ರಿಯಾಯತಿ ದರದಲ್ಲಿ ಬೆರಳಚ್ಚು ಯಂತ್ರಗಳನ್ನು ಒದಗಿಸಬೇಕು.

೧೦) "ಆಡಳಿತ ಶಬ್ದಕೋಶ" ಹಾಗೂ "ಕಾರ್ಯಾಲಯ ಕೈಪಿಡಿ"—ಇವುಗಳ ಪ್ರತಿಗಳು ಸಾರ್ವಜನಿಕರಿಗೂ, ಸಂಸ್ಥೆಗಳಿಗೂ ಸುಲಭವಾಗಿ ದೊರೆಯುವಂತೆ ಮಾರಾಟದ ವ್ಯವಸ್ಥೆ ಆಗಬೇಕು.

೧೧) ಕನ್ನಡದಲ್ಲಿ ಬಂದ ಅರ್ಜಿಗಳಿಗೆ ಆದ್ಯಗಮನ ನೀಡಲಾಗುವುದೆಂದು ಸರ್ಕಾರವು ಘೋಷಿಸಬೇಕು.

೧೨) ಈ ಕಾರ್ಯದಲ್ಲಿ ಸ್ಥಳೀಯ ಶಾಲಾ ಕಾಲೇಜುಗಳ ಅಧ್ಯಾಪಕರ ಹಾಗೂ ಕನ್ನಡ ಪಂಡಿತರ ನೆರವು ಪಡೆಯಬೇಕು.

೧೩) ಈಗ ಶಿಕ್ಷಣ ಇಲಾಖೆಯಲ್ಲಿ ಎಲ್ಲ ಪತ್ರ ವ್ಯವಹಾರಗಳೂ ಇಂಗ್ಲೀಷಿನಲ್ಲಿ ನಡೆಯುತ್ತಿವೆ. ಡಿ.ಪಿ.ಐ. ಕಚೇರಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕರವರೆಗೆ ನಡೆಯುವ ಎಲ್ಲ ಪತ್ರ ವ್ಯವಹಾರಗಳು ಕನ್ನಡದಲ್ಲಿರಬೇಕು.

೧೪) ಡಿಗ್ರಿ ಮತ್ತು ಇತರ ಪರೀಕ್ಷೆಗಳಲ್ಲಿ ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ತೇರ್ಗಡೆಯಾಗಿರುವವರಿಗೆ ಸರ್ಕಾರಿ ನೇಮಕಾತಿಗಳಲ್ಲಿ ಪ್ರಾಶಸ್ತ್ಯವಿರಬೇಕು.

೧೫) ಅಂಚೆ ಕಚೇರಿಯಲ್ಲಿ ಜನರ ಉಪಯೋಗಕ್ಕಾಗಿ ಬಳಸುವ ಕಾರ್ಡು, ಲಕ್ಕೋಟೆ, ಮನಿಯಾರ್ಡರ್ ಫಾರ್ಮು ಮುಂತಾದವುಗಳು ಕನ್ನಡದಲ್ಲಿರಬೇಕು. ಟೆಲಿಫೋನ್ ಡೈರಕ್ಟರಿಯೂ ಕನ್ನಡದಲ್ಲಿರಬೇಕು.

೧೬) ಸರ್ಕಾರಿ ಕಚೇರಿಗಳಲ್ಲಿ ಬಳಸುವ ರಬ್ಬರ್ ಸ್ಟ್ಯಾಂಪು ಮತ್ತು ಲೆಟರ್ ಹೆಡ್ ಮುಂತಾದವುಗಳು ಕನ್ನಡದಲ್ಲಿರಬೇಕು.

೧೭) ಎಲ್ಲ ಅಧಿಕಾರಿಗಳೂ ಸಾರ್ವಜನಿಕರ ಸಂಗಡ ಕನ್ನಡದಲ್ಲಿ ಮಾತನಾಡಬೇಕು ಮತ್ತು ಪತ್ರವ್ಯವಹಾರಗಳಲ್ಲಿ ಕನ್ನಡದಲ್ಲಿಯೇ ರುಜು ಮಾಡಬೇಕು.

೧೮) ಹಿಂದೆಲ್ಲಾ ಕನ್ನಡದಲ್ಲಿಯೇ ಆಡಳಿತ ವ್ಯವಹಾರ ನಡೆಸುತ್ತಿದ್ದು ಜನರಿಗೆ ಅನುಕೂಲವಾಗಿತ್ತು. ಈಗ ಇಂಗ್ಲೀಷ್ ವ್ಯವಹಾರ ಜಾರಿಗೆ ಬಂದು ಸರ್ಕಾರದ ಪ್ರತಿಯೊಂದು ವ್ಯವಹಾರದಲ್ಲಿಯೂ ಜನಸಾಮಾನ್ಯರು ಇಂಗ್ಲೀಷ್ ಬಲ್ಲವರ ಸಹಾಯವನ್ನು ಪಡೆಯಬೇಕಾಗಿದೆ. ಜನರ ಈ ಕಷ್ಟವನ್ನು ಹೋಗಲಾಡಿಸಲು ಒಂದೇ ಸಲ ರಾಜ್ಯ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಜಾರಿಗೆ ಬರಬೇಕು.

೧೯) ಗ್ರಾಮ ಪಂಚಾಯಿತಿ ತನಿಖೆ ಮತ್ತು ಲೆಕ್ಕ ಪರಿಶೀಲನಾ ವರದಿ (ಆಡಿಟ್ ರಿಪೋರ್ಟ್), ತಾಲ್ಲೋಕು ಬೋರ್ಡು, ಮುನಿಸಿಪಾಲಿಟಿ, ಕೊ-ಅಪರೇಟಿವ್ ಸೊಸೈಟಿ ಮತ್ತು ಶಾಲೆಗಳ ತನಿಖೆ ಮತ್ತು ಲೆಕ್ಕ ಪರಿಶೀಲನಾ ವರದಿಗಳು ಇಂಗ್ಲೀಷಿನಲ್ಲಿ ನಡೆಯುತ್ತಿವೆ. ಇನ್ನು ಮುಂದೆ ಅವು ಕನ್ನಡದಲ್ಲಿ ನಡೆಯಬೇಕು,

೨೦) ಕನ್ನಡವು ಶಿಕ್ಷಣದ ಎಲ್ಲ ಹಂತಗಳಲ್ಲೂ ಬೋಧ ಭಾಷೆಯಾಗಬೇಕು.

೨೧) ರಾಜ್ಯದ ಉನ್ನತ ಅಧಿಕಾರಿಗಳೂ ಹಾಗೂ ಲೋಕ ಸೇವಾ ಆಯೋಗದ ಸದಸ್ಯರುಗಳೂ ಕನ್ನಡ ಬಲ್ಲವರಿರಬೇಕು.

೨೨) ಲೋಕ ಸೇವಾ ಆಯೋಗದ ಅರ್ಜಿ ಫಾರ್ಮುಗಳೆಲ್ಲವೂ ಕನ್ನಡದಲ್ಲಿಯೇ ಇರಬೇಕು.

೨೩) ಬೆಂಗಳೂರು ಮತ್ತು ರಾಜ್ಯದಲ್ಲಿರುವ ಇತರ ಆಕಾಶವಾಣಿ ಕೇಂದ್ರಗಳಲ್ಲಿ ಕನ್ನಡ ಕಾರ್ಯಕ್ರಮಗಳಿಗೆ ಪ್ರಾಧಾನ್ಯತೆ ಇರಬೇಕು.

೨೪) ರಾಜ್ಯದಲ್ಲಿರುವ ಕೇಂದ್ರಾಡಳಿತಕ್ಕೊಳಪಟ್ಟ ಎಲ್ಲ ಸಂಸ್ಥೆಗಳು, ಕೈಗಾರಿಕಾ ಕೇಂದ್ರಗಳು, ಕಾರ್ಖಾನೆಗಳು, ಆಕಾಶವಾಣಿ, ರೈಲ್ವೆ, ಅಂಚೆ ಮತ್ತು ಇತರ ಇಲಾಖೆಗಳಲ್ಲಿ ಕನ್ನಡ ಬಲ್ಲವರಿಗೆ ತಕ್ಕ ಪ್ರಾತಿನಿಧ್ಯವಿರಬೇಕು.

೨೫) ಕೇಂದ್ರ ಹಾಗೂ ರಾಜ್ಯ ಮಟ್ಟದ ಎಲ್ಲ ಸರ್ಕಾರಿ ಕಚೇರಿಗಳಲ್ಲಿ ನಾಮಫಲಕಗಳು ಕನ್ನಡದಲ್ಲಿರಬೇಕು. ಕಚೇರಿಯ ಒಳಗಡೆ ಹುದ್ದೆಗಳನ್ನು ಸೂಚಿಸುವ ನಾಮಫಲಕಗಳೂ ಕನ್ನಡದಲ್ಲಿರಬೇಕು. ಖಾಸಗೀ ವ್ಯಾಪಾರ ಸಂಸ್ಥೆ, ಅಂಗಡಿಗಳು, ಶಾಲಾ ಕಾಲೇಜುಗಳಿಗೂ ಈ ನಿರ್ಬಂಧವನ್ನು ಹಾಕಬೇಕು.

೨೬) ಚಿತ್ರ ಮಂದಿರಗಳಲ್ಲಿ ಪ್ರದರ್ಶಿಸಲಾಗುವ ವಾರ್ತಾಚಿತ್ರಗಳು ಕನ್ನಡದಲ್ಲಿರಬೇಕು, ಸೆನ್ಸಾರ್ ಬೋರ್ಡಿನವರು ಕನ್ನಡ ಚಿತ್ರಗಳಿಗೆ ನೀಡುವ ಅರ್ಹತಾ ಪತ್ರವೂ ಕನ್ನಡದಲ್ಲಿರಬೇಕು.

(ಕನ್ನಡ ಭಾಷಾ ಸಮಿತಿ ಸರಕಾರಕ್ಕೆ ಸಲ್ಲಿಸಿದ ಅಂತಿಮ ವರದಿಯಿಂದ)

ಬೇರೆ ಬೇರೆ ರಾಜ್ಯಗಳಿಂದ ಬಂದು ಕರ್ನಾಟಕದಲ್ಲಿ ನೆಲೆಸಿರುವ ಜನಸಂಖ್ಯೆಯ ವಿವರ :

ನಂ.	ರಾಜ್ಯಗಳು	ಪ್ರಮಾಣ	ಗಂಡು	ಹೆಣ್ಣು
	ಒಟ್ಟು ಜನಸಂಖ್ಯೆ	೧೧,೬೭,೮೧೩	೫,೬೧,೮೬೭	೫,೯೫,೯೪೬
		(೧೦೦.೦೦)	(೧೦೦.೦೦)	(೧೦೦.೦೦)
೧.	ಆಂದ್ರ ಪ್ರದೇಶ	೩,೩೭,೭೨೦	೧,೪೩,೯೯೦	೧,೯೩,೭೩೦
		(೨೯.೧೭)	(೨೫.೭೩)	(೩೨.೫೦)
೨:	ಆಸಾಮು	೬೫೦.	೪೭೦	೧೮೦
		(೦.೦೬)	(೦.೮೦)	(೦.೦೩)
೩.	ಬಿಹಾರ	೨೮೪೫	೨೪೪೦	೭೦೫
		(೦.೨೫)	(೦.೩೮)	(೦.೧೩)
೪.	ಗುಜರಾತ	೮೪೬೦	೪೮೮೪೫	೩೬೧೫
		(೦.೭೪)	(೦.೮೬)	(೦.೬೧)
೫.	ಹರಿಯಾನ	೧೮೧೦	೧೪೭೫	೩೨೫
		(.೧೫)	(೦.೨೬)	(೦.೦೫)
೬.	ಹಿಮಾಚಲ ಪ್ರದೇಶ	೬೫೫	೫೦೦	೧೫೫
			(೦.೦೮)	(೦.೦೩)
೭.	ಜಮ್ಮು-ಕಾಶ್ಮಿರ	೦.೦೬		

ಸಂ.	ರಾಜ್ಯಗಳು	ಪ್ರಮಾಣ	ಗಂಡು	ಹೆಣ್ಣು
೮.	ಕೇರಳ	೧,೮೦,೭೬೪ (೧೫.೬೧)	೧,೦೫,೯೭೮ (೨೦.೬೫)	೬೪,೭೮೬ (೧೦.೮೭)
೯.	ಮಧ್ಯಪ್ರದೇಶ	೨೫೦೦ (೦.೨೧)	೧೩೧೫ (೦.೨೪)	೧೧೮೫ (೦.೩೦)
೧೦.	ಮಹಾರಾಷ್ಟ್ರ	೨,೨೦,೧೬೦ (೧೯.೦೨)	೭೩,೪೭೬ (೧೩.೦೮)	೧,೪೬,೬೮೫ (೨೪.೬೦)
೧೧.	ಮಣಿಪುರ	೧೦೦	೭೦	೩೦
೧೨.	ಮೇಘಾಲಯ	೧೦	೫	೫
೧೩.	ನಾಗಾಲ್ಯಾಂಡ	೪೫	೨೫	೩೦
೧೪.	ಒರಿಸ್ಸಾ	೭೩೫ (೦.೦೬)	೫೨೦ (೦.೦೯)	೨೧೫ (೦.೦೪)
೧೫.	ಪಂಜಾಬ	೪೫೭೫ (೦.೩೯)	೩೧೨೦ (೦.೫೬)	೧೪೫೫ (೦.೨೫)
೧೬.	ರಾಜಸ್ಥಾನ	೨೩,೪೬೫ (೨.೦೩)	೧೫,೩೫೦ (೨.೭೪)	೮,೧೧೫ (೧.೩೬)
೧೭.	ಸಿಕ್ಕಿಂ	೧೦	೧೦	—
೧೮.	ತಮಿಳನಾಡು	೩,೪೪,೯೫೪ (೨೯.೮೧)	೧,೮೨,೩೪೯ (೩೨.೪೬)	೧,೬೨,೬೦೫ (೨೭.೨೯)
೧೯.	ತ್ರಿಪುರಾ	೪೦	೩೦	೧೦
೨೦.	ಉತ್ತರಪ್ರದೇಶ	೮೯೧೦ (೦.೭೬)	೬೦೬೫ (೧೧.೦೮)	೨೮೪೫ (೦.೪೮)
೨೧.	ಪಶ್ಚಿಮಬಂಗಾಲ	೪೧೧೫ (೦.೩೬)	೨೫೦೦ (೦.೪೫)	೧೬೧೫ (೦.೨೭)
೨೨.	ಕೇಂದ್ರಾಡಳಿತ ಪ್ರದೇಶಗಳು	೧೪,೧೦೫ (೧.೨೨)	೬೮೫೫ (೧.೨೨)	೬೨೫೦ (೧.೨೨)

ಆಧಾರ: ಭಾರತ ಜನಗಣತಿ, ಮೈಸೂರು ೧೯೭೧ ಭಾಗ ii-ಡಿ.

ಆಡಳಿತದಲ್ಲಿ ಕನ್ನಡವೇ ಏಕೆ ಬೇಕು?

ಭಾರತ- ಇಂಗ್ಲಿಷ್

"ಯಾವ ವಿದೇಶೀ ಭಾಷೆಯೂ ಮಾತೃಭಾಷೆಯ ಸ್ಥಾನವನ್ನು ಪಡೆಯಲಾರದು ಸ್ವತಂತ್ರವಾದ ಆಲೋಚನಾ ಪದ್ಧತಿ, ಸಂಕೀರ್ಣವಾದ ಭಾವಗಳ ಸಹಜ ಹಾಗೂ ಖಚಿತವಾದ ಅಭಿವ್ಯಕ್ತಿ ಸಾಮರ್ಥ್ಯಗಳು ಮಾತೃಭಾಷೆಯಲ್ಲಿಯೇ ಬೆಳೆಯಲು ಸಾಧ್ಯ" ಇದು ಭಾರತೀಯ ಶಿಕ್ಷಣ ಮಾಧ್ಯಮದ ವಿಚಾರವಾಗಿ ವಿದೇಶೀಯನಾದ ಪ್ರೊಫೆಸರ್ ಎಚ್.ವೈ. ಲಾಂಗ್‌ಹಾರ್ನ್ ೧೯೨೭ ರಷ್ಟು ಹಿಂದೆಯೇ ಹೇಳಿದ ಮಾತು. ಮಹಾತ್ಮಾ ಗಾಂಧಿಯವರು "ಭಾರತೀಯ ಮಗು ತನ್ನ ತಂದೆಗೆ ಇಂಗ್ಲಿಷಿನಲ್ಲಿ ಪತ್ರ ಬರೆಯುವು ದನ್ನು ನೋಡಿದರೆ ನನ್ನ ಕಣ್ಣಿನಲ್ಲಿ ರಕ್ತಾಶ್ರುಗಳು ಸುರಿಯುತ್ತವೆ" ಎಂದು ಉಸು ರಿದರು.

ಕರ್ನಾಟಕದಲ್ಲಿ ಇದುವರೆಗೆ ದೊರೆತಿರುವ ಸುಮಾರು ಇಪ್ಪತ್ತೈದುಸಾವಿರ ಶಾಸನಗಳಲ್ಲಿ ಶೇಕಡಾ ಎಂಬತ್ತಕಿಂತ ಹೆಚ್ಚು ಶಾಸನಗಳು ಕನ್ನಡ ಲಿಪಿ ಹಾಗೂ ಭಾಷೆ ಯಲ್ಲಿ ಇವೆ. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಈವರೆಗೆ ದೊರೆತಿರುವ ಸುಮಾರು ೫೩೫೦ ಶಾಸನಗಳಲ್ಲಿ ೨೫೦೦ ಶಾಸನಗಳು ಕನ್ನಡದಲ್ಲಿವೆ. ಉಳಿದವು ಕನ್ನಡ ಅರಸರ ಅಧೀನ ಪ್ರದೇಶಗಳ ಪ್ರಜೆಗಳ ಭಾಷೆಗಳಾದ ತಮಿಳು, ತೆಲುಗಿನಲ್ಲಿವೆ. ಕೆಲವೇ ಕೆಲವು ಸಂಸ್ಕೃತ ಹಾಗೂ ಪ್ರಾಕೃತದಲ್ಲಿವೆ. ಈ ಶಾಸನಗಳಲ್ಲಿ ಬರುವ ಆಡು ಮಾತಿಗೆ ಸಮೀಪವಿರುವ ಕನ್ನಡ ಭಾಷೆ, ವಿವಿಧ ಮಟ್ಟದ ಅಧಿಕಾರ ಸ್ಥಾನಗಳ ಹೆಸರು ಗಳು, ಭೂಮಿ, ತೆರಿಗೆ, ನಾಣ್ಯ, ವಾಣಿಜ್ಯ, ದತ್ತಿ, ಜಲಾಶಯ, ಧರ್ಮಶಾಲೆ, ದೇವಾಲಯ. ಅಪರಾಧ, ಶಿಕ್ಷೆ, ಅನುಗ್ರಹ ಇತ್ಯಾದಿ ವ್ಯವಸ್ಥೆಗಳಿಗೆ ಸಂಬಂಧಿಸಿದ ವಿಧಿ-ನಿಷೇಧ ಸೂಚಿಸುವ ಪಾದಸಮೂಹಗಳನ್ನು ನಮ್ಮ ಕಚೇರಿಯ ಜನ ಅರಿತಾಗ ಆಡಳಿತ ಭಾಷೆಯಾಗಲು ಕನ್ನಡಕ್ಕಿರುವ ಸಾಮರ್ಥ್ಯದ ಕಲ್ಪನೆ ಬರುತ್ತದೆ.

ರಾಜಾಜ್ಞೆಯ ಮಾದರಿಗಳು

ಈವರೆಗೆ ದೊರೆತಿರುವ ಅತ್ಯಂತ ಪ್ರಾಚೀನ ಕನ್ನಡ ಶಿಲಾಶಾಸನವೆಂದರೆ ಹಲ್ಮಿಡಿಯ ಶಾಸನ (ಕ್ರಿ.ಶ. ೪೫೦). ಕದಂಬ ವಂಶದ ಕಾಕುತ್ಸವರ್ಮ ಮಾಡಿದ ರಾಜಾಜ್ಞೆ ಇದರಲ್ಲಿದೆ. ಇದು ಹಳಗನ್ನಡ ಅಲ್ಲ; ಪೂರ್ವದ ಹಳಗನ್ನಡ.

"ನಮಃ ಶ್ರೀಮತ್......ಕದಂಬ ಪನ್........ಕಕುಸ್ಥ ಭಟೋರನ್
ಆಳೆ..........ಎಲ್ಲ ಭಟಾರಿಯಾ.......ಸುತನ್ಗೆ.......ವಿಜ ವರಸನ್ಗೆ

'ಬಾಳ್ಗಳ್ಚ' ಪಲ್ಮಿಡಿಉಂ ಮೂಣೆಳ್ಳಿಉಂ ಕೊಟ್ಟಾರ್.........
(ಕಾಕುಸ್ಥ ಭಟ್ಟಾರಕನು ಆಳುತ್ತಿರಲು ಎಲ್ಲ ಭಟಾರಿಯ ಮಗನಾದ
ವಿಜ ಅರಸನಿಗೆ ಹಲ್ಮಿಡಿ ಹಾಗೂ ಮೂಳಿವಳ್ಳಿ ಗ್ರಾಮಗಳನ್ನು......
ವಿಜಯದ ಕಾಣಿಕೆಯಾಗಿ—ಖಡ್ಗ ತೊಳೆಯುವ ಕೊಡುಗೆಯಾಗಿ—
ಕೊಟ್ಟರು.)

ರಾಜಾಜ್ಞೆಗಳಲ್ಲಿ ಕನ್ನಡವನ್ನು ಆರಂಭಿಸಿದ ಅರಸರಲ್ಲಿ ಕದಂಬರೇ ಮೊದಲಿಗರೆಂದು ತೋರುತ್ತದೆ. ಸಾವಿರದ ಐದುನೂರು ವರ್ಷಗಳ ಹಿಂದೆಯೇ ಕನ್ನಡದ ಬೆಳವಣಿಗೆ ಈ ಮಟ್ಟದ್ದಿತ್ತು.

ಆ ಮುಂದಿನ ಶತಮಾನಗಳಲ್ಲಿ ಬಾದಾಮಿ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಕನ್ನಡದ ಬಳಕೆ ಹೆಚ್ಚುತ್ತ ಹೋದುದು ಕಂಡು ಬರುತ್ತದೆ."ವಿಜಯಾದಿತ್ಯ ಸತ್ಯಾಶ್ರಯ......ವರ್ಧಮಾನಂ ಸಲೆ" ವಿಜಯರಾಜ್ಯೋದಯ ಮಾಚಂದ್ರಾರ್ತ್ರರ್ಕ್ಕಂ ಸಲುತ್ತುಮಿರೆ"; "ಅಕ್ಕಾದೇವಿಯರ್ ಕಿಸುನಾಡಪಟ್ಟಮಂ ಸುಖ ಸುಕಥಾವಿನೋದದಿಂ ಆಳುತ್ತಿರೆ" ಹೀಗೆ ಶಾಸನಗಳು ಪ್ರಾರಂಭವಾಗಿ ರಾಜಾಜ್ಞೆಗಳನ್ನು ನಿರೂಪಿಸುತ್ತ ಹೋಗುತ್ತವೆ.

ರಾಷ್ಟ್ರಕೂಟ ಕನ್ನರದೇವನ ಅನಂತರ ಚಾಲುಕ್ಯ ಆಹವಮಲ್ಲ ಗೆದ್ದು ಕೊಂಡ ಬಾಳ್ಗುಳಿ ಪ್ರದೇಶದ ವರ್ತಕರು, ಗೆದ್ದ ರಾಜನಿಗೆ ಮೊದಲಿನಂತೆ ತೆರಿಗೆ ರಿಯಾಯತಿಯನ್ನು ಮುಂದುವರೆಸಲು ಕೇಳಿಕೊಳ್ಳುತ್ತಾರೆ. ವಿಜೇತರಾದ ಅರಸು ಹಿಂದಿನ ಅರಸನು ನೀಡಿದ ಸೌಲಭ್ಯಗಳನ್ನು ಮುಂದುವರಿಸುವಂತೆ ಮಾಡಿದ ಆದೇಶವನ್ನು ಒಳಗೊಂಡ ಈ ಶಾಸನವನ್ನು ನೋಡಿ.

"ಕನ್ನರದೇವನ ಮರ್ಯಾದೆಯಲಾದ ಸುಂಕದ ಮರ್ಯಾದೆಯಂ
ತಪ್ಪದೆ ನಡೆಯಿಂ."

ಆ ಕಾಲದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ದೇವಾಲಯಗಳ ವ್ಯವಸ್ಥೆಗಾಗಿ ಮತ್ತು ಪ್ರವಾಸಿಗರ ಅನುಕೂಲ ಮುಂತಾದ ಸಾರ್ವಜನಿಕ ಉಪಯೋಗದ ಕಾರ್ಯಗಳಿಗಾಗಿ ದಾನದತ್ತಿಗಳನ್ನು ಬಿಟ್ಟಿದ್ದನ್ನು ಆ ಪ್ರದೇಶದ ಅಧಿಕಾರಿಗಳೂ, ಜನರೂ ನಡೆಸಿಕೊಂಡು ಬರುವಂತೆ ರಾಜಾಜ್ಞೆಗಳಾಗುತ್ತಿದ್ದವು. ಪ್ರವಾಸಿಗರ ಊಟಕ್ಕಾಗಿ ಛತ್ರಕ್ಕೆ ಕೊಟ್ಟ ದತ್ತಿಯ ಈ ಶಾಸನದ ಭಾಷೆಯನ್ನು ಗಮನಿಸಬಹುದು. (ಕ್ರಿ.ಶ. ೧೦೫೪) :

"ಆ ವೃದ್ಧಿಯಲು ಎಣ್ಬರ್ ಪ್ರವಾಸಿಗರುಣ್ಬ ಸತ್ರಕ್ಕೆ ಕೊಟ್ಟ......
ಗದ್ಯಾಣಮೆರಡು, ಇಂತೀ ಧರ್ಮಮನೂರೊಡೆಯನುಂ ಉರುಂ
ನಡೆಯಿಸುವರ್."

ದತ್ತಿಯಾಗಿ ಕೊಟ್ಟ ಹಣದ ಬಡ್ಡಿಯಲ್ಲಿ (ವೃದ್ಧಿಯಲು) ಎರಡುಗದ್ಯಾಣ (ನಾಣ್ಯ) ಪ್ರವಾಸಿಗರ ಊಟಕ್ಕೆ ಮೀಸಲು—ಇದನ್ನು ಗೌಡ ಹಾಗೂ ಊರ ಜನರು ನಡೆಸಬೇಕೆಂಬುದು ಶಾಸನ.

ವಿದೇಶಿಯರು ಮತ್ತು ಕನ್ನಡ

ಕನ್ನಡ ಭಾಷೆಗೆ ಪಾಶ್ಚಾತ್ಯ ಸಂಪರ್ಕ ಕ್ರಿ. ಶ. ದ. ಆರಂಭದಿಂದಲೇ ಬಂತು. ಅರಬರ, ಪೋರ್ಚುಗೀಸರ ಹಾಗೂ ಇಂಗ್ಲಿಷರ ಸಂಪರ್ಕ ಹೆಚ್ಚುತ್ತ ಬಂದಂತೆ ಆಯಾ ಭಾಷೆಯ ಶಬ್ದಗಳ ವಿನಿಮಯವಾಗುತ್ತ ನಡೆದುದನ್ನು ಕಾಣಬಹುದು. ಅನಾನಸು, ಕಂದೀಲು, ಚಾವಿ, ಜುಗಾರು, ಪರಾಲ್, ಪಿಂಗಾಣಿ, ಮೇಜು, ಪೇರಲ, ಲಿಂಬೆ ಇತ್ಯಾದಿ ಪೋರ್ಚುಗೀಜ ಶಬ್ದಗಳು ಕನ್ನಡದಲ್ಲಿ ಸೇರಿದಂತೆ ಕನ್ನಡದ ಬಟಗಡಲೆ, ಬಡವ, ಕಾಲುದಾರಿ, ಕಾರೆಳ್ಳುಗಳು ಪೋರ್ಚುಗೀಜ ಶಬ್ದಕೋಶದಲ್ಲಿ ಸೇರಿದವು.

ವ್ಯವಸ್ಥಿತವಾಗಿ ಕನ್ನಡವನ್ನು ಕಲಿಯಲಾರಂಭಿಸಿದ ವಿದೇಶೀ ಪಾದ್ರಿಗಳು ಕನ್ನಡವನ್ನು ಬರೆಯಲಾರಂಭಿಸಿದರು. ಮತಪ್ರಚಾರ ಹಾಗೂ ವ್ಯಾಪಾರಕ್ಕಾಗಿ ಬಂದ ಈ ಜನರಿಗೆ ಇಲ್ಲಿ ಆಗ ಜನರ ಆಡುಮಾತು ಹಾಗೂ ಆಡಳಿತ ಭಾಷೆಯಾಗಿದ್ದ ಕನ್ನಡವನ್ನು ಕಲಿಯುವುದು ಅಗತ್ಯವಾಯಿತು.

೧೮೧೦ ರಿಂದ ೧೮೪೦ ರ ಅವಧಿಯನ್ನು ಪಾಶ್ಚಾತ್ಯರು ಕನ್ನಡದ ಅಧ್ಯಯನ, ಪುಸ್ತಕ ಪ್ರಕಟನೆಗೆ ಅಣಿಮಾಡಿಕೊಂಡ ಕಾಲವೆನ್ನಬಹುದು. ಮತಪ್ರಚಾರಕ್ಕೆ ಅನುಕೂಲವಾಗುವದೆಂಬ ಕಾರಣದಿಂದಲಾದರೂ ಕನ್ನಡದ ಪ್ರಾಚೀನ ಗ್ರಂಥಗಳ ಸಂಶೋಧನೆ, ಸಂಪಾದನೆ, ಪ್ರಕಟನಾಕಾರ್ಯಗಳನ್ನು ಪಾಶ್ಚಾತ್ಯರು ಮಾಡಿದರು. ಕನ್ನಡ ವ್ಯಾಕರಣ, ಛಂದಸ್ಸುಗಳ ಅಧ್ಯಯನ ನಡೆಸಿದರು. ಮುದ್ರಾಣಾಲಯಗಳು ಸ್ಥಾಪಿತವಾದುವು, ನಿಘಂಟುಗಳು ಪ್ರಕಟವಾದುವು. ೧೮೧೦ ರಿಂದ ೧೯೦೦ ರ ಅವಧಿಯ ತೊಂಬತ್ತು ವರ್ಷಗಳಲ್ಲಿ ೧೫೦೦ಕ್ಕೂ ಹೆಚ್ಚು ಪುಸ್ತಕಗಳೂ, ೮೦ ಪತ್ರಿಕೆಗಳೂ ಹೊರಬಂದುವು. ಕನ್ನಡ ಭಾಷೆಯ ವ್ಯವಸ್ಥಿತವಾದ ಅಧ್ಯಯನಕ್ಕೆ ಅನುಕೂಲವಾಗುವಂಥ ಲೇಖನಗಳು ಕರ್ನಾಟಕದ ಗಡಿ, ಶಿಲ್ಪ, ಸಾಹಿತ್ಯ ಸಂಸ್ಕೃತಿಗಳ ಹಾಗೂ ರಾಜಕೀಯ ಇತಿಹಾಸ ಬರೆಯಲು ಬೇಕಾಗುವ ಮೂಲ ಸಾಮಗ್ರಿಯನ್ನೊದಗಿಸುವ ನೂರಾರು ಸಂಶೋಧನಾತ್ಮಕ ಲೇಖನಗಳು ಪಾಶ್ಚಾತ್ಯ ವಿದ್ವಾಂಸರ ಮೌಲಿಕ ದೇಣಿಗೆಗಳಾಗಿವೆ. ಕನ್ನಡಕ್ಕೆ ಇಂಥ ಅಮೋಘ ಸೇವೆಯನ್ನು ಸಲ್ಲಿಸಿದವರಲ್ಲಿ ಪ್ರಮುಖರಾದ ಕಾಲ್ಡ್‌ವೆಲ್, ಮೆಕೆನ್ಜಿ, ಬುಕಾನನ್, ಬೂಹ್ಲರ್, ಬಿ.ಎಲ್. ರೈಸ್, ಫ್ಲೀಟ್, ಮೊಗ್ಲಿಂಗ್, ಕಿಟೆಲ್, ಗೆರೆಟ್ ಮೊದಲಾದ ಮಹನೀಯರನ್ನು ಇಲ್ಲಿ ಸ್ಮರಿಸಬೇಕು.

ಬ್ರಿಟಿಷ್ ಅಧಿಕಾರಿಗಳು ಮತ್ತು ಕನ್ನಡ

೧೮೮೧ ರ ಹೊತ್ತಿಗೆ ಎಲ್ಲೆಲ್ಲಿಯೂ ಇಂಗ್ಲಿಷ್ ಶಾಲೆಗಳಾಗಿ ಹೊಸ ರೀತಿಯ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಾಯಿತಾದರೂ ಅನೇಕ ಬ್ರಿಟಿಷ್ ಅಧಿಕಾರಿಗಳು ಆಡಳಿತದಲ್ಲಿ ಕನ್ನಡ ಬಳಕೆಯ ಮಹತ್ವವನ್ನಾಗಲೀ, ಅವಶ್ಯಕತೆಯನ್ನಾಗಲೀ ಮರೆತಿರಲಿಲ್ಲವೆಂಬುದು ಗಮನಾರ್ಹವಾಗಿದೆ. ಅವರು ಆಡಳಿತ ಸೌಲಭ್ಯಕ್ಕಾಗಿ ಕನ್ನಡವನ್ನು ಕಲಿತರಾದರೂ, ಬೇಕಾಗುವುದಕ್ಕಿಂತ ಹೆಚ್ಚು ಕನ್ನಡ ಕಲಿತು, ಸಂಶೋಧನೆಯ ಕೃತಿರಚನೆಗಳಲ್ಲಿ ತೊಡಗಿದ್ದರು. ಕಾಲಿನ್ ಮೆಕೆನ್ಜಿ ಪ್ರದೇಶವೀಕ್ಷಣೆ (ಸರ್ವೇ) ಅಧಿಕಾರಿಯಾಗಿ ಕರ್ನಾಟಕಕ್ಕೆ ಬಂದನಾದರೂ ೧೮೦೭ರಲ್ಲಿ ಆ ಕೆಲಸ ಮುಗಿದಾಗ ಕರ್ನಾಟಕದಲ್ಲಿ ೪೦,೦೦೦ ಮೈಲಿ ಸಂಚರಿಸಿ, ೧೭೦೦ ಶಿಲಾಶಾಸನಗಳ ಪ್ರತಿಗಳನ್ನೂ, ೬೦೦ ಹಸ್ತಪ್ರತಿಗಳನ್ನೂ ದೊರಕಿಸಿ, ಅವುಗಳ ಸೂಚಿಪಟ್ಟಿಯನ್ನೂ, ಟಿಪ್ಪಣಿಗಳನ್ನೂ ಸರಕಾರಕ್ಕೆ ಒಪ್ಪಿಸಿದನು. ವೃತ್ತಿಯಲ್ಲಿ ಡಾಕ್ಟರನಾಗಿದ್ದು, ಕೃಷಿ ಪದ್ಧತಿಯ ಬಗ್ಗೆ ವರದಿಮಾಡಲು ಬಂದ ಬುಕಾನಿನ್ ಇತಿಹಾಸ ಬರೆದ. ಮೈಸೂರಿನ ರೆಸಿಡೆಂಟನಾಗಿ (೧೮೦೫–೧೮೦೮) ಬಂದ ವಿಲ್ಕ್ಸ್ ಮೈಸೂರಿನ ಇತಿಹಾಸವನ್ನೇ ಬರೆದ. ದಕ್ಷಿಣ ಕನ್ನಡ ಜಿಲ್ಲೆಗೆ ಸಬ್‌ಕಲೆಕ್ಟರ್ ಆಗಿ ಬಂದ, ಜಾನ್ ಮೆಕ್ಕರಲ್ (೧೮೦೬–೧೮೧೧) ಕನ್ನಡ ಕಲಿತು ಮುಂದೆ ಮದ್ರಾಸ್ ಸರಕಾರದಲ್ಲಿ ಕನ್ನಡ ಭಾಷಾಂತರಕಾರನಾದ, ಕನ್ನಡ ವ್ಯಾಕರಣವನ್ನು ತಯಾರಿಸಿದ. ವಾಲ್ಟರ್ ಎಲಿಯಟ್ ಸೈನಿಕನಾಗಿ ಸೇರಿ ೧೮೨೪ ರಲ್ಲಿ ಕಿತ್ತೂರರಾಣಿ ಚೆನ್ನಮ್ಮನಿಂದ ಸೆರೆ ಹಿಡಿಯಲ್ಪಟ್ಟು, ಬಿಡುಗಡೆಯಾದ ಮೇಲೆ, ಶೈಕ್ಷಣಿಕ ಪಠ್ಯಪುಸ್ತಕಗಳ ಪ್ರಕಟನೆ, ಶಾಸನ ಸಂಗ್ರಹ, ಇತಿಹಾಸ ಲೇಖನಗಳ ಬರಹ ಇವುಗಳಲ್ಲಿ ತೊಡಗಿದ.

ಪ್ರಥಮ ಕನ್ನಡ ಶಾಲೆ

ವಾಲ್ಟರ್ ಎಲಿಯಟ್ ಉತ್ತರ ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಬೇಕೆಂದೂ, ಅದೇ ಶಿಕ್ಷಣ ಮಾಧ್ಯಮವಾಗಬೇಕೆಂದೂ ಸರ್ಕಾರಕ್ಕೆ ಸೂಚಿಸಿದ ಮೊದಲ ಬ್ರಿಟಿಷ್ ಅಧಿಕಾರಿಯಾಗಿದ್ದ. ಧಾರವಾಡದಲ್ಲಿ ಪ್ರಥಮ ಕನ್ನಡ ಶಾಲೆಯನ್ನು ಆರಂಭಿಸಿ ತನ್ನ ಕೈಯಿಂದ ಸಂಬಳಕೊಟ್ಟು ಹಲವಾರು ವರ್ಷ ನಡೆಸಿದ. ಮುಂಬಯಿ ಕರ್ನಾಟಕದಲ್ಲಿ ಅನೇಕ ಕಡೆ ಕನ್ನಡ ಶಾಲೆಗಳು ಬರುವಂತೆ ಮಾಡಿದ ಕೀರ್ತಿ ಈತನದು.

ಅನೇಕ ಬ್ರಿಟೀಷ್ ಅಧಿಕಾರಿಗಳು ದೇಶೀಯ ಪಂಡಿತರಿಂದ ಗ್ರಂಥಗಳನ್ನು, ಪಠ್ಯಪುಸ್ತಕಗನ್ನು ಬರೆಸಿದರು.

ಗೆಜೆಟಿಯರ ಖ್ಯಾತಿಯ ಬಿ. ಎಲ್. ರೈಸ್ ೧೮೩೭ ರಲ್ಲಿ ಬೆಂಗಳೂರಿನಲ್ಲಿಯೇ ಹುಟ್ಟಿ, ಇಂಗ್ಲೆಂಡಿನಲ್ಲಿ ಅಧ್ಯಯನ ಮಾಡಿ, ೧೮೬೦ ರಲ್ಲಿ ಮತ್ತೆ ಬೆಂಗಳೂರಿಗೆ ಸೆಂಟ್ರಲ್ ಹೈಸ್ಕೂಲ್ ಮುಖ್ಯಾಧ್ಯಾಪಕನಾಗಿ ಬಂದ. ಕನ್ನಡ ಹೈಯರ್ ಸೆಕಂಡರಿ ಪರೀಕ್ಷೆ ಪಾಸಾದನಂತರ ಕನ್ನಡ ನಿಷ್ಠೆ ಬೆಳೆಯಿತು, ಶಾಲಾ ಇನ್ಸ್‌ಪೆಕ್ಟರ್ ಆಗಿ ಜನಗಣತಿಯ ಅಧಿಕಾರಿಯಾಗಿ, ಪುರಾತತ್ವ ಇಲಾಖೆಯ ಮುಖ್ಯಾಧಿಕಾರಿಯಾಗಿ ರೈಸ್ ಮಾಡಿದ ಸೇವೆ, ರಚಿಸಿದ ಗ್ರಂಥಗಳು ಬಹು ಮಹತ್ವಪೂರ್ಣವಾದುವು. ಗೆಜೆಟಿಯರುಗಳ ೧೨ ಸಂಪುಟಗಳು, ಕೆಲವು ಗ್ರಂಥಗಳ ಸಂಪಾದನೆ—ಪ್ರಕಟನೆಗಳಿಗೆ ಕಾರಣವಾದ "ಬಿಬ್ಲಿಯೋಥಿಕ ಕರ್ನಾಟಕ" ಗ್ರಂಥಮಾಲೆ ಈತನ ಮಹಾಸಾಧನೆಗಳು

ಇಂಗ್ಲೆಂಡಿನಲ್ಲಿ ಕನ್ನಡ

ಬಿ. ಎಲ್. ರೈಸ್ ನಿವೃತ್ತರಾಗಿ ಇಂಗ್ಲೆಂಡಿನಲ್ಲಿ ನೆಲಸಿದನಂತರ ಅಲ್ಲಿಗೆ ಹೋಗಿದ್ದ ಮೈಸೂರಿನ ಎಸ್. ಜಿ. ಶಾಸ್ತ್ರಿಯೆಂಬವರು ಅವರನ್ನು ಕಾಣಲು ಅವರ ಮನೆಗೆ ಹೋದರಂತೆ. ಇವರು ಮೈಸೂರಿನವರೆಂದು ತಿಳಿದಕೂಡಲೆ ರೈಸ್ ಅವರು "ಆಹಾ ! ಕನ್ನಡ ಎಷ್ಟು ಚೆಂದ ! ಎಷ್ಟು ಮಧುರ ! ಬನ್ನಿ ಕನ್ನಡದಲ್ಲಿಯೇ ಮಾತನಾಡುವಾ" ಎಂದರಂತೆ. ಕರ್ನಾಟಕದಲ್ಲಿದ್ದೇ ಕನ್ನಡಿಗರೊಂದಿಗೆ ಇಂಗ್ಲಿಷ್ ಮಾತನಾಡುವ ಚಪಲ ತೋರಿಸುವ ಕನ್ನಡಿಗರು ಇದನ್ನು ಗಮನಿಸಬೇಕು.

ಕನ್ನಡಕ್ಕೆ ಅಮೋಘ ಕಾಣಿಕೆ ಸಲ್ಲಿಸಿದ ಅಧಿಕಾರಿಗಳಲ್ಲಿ ಇನ್ನೊಂದು ದೊಡ್ಡ ಹೆಸರು ಜಾನ್.ಎಫ್.ಫ್ಲೀಟ್. ಈತ ಐ.ಸಿ.ಎಸ್. ಅಧಿಕಾರಿ. ಇಂಗ್ಲೆಂಡಿನಲ್ಲಿಯೇ ಸಂಸ್ಕೃತ ಕಲಿತು, ಮುಂಬಯಿ ಸರಕಾರದಲ್ಲಿ ರೆವಿನ್ಯೂ ಅಧಿಕಾರಿಯಾಗಿ ೧೮೬೭ರಲ್ಲಿ ಬಂದ. ಅಸಿಸ್ಟೆಂಟ್ ಕಲೆಕ್ಟರ್ ಆಗಿ, ಮ್ಯಾಜಿಸ್ಟ್ರೇಟನಾಗಿ, ಕೊಲ್ಲಾಪುರದ ರಾಜಕೀಯ ಅಧಿಕಾರಿಯಾಗಿ, ಉತ್ತರ ಕರ್ನಾಟಕದ ಶಿಕ್ಷಣಾಧಿಕಾರಿಯಾಗಿ, ಕಸ್ಟಮ್ಸ್ ಕಲೆಕ್ಟರ್ ಆಗಿ, ಸರಕಾರೀ ಶಾಸನತಜ್ಞನಾಗಿ ಸೇವೆಸಲ್ಲಿಸುವಾಗ ನಿರಂತರವಾಗಿ ಕರ್ನಾಟಕದ ಶಿಲಾಶಾಸನಗಳ ಶೋಧನೆ, ಅದ್ಯಯನ, ಲೇಖನ ಪ್ರಕಟನೆ ಇವುಗಳನ್ನು ಮಾಡುತ್ತಲೇ ಇದ್ದ. ೧೦೦೦ ಶಾಸನಗಳ ಪರಿಶೀಲನೆಯನ್ನು ಮಾಡಿ "ಇಂಡಿಯನ್ ಆಂಟಿಕ್ವೇರಿ" ಹಾಗೂ "ಎಫಿಗ್ರಾಫಿಯ ಇಂಡಿಕ" ಮೂಲಕ ಲೇಖನಗಳನ್ನು ಪ್ರಕಟಿಸಿದ.

ಕರ್ನಾಟಕವೆಂದರೆ "ಸದರ್ನ್ ಮರಾಠಾ ಕಂಟ್ರಿ" ಅಲ್ಲ. ಇದೊಂದು ಪ್ರತ್ಯೇಕ ಅಸ್ತಿತ್ವವುಳ್ಳ ನಾಡು ಎಂದು ಪ್ರತಿಪಾದಿಸಿ, ೧೮೮೨ರಲ್ಲಿ ಪುಸ್ತಕ ಪ್ರಕಟಿಸಿದ ಕೀರ್ತಿ ಫ್ಲೀಟನದು. ಅನೇಕ ಜಾನಪದ ಹಾಡು ಲಾವಣಿಗಳನ್ನು ಫ್ಲೀಟ್ ಸಂಪಾದಿಸಿ

ಪ್ರಕಟಿಸಿದ. ೧೮೯೭ರಲ್ಲಿ ನಿವೃತ್ತಿಹೊಂದಿದ ಫ್ಲೀಟ್ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಸದಸ್ಯನೂ ಆಗಿದ್ದ. ಇದೇ ಸಂಘಕ್ಕೆ ಈ ಮುಂಚೆ ವಿದೇಶಿಯನಾದರೂ ಕನ್ನಡಕ್ಕಾಗಿ ದುಡಿದ ರೆ. ರಿಘಿಗ್ಲರ್ ಅಧ್ಯಕ್ಷನಾಗಿದ್ದನೆನ್ನುವದನ್ನು ಇಲ್ಲಿ ಸ್ಮರಿಸಹುದು.

ಶೈಕ್ಷಣಿಕ ಆಡಳಿತಗಾರರು—ಕನ್ನಡ

೧೮೫೦ರಿಂದ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ವಿದ್ಯಾ ಇಲಾಖೆಯ ಅಧಿಕಾರಿಗಳಾಗಿದ್ದ ರೈಸ್ ; ಮಾರ್ಸ್‌ಡೆನ್, ಕ್ಯಾಂಬೆಲ್, ರಸೆಲ್, ಮೊದಲಾದವರು ಆಯಾ ಭಾಗದ ದೇಶೀಯ ಪಂಡಿತರಿಂದ ಕನ್ನಡ, ಗಣಿತ, ಚರಿತ್ರೆ, ಭೂಗೋಳ ಇತ್ಯಾದಿ ಪಠ್ಯಪುಸ್ತಕಗಳನ್ನು ಬರೆಸಿದರು. ವಿದ್ಯಾ ಇಲಾಖೆಯ ಆಡಳಿತದಲ್ಲಿ ಕನ್ನಡವನ್ನು ಪ್ರಧಾನವಾಗಿ ಬಳಕೆಗೆ ತಂದ ಕೀರ್ತಿ ವಿಲಿಯಮ್ ಎ. ರಸೆಲ್‌ಗೆ ಸೇರುತ್ತದೆ (೧೮೩೦-೬೨). ಉತ್ತರ ಕರ್ನಾಟದಲ್ಲಿ ಕನ್ನಡದ ಪ್ರತಿಷ್ಠಾಪನೆ ಈತನ ಕಾಲದಲ್ಲಿ ಆಯಿತೆಂದು ಹೇಳಬೇಕು. ೧೮೬೦ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿಗೆ ಪ್ರಿನ್ಸಿಪಾಲ್ ಆಗಿ ಬಂದ ರಸೆಲ್ ೧೮೬೨ರಲ್ಲಿ ಮಧ್ಯಭಾಗಕ್ಕೆ, ೧೮೬೫ರಲ್ಲಿ ದಕ್ಷಿಣ ಭಾಗಕ್ಕೆ ಎಜುಕೇಶನ್ ಇನ್ಸ್‌ಪೆಕ್ಟರ್ ಆಗಿ ಬಂದ. ಬೆಳಗಾವಿಯ ನಾರ್ಮಲ್ ಸ್ಕೂಲ್ ಇವರ ಕಾಲಕ್ಕೆ ಟ್ರೇನಿಂಗ್ ಕಾಲೇಜ್ ಆಯಿತು. ಅಲ್ಲಿ ಕನ್ನಡ ಕಲಿಯಲು ಸಮರ್ಥ ಶಿಕ್ಷಕರನ್ನು ನೇಮಿಸಿದ. ಕೂಡಲೇ ಕನ್ನಡದ ಸ್ಥಾನಮಾನ ಹೆಚ್ಚಿತು. ಕನ್ನಡ ಬಾರದ ಶಿಕ್ಷಕರು ಕನ್ನಡ ಕಲಿಯಬೇಕಾಯಿತು. ಮರಾಠಿ ಶಿಕ್ಷಕರಿಗೆ ಕನ್ನಡ ಕಲಿಯಲು ಒತ್ತಾಯ ಮಾಡಿದ. ೧೦೦೦ ರೂಪಾಯಿ ಸ್ವತಃ ಕೊಟ್ಟು ಅದರ ಬಡ್ಡಿಯಲ್ಲಿ ಪ್ರತಿವರ್ಷ ಕನ್ನಡವನ್ನು ಹೆಚ್ಚು ಪರಿಶ್ರಮಪಟ್ಟು ಕಲಿತವರಿಗೆ ಬಹುಮಾನ ಕೊಡುವ ವ್ಯವಸ್ಥೆ ಮಾಡಿದ. ಆಗ ಕನ್ನಡ ಪಠ್ಯಪುಸ್ತಕಗಳ ಸಂಖ್ಯೆ, ಕನ್ನಡ ಶಾಲೆಗಳ ಸಂಖ್ಯೆ ಅಧಿಕಗೊಂಡಿತು.

ರಸೆಲ್ ತನ್ನ ಇಲಾಖೆಯ ಆಡಳಿತ ವ್ಯವಹಾರದ ಭಾಷೆಯಾಗಿ ಕನ್ನಡವನ್ನೇ ಬಳಸಲಾರಂಭಿಸಿದ. ಈತನು ಪ್ರಾರಂಭಿಸಿದ 'ಶಾಲಾಪತ್ರಿಕೆ' ಅವರ ಇಲಾಖೆಯ ಮುಖಪತ್ರವಾಗಿತ್ತು. ಇದರಲ್ಲಿ ಸರಕಾರೀ ಆಜ್ಞೆಗಳೆಲ್ಲ ಕನ್ನಡದಲ್ಲಿ ಹೊರಡುತ್ತಿದ್ದವು. ಹೊಸಗನ್ನಡ ಆಡಳಿತ ಭಾಷೆಯಾಗಿ ರೂಪುಗೊಳ್ಳುತ್ತಿರುವುದನ್ನು ಈ ಪತ್ರಿಕೆಯ ಸಂಚಿಕೆಗಳಲ್ಲಿ ನೋಡಬಹುದು.

ಉದಾ: "ಧಾರವಾಡ ಜಿಲ್ಲೆದೊಳಗಿನ ಯಾವತ್ತೂ ಶಾಲಾಮಾಸ್ತರರಿಗೆ ಕಸಬಾ ಹಾನಗಲ್ ಶಾಲೆಯೊಳಗಿನ ಮೊದಲನೇ ಮದತ್‌ನೀಸ್ ಸಿದ್ದಪ್ಪಾಬಿನ ಕರಲಿಂಗಪ್ಪಾಯವರು ಬಗರ್ ಹುಕುಮಿನಿಂದ ಕೆಲಸವನ್ನು ಬಿಟ್ಟು ಹೊರಟುಹೋದ ತಪ್ಪಿನ

ದಸಿಯಿಂದ ಅವರಿಗೆ ೨೦ ರೂಪಾಯಿ ದಂಡ ಮಾಡೋದರಲ್ಲಿ ಬಂದಿರುತ್ತದೆ. ಇದನ್ನು ನೆನಪಿನಲ್ಲಿಟ್ಟು ಜಿಲ್ಲಾ ಮಜಕೂರದೊಳಗಿನ ಯಾವತ್ತೂ ಪಂತರುಗಳು, ಮದತ್‌ನೀಸ್ ಮೊದಲಾದವರು ಇತ್ತಲಾಗಿನ ಅಪ್ಪಣೆಯ ಹೊರ್ತು ಕೆಲಸ ಬಿಟ್ಟು ಹೋಗದ ಹಾಗೆ ತಜವೀಜ್ ಇಡಬೇಕು".

ಹೈದರಾಬಾದ ಕರ್ನಾಟಕ ಭಾಗದ ದಪ್ತರಗಳ ಭಾಷೆಯೂ ಇದೇ ಬಗೆಯದಾಗಿತ್ತು.

ಕಳೆದ ಶತಮಾನದಲ್ಲಿಯೇ ಕನ್ನಡವನ್ನು ಈ ರೀತಿಯಾಗಿ ವಿದೇಶಿಯರು ಆಡಳಿತ ವ್ಯವಹಾರದಲ್ಲಿ ಬಳಸಿರುವುದು ಈಗ ಹಿಂದೆ ಮುಂದೆ ನೋಡುತ್ತಿರುವ ಕನ್ನಡ ಅಧಿಕಾರಿಗಳಿಗೆ ಮಾರ್ಗದರ್ಶಕವಾಗಿದೆ.

ಇತರ ಇಲಾಖೆಗಳಲ್ಲಿ ಕನ್ನಡ ಹಾಗೂ ಕಾನೂನು ವ್ಯವಹಾರ

೧೮೫೦ರಷ್ಟು ಹಿಂದೆಯೇ ಮದ್ರಾಸಿನಲ್ಲಿ ರೇಲ್ವೆ ಗೈಡು ಕನ್ನಡದಲ್ಲಿ ಪ್ರಕಟವಾಗಿತ್ತು. ಆಗ ಬೊಂಬಾಯಿ, ಮದ್ರಾಸು, ಹಳೆಯ ಮೈಸೂರು ಸರಕಾರಗಳಲ್ಲಿ ರಾಜ್ಯಾಂಗ ವ್ಯವಸ್ಥೆಯ ಕಾನೂನು ಪ್ರಕಟನೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಹಂಚಲಾಗುತಿತ್ತು. ಆ ಸರಕಾರಗಳಲ್ಲಿ ದೇಶೀಯ ಭಾಷೆಗಳ ಭಾಷಾಂತರಕಾರರು ಆಗಿನಿಂದಲೇ ಇದ್ದುದಕ್ಕೆ ದಾಖಲೆಗಳಿವೆ. ಮೈಸೂರು ಸರಕಾರದ ಪ್ರಕಟನೆಗಳನ್ನೆಲ್ಲ ಕೃಷ್ಣಸ್ವಾಮಿ ಅಯ್ಯಂಗಾರರು ೨೮೧ ಡೆಮ್ಮಿ ಪುಟಗಳಲ್ಲಿ ಸಂಗ್ರಹಿಸಿದರು. ಇದನ್ನು ಸರಕಾರ "ವಿದೇಶೀ ವಿದ್ಯಾರ್ಥಿಗಳಿಗಾಗಿ" ಎಂದು ಪ್ರಕಟಿಸಿತು. ೧೮೬೦ರಿಂದ ಸರಕಾರಗಳ ಆಶ್ರಯದಲ್ಲಿ ಕನ್ನಡ ವಾರ್ತಾಪತ್ರಿಕೆಗಳು ಹೊರಟವು. ೧೮೬೫ರಲ್ಲಿ ಮೈಸೂರು "ವೃತ್ತಾಂತಬೋಧಿನಿ" ಪತ್ರಿಕೆಯಲ್ಲಿ ಪ್ರಕಟವಾದ ಈ ಸರಕಾರಿ ಆಜ್ಞೆ ನೋಡಿ :

"ಸದರ್ ಹೊಸದರ್ ಜಫರ್‌ದಾರಿ ಕೆಲಸಕ್ಕಾಗಿ ಜಮಾದ್ದಾರ್ ಖಾದರ್ ಖಾನರು ನಿಯಮಿಸಲ್ಪಟ್ಟರು"

೧೮೬೭ರಲ್ಲಿ ಬೆಳಗಾವಿ ಜಿಲ್ಲೆಯ ವಿದ್ಯಾ ಇಲಾಖೆ "A Canarese School Paper" ಎಂಬ ಕನ್ನಡ ಪತ್ರಿಕೆಯನ್ನು ಹೊರಡಿಸಿತು: ಹರಿಸಾವಂತ ಹಾಗೂ ರಾ. ಪ್ರಭಾಕರ ಇದರ ಸಂಪಾದಕರಾದರು.

೧೮೭೦ರಲ್ಲಿ "A Guide to Police" ಎಂಬ ಶಿರೋನಾಮೆಯಲ್ಲಿ ಕನ್ನಡ ಪೋಲಿಸ ಕೈಪಿಡಿಯನ್ನು ತಯಾರಿಸಿ ಹಂಚಲಾಯಿತು.

Policeman's Calachism ಎಂಬ ತಳವಾರರ ಕರ್ತವ್ಯಗಳನ್ನು ತಿಳಿಸುವ ಪ್ರಶ್ನೋತ್ತರ ಪುಸ್ತಕ ಮಂಗಳೂರಿನಲ್ಲಿ ಪ್ರಕಟವಾಯಿತು. 'ಪೋಲೀಸು ಖಾನೂನು ಪುಸ್ತಕವು' ೧೮೬೩ರಲ್ಲಿ ಕನ್ನಡದಲ್ಲಿ ಪ್ರಕಟವಾಗಿದೆ. ಅದೇ ವರ್ಷದಲ್ಲಿ ರಾಬರ್ಟ್ ಕೋಲ್ ಎಂಬ ಕೊಡಗಿನ ವಿದೇಶೀ ಅಧಿಕಾರಿ 'ಮೊಹಮ್ಮದನ್ ಲಾ' ಸಂಗ್ರಹಿಸಿ (೭೦ ಪುಟಗಳು) ಕನ್ನಡದಲ್ಲಿ ಪ್ರಕಟಿಸಿದನು. ಈತನು 'ಕೂರ್ಗ್‌ಲಾ' ಸಹ ಪ್ರಕಟಿಸಿದ್ದಾನೆ. ಜಿ. ಹಡ್ಸನ್ ಬರೆದ Village Dialogue ಕನ್ನಡದಲ್ಲಿ ಹಳ್ಳಿಗರಿಗೆ ಅನೇಕ ವಿಚಾರ ತಿಳಿಸುತ್ತದೆ.

"ನ್ಯಾಯಸಂಗ್ರಹ" A Selection of law Matters ಕಾನೂನು ಕೋರ್ಟು ಕಚೇರಿ ವ್ಯವಹಾರಗಳ ವಿವರ ಕೊಡುತ್ತಿದ್ದ ಕನ್ನಡ ಪಕ್ಷಪತ್ರಿಕೆ ೧೮೬೮ ರಲ್ಲಿ ಮಂಗಳೂರಿನಿಂದ ಹೊರಟಿತು. ಇದರಲ್ಲಿ ಇಂಗ್ಲೀಷ್ ಪದಗಳ ಬಳಕೆ ಹೆಚ್ಚಾಗಿದ್ದಾದರೂ ಪ್ರಯತ್ನ ಹಾಗೂ ಉದ್ದೇಶ ಶ್ಲಾಘನೀಯ. ಮೊಕದ್ದಮೆ, ರೆಫರ್ ಮಾಡು, ತಕ್ಸೀರು ಇತ್ಯಾದಿ ಬಳಕೆಯಲ್ಲಿದ್ದವು.

"ಬೆಳಗಾಂವ್ ಸಮಾಚಾರ" ಸರಕಾರದ ಆಶ್ರಯದಿಂದ ಹಾಗೂ ಸ್ಥಳೀಯ ವಿದೇಶೀಯರಿಂದ ಬೆಂಬಲ ಪಡೆದ ಇನ್ನೊಂದು ಕನ್ನಡ ಶಾಲಾ ಪತ್ರಿಕೆ. ರೇಮಂಡ್ ವೆಸ್ಟ ಬೊಂಬಾಯಿ ಸರಕಾರದ ಅಧಿಕಾರಿ. ಅಲ್ಲಿಯ ಹೈಕೋರ್ಟಿನ ತೀರ್ಮಾನಗಳನ್ನು ಸಂಗ್ರಹಿಸಿ ೧೮೬೮ರಲ್ಲಿ ಕನ್ನಡಕ್ಕೆ ಭಾಷಾಂತರಿಸಿ (೯೯ ಪುಟಗಳು) ಮಂಗಳೂರಿನಲ್ಲಿ ಪ್ರಕಟಿಸಿದನು. ಕಾನೂನುಗಳನ್ನು ಭಾಷಾಂತರಿಸುವವರಿಗೆ ಇದೊಂದು ಮಾದರಿ, ಈ ಭಾಷೆ ಹಾಗೂ ಭಾಷಾಂತರ ಎಷ್ಟು ಸರಳ ಹಾಗೂ ಸಮಂಜಸವಾಗಿದೆ ನೋಡಿ:

"ವಿವಾಹವಾದ ಒಬ್ಬ ಹೆಂಗಸು ತನ್ನ ಪೂರಾ ಆಸ್ತಿಯನ್ನು ತನ್ನ ಸಹೋದರನಿಗೆ ಗಂಡನ ಒಪ್ಪಿಗೆ ಹೊರ್ತು ದಾನವಾಗಿ ಕೊಟ್ಟಂಥಾದ್ದು ಮಹಮ್ಮದೀ ಶಾಸ್ತ್ರ ಪ್ರಕಾರ ಅಸಿಂಧು ಆಗಿರುತ್ತದೆ ಅಂತಾ ನಿರ್ಣೈಸಲಾಯಿತು."

ಇದರಂತೆಯೇ ಮದ್ರಾಸ್, ಮೈಸೂರು ಸರಕಾರಗಳು ಸಹ ದೇಶೀಯ ಹಾಗೂ ಆಂಗ್ಲ ವಿದ್ವಾಂಸರಿಂದ ಕಾನೂನು ಸಂಗ್ರಹಗಳನ್ನು ಬರೆಸಿದವು.

ಹಿಂದೂ ಕಾಯಿದೆಯ ಬಗ್ಗೆ ಎಂ.ಡಿ. ನಾರಾಯಣ ಅಯ್ಯಂಗಾರ್ ೧೮೯೩ರಲ್ಲಿ, ಹ. ವೆ. ಚಿನ್ನಮುಳಗುಂದ ೧೮೯೭ರಲ್ಲಿ ಹಾಗೂ ಆರ್. ವೆಂಕಟಸುಬ್ಬರಾವ್ ಬರೆದಿದ್ದಾರೆ. ಚಿನ್ನಮುಳಗುಂದ ಅವರು ಸ್ವತಃ ಸಬ್‌ಜಜ್ಜ ಇದ್ದ ಕಾರಣ ಅವರ ಪುಸ್ತಕ ಹೆಚ್ಚು ಅಧಿಕೃತವೆನಿಸಿತು. ಅವರು ಕನ್ನಡದಲ್ಲಿ ಕಾಯದೇ ಪುಸ್ತಕ ಬರೆಯುವಾಗ ಇಂಗ್ಲೀಷ್ ಶಬ್ದಗಳನ್ನು ಹೇಗೆ ಕನ್ನಡಿಸಬೇಕು ಎಂಬುದನ್ನು ವಿವೇಕಯುತವಾಗಿ ಹೀಗೆ ತಿಳಿಸಿದ್ದಾರೆ; "ಕೋರ್ಟಿನ ಬಳಕೆಯಲ್ಲಿ ಇರುವ ಶಬ್ದಗಳಿಗೆ ಸಮನಾದ ಕನ್ನಡ ಶಬ್ದಗಳಿರದಿದ್ದರೆ ಕೋರ್ಟಿನ ಶಬ್ದಗಳನ್ನೇ ಇಡಬೇಕು." ಈ ಮಾತು ಇಂದಿಗೂ ಅಷ್ಟೇ ಅನ್ವಯವಾಗುತ್ತದೆಯಲ್ಲವೆ?

"ಸಾಕ್ಷ್ಯಶಾಸ್ತ್ರಸಂಗ್ರಹ" ಶಿಡ್ಲಘಟ್ಟ ರಾಮರಾಯರು ೧೮೭೦ರಲ್ಲಿ ಕನ್ನಡದಲ್ಲಿ ಪ್ರಕಟಿಸಿದರು. "ವಕೀಲ್ಸ್ ಗೈಡ್" ಇಂಥಹ ಇನ್ನೊಂದು ಪುಸ್ತಕ. ಟಿ.ಜಿ.ಮಾಬೆನ್ ಬರೆದ ಕನ್ನಡದಲ್ಲಿ "ಲೋಕ ವ್ಯವಹಾರ ಬೋಧಿನಿ" ಕರಾರು ಪತ್ರ, ಅರ್ಜಿ ಮುಂತಾದ ವುಗಳನ್ನು ಹೇಗೆ ಬರೆಯಬೇಕೆಂಬುದನ್ನು ತಿಳಿಸುತ್ತದೆ. ಇದು ೧೮೯೬ರಲ್ಲಿ ಪ್ರಕಟ ವಾಯಿತು. ಇದರಂತೆ ಎಚ್. ವಿ. ನಂಜುಂಡಯ್ಯ ಅವರು "ವ್ಯಾಪಾರ ಬೋಧಿನಿ" (೧೮೯೭) "ಅರ್ಥಶಾಸ್ತ್ರ" (೧೯೦೧) ಬರೆದರು.

ಇಂದಿಗೆ ಒಂದುನೂರು ವರ್ಷಕ್ಕಿಂತ ಮುಂಚೆಯೇ ಮೈಸೂರು ಕಮೀಷನರ್ ಆಳಿಕೆಯಲ್ಲಿರುವಾಗ ಕನ್ನಡದಲ್ಲಿ ಸಲ್ಲಿಸಲಾದ ಅರ್ಜಿ, ಅಪೀಲು ಮುಂತಾದವುಗಳ ವಿಚಾರಗಳನ್ನು ಕನ್ನಡದಲ್ಲಿಯೇ ಆದೇಶಗಳ ಮೂಲಕ ವಿಲೇವಾರಿ ಮಾಡಬೇಕೆಂಬ ಆಜ್ಞೆಯನ್ನು ಹೊರಡಿಸಲಾಗಿತ್ತು. ೧೮೩೦ರಷ್ಟು ಹಿಂದೆಯೇ ನಿರೂಪಗಳನ್ನು ಹೀಗೆ ಕನ್ನಡದಲ್ಲಿ ಕಳಿಸಲಾಗಿತ್ತು, ೧೮೭೦ರ ವರ್ಷಗಳಲ್ಲಿ ಉನ್ನತ ಮಟ್ಟದ ಕಚೇರಿ ಗಳಲ್ಲಿ ಇಂಗ್ಲೀಷ್‌ಬಳಕೆ ಹೆಚ್ಚಾಗಿದ್ದರೂ ಸಹ, ಅನೇಕ ಕೋರ್ಟುಗಳಲ್ಲಿ ಕನ್ನಡದಲ್ಲಿ ತೀರ್ಪುಗಳನ್ನು ಹೀಗೆ ಕೊಡುತ್ತಿದ್ದರು ಎಂಬುದಕ್ಕೆ ಸಹ ನಿದರ್ಶನಗಳಿವೆ.

ನ್ಯಾಯಾಂಗ ವ್ಯವಹಾರಗಳಲ್ಲಿ ಕನ್ನಡ ಬಳಕೆಯ ಮಹತ್ವವನ್ನು ಎಷ್ಟರ ಮಟ್ಟಿಗೆ ಅರಿತಿದ್ದರೆಂದರೆ, ಮೈಸೂರು ಸರ್ಕಾರದವರು ೧೯೧೦ರ ಹೊತ್ತಿಗೆ ಇಂಡಿಯನ್ ಪೀನಲ್ ಕೋಡ್ ಆದಿಯಾಗಿ ಉತ್ಪನ್ನಕರ, ಧರ್ಮಶಾಸ್ತ್ರ, ವ್ಯಾಪಾರ ನಿಬಂಧ, ಸಿವಿಲ್ ನಡವಳಿಕೆಯ ನಿಬಂದನೆ, ಭಾರತೀಯ ಪೌರನೀತಿ, ಸಾಕ್ಷ್ಯದ ಕಾನೂನು, ಮೈಸೂರು ಇನ್ಸಾಲ್ವೆನ್ಸಿ ರೆಗ್ಯುಲೇಷನ್, ಕೋರ್ಟು ರುಸುಂಗಳ ರೆಗ್ಯುಲೇಷನ್ ಮೊದಲಾದ ಅನೇಕ ಕಾನೂನು ಹಾಗೂ ನಿಯಮಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿದ್ದರು.

ಈ ಪ್ರಬಂಧವನ್ನು ಮುಗಿಸುವ ಮುಂಚೆ ಒಂದು ಪ್ರಶ್ನೆ. ಬ್ರಿಟಿಷ್ ಅಧಿಕಾರಿ ಗಳೂ ಹಾಗೂ ಅವರ ಸಲಹೆಯಿಂದ ಇತರರೂ ಇಂಗ್ಲೀಷ್ ಆಡಳಿತದ ಭಾಷೆ ಹಾಗೂ ಶಿಕ್ಷಣ ಮಾಧ್ಯಮವಾದ ಮೇಲೆಯೂ ಕನ್ನಡವನ್ನು ಆಡಳಿತದಲ್ಲಿ ಉಳಿಸಿ ಕೊಳ್ಳಲು ಏಕೆ ಹೆಣಗಾಡಿದರು?

ಈ ಪ್ರಶ್ನೆಗೆ ಮೇಜರ್ ರಾಬರ್ಟ್ ಕೋಲ್ (೧೮೬೩ರಲ್ಲಿ) ಕನ್ನಡದಲ್ಲಿ ಬರೆದ ತನ್ನ "ಮಹಮ್ಮದೀಯ ಲಾ" ಎಂಬ ಪುಸ್ತಕದ ಮುನ್ನುಡಿಯಲ್ಲಿ ಉತ್ತರಿಸಿ ದ್ದಾನೆ. ಅದನ್ನು ಇಂದಿನ ಕರ್ನಾಟಕದ ಎಲ್ಲ ಅಧಿಕಾರಿಗಳೂ, ನಾಯಕರೂ ಗಮನಿಸುವುದು ಯೋಗ್ಯವೆನಿಸುತ್ತದೆ:

"ಮೈಸೂರು ಸೀಮೆಯಲ್ಲಿ ೩೦ ಲಕ್ಷ ಪ್ರಜೆಗಳಲ್ಲಿ, ೨೯ ಲಕ್ಷ ಜನಗಳು ಇಂಗ್ಲೀಷ್ ತಿಳಿಯದೆ ದೇಶಭಾಷೆಯಾದ ಕನ್ನಡದಲ್ಲೇ ವ್ಯವಹರಿಸುತ್ತಾರೆ ಮತ್ತು ಇಂಗ್ಲಿಷ್ ತಿಳಿ

ಯದ ವಕೀಲರೂ, ಕಕ್ಷಿಗಾರರೂ ತಾಲೂಕು ಮುನ್ಸಿಫ್ ಕೋರ್ಟುಗಳಲ್ಲಿ ಕನ್ನಡದಲ್ಲಿಯೇ ವ್ಯವಹರಿಸಬಹುದಾಗಿದೆ. ಈ ಕಾರಣದಿಂದ ಕನ್ನಡ ಪುಸ್ತಕಗಳು ಅವಶ್ಯಕವಾಯಿತು."

ಭಾಷಾ ಅಲ್ಪಸಂಖ್ಯಾತ ಕಮೀಶನರವರ

ಟೀಕೆ ಟಿಪ್ಪಣಿಗಳು

ಸಂವಿಧಾನದ ರೀತ್ಯ ಹಾಗೂ ಕಾಲ ಕಾಲಕ್ಕೆ ರಾಷ್ಟ್ರಾದ್ಯಂತ ಅನ್ವಯಿಸುವ ತೀರ್ಮಾನಗಳ ಅನ್ವಯ ಭಾರತದ ಭಾಷಾ ಅಲ್ಪ ಸಂಖ್ಯಾತರ ಹಿತರಕ್ಷಣೆಯ ಬಗ್ಗೆ ಎಲ್ಲ ರಾಜ್ಯಗಳೂ ತಮ್ಮ ಶಕ್ಯಾನುಸಾರ ಪ್ರಯತ್ನಿಸಿವೆ. ಆದರೂ ಭಾಷಾ ಅಲ್ಪ ಸಂಖ್ಯಾತರಿಗೆ ಇನ್ನೂ ಹೆಚ್ಚಿನ ನಂಬಿಕೆ ಹುಟ್ಟುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗಿದೆ. ಈ ಬಗ್ಗೆ ಭಾರತ ಕಮಿಷನರವರು ತಮ್ಮ ಅನುಭವಗಳನ್ನು ಹಾಗೂ ಅನಿಸಿಕೆಗಳನ್ನು ಪ್ರತಿಯೊಂದು ವರದಿಯಲ್ಲಿಯೂ ನಮೂದಿಸುತ್ತ ಬಂದಿದ್ದಾರೆ. ನಿರ್ಭಯವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದ್ದಾರೆ. ಇಲ್ಲಿ ಕೆಲವು ಅನುಭವ ಹಾಗೂ ಅನಿಸಿಕೆಗಳನ್ನು ಅವರ ೧೯ನೇ ವರದಿಯಿಂದ ಆಯ್ದುಕೊಳ್ಳಲಾಗಿದೆ. ಹಲಕೆಲವು ರಾಜ್ಯಗಳ ಬಗ್ಗೆ ಅವರು ಸಂದರ್ಭಾನುಸಾರವಾಗಿ ಕಟುವಾಗಿಯೂ ಟೀಕಿಸಿದ್ದಾರೆ. ಭಾಷಾ ಅಲ್ಪ ಸಂಖ್ಯಾತರಿಗೆ ಅನ್ಯಾಯ ಒದಗುವ ಸಂದರ್ಭದಲ್ಲಿ ಎಚ್ಚರಿಕೆಯ ರೂಪದಲ್ಲಿಯೂ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ.

ಅನುಭವ ಹಾಗೂ ಅನಿಸಿಕೆಗಳು

ಪ್ರಾಥಮಿಕ ಶಿಕ್ಷಣ : ಮಧ್ಯಪ್ರದೇಶ, ಹರಿಯಾನಾ, ಪಂಜಾಬ, ಜಮ್ಮು ಕಾಶ್ಮೀರ ಮಣಿಪುರ ಮತ್ತು ತ್ರಿಪುರಾ ರಾಜ್ಯಗಳು ಭಾಷಾ ಅಲ್ಪ ಸಂಖ್ಯಾತರಿಗೆ ಅವರವರ ಭಾಷೆಗಳಲ್ಲಿ ಪ್ರಾಥಮಿಕ ಹಂತದ ಶಿಕ್ಷಣವನ್ನು ನೀಡುವ ಸಂವಿಧಾನಾತ್ಮಕವಾದ ಅವಕಾಶಗಳನ್ನು ಕಲ್ಪಿಸಿಲ್ಲ. ಅದಕ್ಕೆ ಆ ರಾಜ್ಯಗಳು ಏನೇ ಕಾರಣವನ್ನು ಮುಂದೊಡ್ಡಿದ್ದರೂ ಅದು ಸಂವಿಧಾನಕ್ಕೆ ವಿರೋಧವಾಗಿದೆ.

(i) ಸಂವಿಧಾನದ ಎಂಟನೇ ಶೆಡ್ಯೂಲಿನಲ್ಲಿ ನಮೂದಿಸಲಾಗಿರುವ ೧೫ ಭಾಷೆಗಳಲ್ಲಿ ಮಾತ್ರ ಭಾಷಾ ಅಲ್ಪ ಸಂಖ್ಯಾತರಿಗೆ ಪ್ರಾಥಮಿಕ ಹಂತದ ಶಿಕ್ಷಣವನ್ನು ನೀಡಬೇಕೆಂದು ಮಧ್ಯಪ್ರದೇಶ ಸರ್ಕಾರವು ಆದೇಶವನ್ನು ಹೊರಡಿಸಿದೆ. ಆದರೆ ಗುಡ್ಡಗಾಡು ಜನರು ಗಣನೀಯ ಪ್ರಮಾಣದಲ್ಲಿ ಆಡುತ್ತಿರುವ ಭಿಲ್ಲಿ, ಕೋರ್ಕು ಕುರುಟಾ, ಮಡಿಯಾ, ಗೋಂದಿ ಮತ್ತು ಅಲ್ಪಿ ಮಾತೃ ಭಾಷೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ನೀಡುತ್ತಿಲ್ಲ.

(ii) ಹರಿಯಾನಾ–ಪಂಜಾಬ ರಾಜ್ಯಗಳಲ್ಲಿ ಭಾಷಾ ಅಲ್ಪ ಸಂಖ್ಯಾತರಿಗೆ ಅವರವರ ಮಾತೃಭಾಷೆಯಲ್ಲಿ ಸರಕಾರಿ ಶಾಲೆಗಳಲ್ಲಿ ನೀಡುವ ಸೌಲಭ್ಯವನ್ನು ಒದಗಿ

ಸಿಲ್ಲ; ಏಕೆಂದರೆ ಅವುಗಳು ಏಕಭಾಷಾ ಪ್ರಭುತ್ವವುಳ್ಳ ರಾಜ್ಯಗಳಾಗಿರುವುದರಿಂದ ರಾಜ್ಯ ಪುನರ್ವಿಂಗಡಣೆಗೊಳ್ಳುವ ಪೂರ್ವದಲ್ಲಿದ್ದಂತೆಯೇ ಆಯಾ ಭಾಗಗಳಲ್ಲಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮಾತೃಭಾಷೆಯ ಕಲಿಕೆಯ ಕ್ರಮವನ್ನು ಮುಂದುವರಿಸುತ್ತಿದ್ದಾರೆ.

(iii) ಜಮ್ಮು–ಕಾಶ್ಮೀರದಲ್ಲಿರುವ ಕಾಶ್ಮೀರಿ; ದೋಗ್ರಿ ಮತ್ತು ಲಡಾಖ್ಮಿ ಭಾಷೆಗಳಿಗೆ ಲಿಪಿ ಇಲ್ಲದ ಕಾರಣ ಈ ಭಾಷೆಗಳು ಬೆಳವಣಿಗೆಯನ್ನು ಹೊಂದದೆ ಹಾಗೂ ಸರಕಾರವು ಆ ಭಾಷೆಗಳಿಗೆ ಪಠ್ಯಪುಸ್ತಕಗಳನ್ನು ಒದಗಿಸುವ ಸರ್ವಸಾಮರ್ಥ್ಯವನ್ನು ಗಳಿಸಿಕೊಳ್ಳದೆ, ಆಯಾ ಭಾಷೆಗಳ ಮಾತೃಭಾಷೆಯುಳ್ಳ ಭಾಷಾ ಅಲ್ಪ ಸಂಖ್ಯಾತರಿಗೆ ಅವರವರ ಮಾತೃಭಾಷೆಗಳಲ್ಲಿ ಶಿಕ್ಷಣವನ್ನು ನೀಡುವುದು ಸಾಧ್ಯವಿಲ್ಲ ಎಂದು ಜಮ್ಮು–ಕಾಶ್ಮೀರ ಸರಕಾರವು ತನ್ನ ಸ್ಪಷ್ಟ ನಿಲುವನ್ನು ತಾಳಿದೆ.

(iv) ಮಣಿಪುರ ರಾಜ್ಯವು ಈ ವರೆಗೂ ಅಲ್ಲಿನ ಗುಡ್ಡಗಾಡು ಜನಾಂಗಗಳ ಭಾಷೆಗಳಲ್ಲಿ ಶಿಕ್ಷಣವನ್ನು ನೀಡುವ ಕ್ರಮವನ್ನು ಕೈಕೊಂಡಿಲ್ಲ ಈ ರಾಜ್ಯದಲ್ಲಿ ೨೯ ಗುಡ್ಡಗಾಡು ಜನಾಂಗಗಳ ಭಾಷೆಗಳಿದ್ದು, ಅವುಗಳಲ್ಲಿ ರೋಮನ್ ಲಿಪಿಯನ್ನು ಬಳಸಿ ಅನೇಕ ಭಾಷೆಗಳಲ್ಲಿ ಪಠ್ಯ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಈ ಮೊದಲು ಭಾಷಾ ತಜ್ಞರ ಸಮಿತಿಯೊಂದನ್ನು ರಚಿಸಿ, ಆಯಾ ಭಾಷೆಗಳಿಗೆ ರೋಮನ್ ಲಿಪಿಯನ್ನು ಎರವಲು ಪಡೆಯಬಹುದೇ ಹೇಗೆ? ಎಂಬ ಬಗ್ಗೆ ತನಿಖೆ ಮಾಡಲು ತಿಳಿಸಲಾಗಿತ್ತು. ಆ ಸಮಿತಿಯ ತೀರ್ಮಾನ ಹಾಗೂ ಅಲ್ಲಿನ ಪರಿಸ್ಥಿತಿಯು ಈಚೆಗೆ ನಮಗೆ ತಿಳಿದು ಬಂದಿಲ್ಲ.

(v) ತ್ರಿಪುರಾ ರಾಜ್ಯದಲ್ಲಿರುವ ಬಹು ಸಂಖ್ಯಾತ ಉಪಭಾಷೆಗಳಲ್ಲಿ ಕೇವಲ ೧೯ ಉಪಭಾಷೆಗಳಲ್ಲಿ ಒಂದರಿಂದ ಮೂರನೆಯ ತರಗತಿಯ ವರೆಗೆ ಶಿಕ್ಷಣ ನೀಡಲಾಗುತ್ತಿದೆ. ಆ ಭಾಷೆಗಳಲ್ಲಿರುವ ಪಠ್ಯ ಪುಸ್ತಕಗಳು ತೃಪ್ತಿಕರವಾದ ರೀತಿಯಲ್ಲಿಲ್ಲ.

ತಮಿಳು ನಾಡಿನಲ್ಲಿ ಸೌರಾಷ್ಟ್ರ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬ ಬೇಡಿಕೆ ಈವರೆಗೂ ಸರಕಾರದಿಂದ ಮಾನ್ಯತೆ ಪಡೆದಿಲ್ಲ. ಸೌರಾಷ್ಟ್ರ ಭಾಷೆಯು ಕೇವಲ ಆಡುವ ಭಾಷೆಯೇ ಹೊರತು, ಅದಕ್ಕೆ ಲಿಪಿಯ ಆಶ್ರಯವಿಲ್ಲ. ಹಾಗೂ ಆ ಭಾಷೆಗೆ 'ಲಿಪಿ' ಯಾವುದೆಂಬ ಬಗ್ಗೆ ವಿರೋದಾಭಿಪ್ರಾಯಗಳಿವೆ. ಎಂದು ಸರಕಾರ ಸ್ಪಷ್ಟಪಡಿಸಿದೆ.

ಬಹುಕಾಲದಿಂದಲೂ ಬಿಹಾರ, ಓರಿಸ್ಸಾ, ಪಶ್ಚಿಮ ಬಂಗಾಳದಲ್ಲಿ ಸಂತಲೀ ಭಾಷೆಯನ್ನಾಡುವ ಜನರು ಲಿಪಿಯ ಬಗ್ಗೆ ಚಳುವಳಿ ನಡೆಸುತ್ತಲೇ ಬಂದಿದ್ದಾರೆ. 'ಓವಲ್' ರೋಮನ್ ಅಥವಾ ಪ್ರಾದೇಶಿಕ ಭಾಷೆ ಇವುಗಳಲ್ಲಿ ಯಾವ ಭಾಷೆಯ ಲಿಪಿಯನ್ನು ಸಂತಲೀ ಭಾಷೆಗೆ ಅನ್ವಯಿಸಬೇಕೆಂಬುದೇ ಈ ವಿವಾದವಾಗಿದೆ. ತಮ್ಮ ಭಾಷೆಗೆ ಮೇಲೆ ಕಾಣಿಸಿದ ಮೂರು ಭಾಷೆಗಳ ಲಿಪಿಗಳಲ್ಲಿ ಯಾವುದನ್ನು ಅನ್ವಯಿಸಬೇಕೆಂಬ ಬಗ್ಗೆ ಸಂತಲೀ ಭಾಷೆಯನ್ನಾಡುವ ಜನರೇ ತೀರ್ಮಾನ ತೆಗೆದುಕೊಳ್ಳುವುದು ವಿಹಿತ

ವೆಂದು ತೀರ್ಮಾನಿಸಲಾಗಿತ್ತು. ಈ ಗೊಂದಲದ ಕಾರಣದಿಂದಾಗಿ ಈ ಭಾಷೆಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳೆರಡರಲ್ಲೂ ಶಿಕ್ಷಣವನ್ನು ನೀಡುವಂತಿಲ್ಲ.

ಬೋಡೋ ಭಾಷೆಗೆ ಲಿಪಿಯನ್ನು ನಿಗದಿ ಮಾಡಿದಂತೆ ಸಂತಲೀ ಭಾಷೆಗೂ ಲಿಪಿಯೊಂದನ್ನು ಕೇಂದ್ರ ಸರಕಾರವೇ ನಿರ್ಧರಿಸಲಿ ಎಂದು ನಾವು ಈ ಹಿಂದೆಯೇ ಕೇಂದ್ರ ಸರಕಾರಕ್ಕೆ ಸೂಚನೆ ನೀಡಿದ್ದೇವೆ.

ಪಶ್ಚಿಮ ಬಂಗಾಲ, ಓರಿಸಾ, ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶ, ಮಣಿಪುರ. ಅರುಣಾಚಲ ಪ್ರದೇಶ ಮತ್ತು ದರ್ದಾನಗರ ಹವೇಲಿ ರಾಜ್ಯಗಳಲ್ಲಿ ಸರ್ವಸಮ್ಮತ 'ಲಿಪಿ'ಯ ಬಗ್ಗೆ ತೀರ್ಮಾನವಾಗದ ಕಾರಣಕ್ಕಾಗಿ ಅಲ್ಲಿಯ ಗುಡ್ಡಗಾಡು ಜನಾಂಗಗಳ ಭಾಷೆಗಳಲ್ಲಿ ಶಿಕ್ಷಣವನ್ನು ನೀಡುತ್ತಿಲ್ಲ.

'ಲಿಪಿ'ಯ ವಿಷಯವಾಗಿ ದೇವನಾಗರಿ ಲಿಪಿಯು ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿದೆ. ಸಂಸ್ಕೃತ, ಹಿಂದೀ ಭಾಷೆಗಳಲ್ಲದೆ ಮರಾಠಿಯೂ ಕೂಡ ದೇವನಾಗರಿ ಲಿಪಿಯಲ್ಲಿಯೇ ಬಳಸಲ್ಪಡುತ್ತದೆ. ಗುಜರಾಥಿ ಭಾಷೆಯ ಲಿಪಿಯೂ ಕೂಡ ದೇವನಾಗರಿ ಲಿಪಿಗೆ ಅತ್ಯಂತ ಹೊಂದಾಣಿಕೆಯಾಗಿದೆ. ಗುರುಮುಖಿ ಬೆಂಗಾಲಿ ಲಿಪಿಗಳು ಕೂಡ ದೇವನಾಗರಿ ಲಿಪಿಯ ರಚನೆಯನ್ನು ಹೆಚ್ಚಾಗಿ ಹೋಲುತ್ತವೆ.

ಇದೇ ರೀತಿ ಸಂತಲಿ ಮತ್ತು ಸೌರಾಷ್ಟ್ರಂ ಭಾಷೆಗಳಿಗೂ ದೇವನಾಗರಿ ಲಿಪಿಯನ್ನು ಆಶ್ರಯಿಸಿದರೆ ಹೆಚ್ಚಿನ ಅನುಕೂಲವಾಗುವುದು.

ಭಾರತದ ಇತರ ಗುಡ್ಡಗಾಡು ಜನಾಂಗಗಳ ಭಾಷೆಗಳಿಗೂ ದೇವನಾಗರಿ ಲಿಪಿಯನ್ನೇ ಆಧಾರವಾಗಿಟ್ಟುಕೊಂಡರೆ ರಾಷ್ಟ್ರಭಾಷೆಯಾದ ಹಿಂದೀ ಲಿಪಿಯನ್ನೇ ಹೋಲುವಂತೆ ಸುಲಭವಾಗಿ ಲಿಪಿಯ ಬಳಕೆಯನ್ನು, ಲಿಪಿಯಿಲ್ಲದ ಎಲ್ಲ ಭಾಷೆಗಳಿಗೂ ಅನ್ವಯಿಸುವುದು ಸೂಕ್ತ ಹಾಗೂ ಎಲ್ಲ ಭಾಷೆಗಳೂ ಬೆಳವಣಿಗೆಯನ್ನು ಹೊಂದಲು ಅನುಕೂಲವಾಗುತ್ತದೆ.

ಕೇಂದ್ರ ಸರಕಾರವು ದೇವನಾಗರಿ ಲಿಪಿಯನ್ನು ಲಿಪಿಗಳಿಲ್ಲದ ಭಾಷೆಗಳಿಗೆ ಆಶ್ರಿತ ಲಿಪಿಯನ್ನು ಮಾಡಲು, ಶಿಕ್ಷಣ ತಜ್ಞರ, ಸಾಹಿತಿಗಳ, ಭಾಷಾ ತಜ್ಞರ ಹಾಗೂ ಸಾಮಾಜಿಕ ಕಾರ್ಯಕರ್ತರ ಸಲಹೆಯನ್ನು ಪಡೆದು ಸೂಕ್ತ ಕ್ರಮ ಕೈಕೊಳ್ಳುವುದು ಯೋಗ್ಯವೆಂದು ಶಿಫಾರಸು ಮಾಡುತ್ತೇನೆ.

ಮಾಧ್ಯಮಿಕ ಶಿಕ್ಷಣ :

ರಾಜ್ಯಗಳ ಪ್ರಾದೇಶಿಕ ಭಾಷೆಗಳು ಭಿನ್ನ ಭಿನ್ನವಾಗಿರುವುದರಿಂದ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿಯೇ ನೀಡಬೇಕೆಂಬ ನಿಯಮದಂತೆ ಇಲ್ಲಿ ನಿರ್ಧರಿಸಲಾಗವುದಿಲ್ಲ. ಈ ಬಗ್ಗೆ ರಾಜ್ಯ ಪುನರ್ವಿಂಗಡಣಾ ಆಯೋಗವು ಎಲ್ಲ ರಾಜ್ಯಗಳನ್ನು ಸಂಪರ್ಕಿಸಿ ಕೆಲವು ಸೂತ್ರಗಳನ್ನು ನಿರ್ಧರಿಸಿದೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಏಕ ಭಾಷಾ ಮಾಧ್ಯಮದ ಶೈಕ್ಷಣಿಕ ಕ್ರಮಕ್ಕೆ

ಅವಕಾಶವನ್ನು ನೀಡಿಲ್ಲ. ೧೯೪೯ ರಲ್ಲಿ ನಡೆದ ಪ್ರಾದೇಶಿಕ ಶಿಕ್ಷಣ ಸಚಿವರ ಸಮ್ಮೇಳನದ ತೀರ್ಮಾನಗಳನ್ನು ೧೯೬೧ರಲ್ಲಿ ನಡೆದ ಮುಖ್ಯಮಂತ್ರಿಗಳ ಸಮ್ಮೇಳನವು ತಾತ್ವಿಕವಾಗಿ ಒಪ್ಪಿಕೊಂಡಿದೆಯಲ್ಲದೆ ಮಾಧ್ಯಮಿಕ ಶಿಕ್ಷಣವನ್ನು ಮಾತೃಭಾಷಾ ಮಾಧ್ಯಮದಲ್ಲಿ ನಡೆಸುವುದು ಸೂಕ್ತವಲ್ಲದ ಕಾರಣ ರಾಜ್ಯಾಂಗದ ೮ ನೇ ಶೆಡ್ಯೂಲಿನಲ್ಲಿ ನಮೂದಿಸಿದಂತೆ ಇತರ ಭಾಷೆಗಳೊಂದಿಗೆ ಇಂಗ್ಲೀಷ್ ಭಾಷೆಯನ್ನು ಬಳಕೆ ಮಾಡಿಕೊಳ್ಳಬಹುದು. ಆದರೆ ಆಸಾಮ್ ರಾಜ್ಯದ ಗುಡ್ಡಗಾಡು ಜಿಲ್ಲೆಗಳಲ್ಲಿ ಹಾಗೂ ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬಹುದೆಂದು ನಿರ್ಧರಿಸಲಾಗಿದೆ.

ಮಾಧ್ಯಮಿಕ ಶಿಕ್ಷಣವು ಮಾತೃಭಾಷೆಯ ಮಾಧ್ಯಮದಲ್ಲಿ ನಡೆಯಬೇಕಾದರೆ ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ೪ ವರ್ಷಗಳ ಕಾಲ ಒಟ್ಟು ೬೦ ವಿದ್ಯಾರ್ಥಿಗಳು ಅಥವಾ ಪ್ರತಿ ತರಗತಿಯಲ್ಲಿ ೧೫ ವಿದ್ಯಾರ್ಥಿಗಳು ಭಾಷಾಅಲ್ಪಸಂಖ್ಯಾತರಾಗಿದ್ದರೆ ಅವರಿಗೆ ಆವರವರ ಮಾತೃಭಾಷೆಗಳಲ್ಲಿ ಶಿಕ್ಷಣ ನೀಡಬಹುದು.

ಈ ನಿರ್ಧಾರಕ್ಕೆ ಸಂಬಂಧಪಟ್ಟಂತೆ ಹರಿಯಾಣ, ಜಮ್ಮು-ಕಾಶ್ಮೀರ, ಮಧ್ಯಪ್ರದೇಶ, ಮಣಿಪುರ, ಮೇಘಾಲಯ, ನಾಗಾಲ್ಯಾಂಡ, ಪಂಜಾಬ್, ತ್ರಿಪುರಾ, ಉತ್ತರ ಪ್ರದೇಶ, ಅಂದಮಾನ್ ನಿಕೋಬಾರ್ ದ್ವೀಪ, ಅರುಣಾಚಲ ಪ್ರದೇಶ, ಮಿಜೋರಾಮ್ ಮುಂತಾದ ರಾಜ್ಯಗಳನ್ನು ಹೊರತುಪಡಿಸಿ ರಾಷ್ಟ್ರದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತದ ಪ್ರದೇಶಗಳು ಆದೇಶವನ್ನು ನೀಡಿವೆ.

ತ್ರಿಭಾಷಾ ಸೂತ್ರವನ್ನು ಕಡ್ಡಾಯಗೊಳಿಸುವ ಸಂದರ್ಭದಲ್ಲಿ ಭಾಷಾಅಲ್ಪಸಂಖ್ಯಾತ ವಿದ್ಯಾರ್ಥಿಗಳು ತಮ್ಮ ಭಾಷೆಯನ್ನೊಳಗೊಂಡಂತೆ ನಾಲ್ಕು ಭಾಷೆಗಳಲ್ಲಿ ಅಭ್ಯಾಸಮಾಡುವ ಗುರುತರ ಭಾರವನ್ನು ಹೊರಬೇಕಾಗುತ್ತದೆ. ಈ ಕಾರಣಕ್ಕಾಗಿಯೇ ಮಾತೃಭಾಷೆಯನ್ನು ಐಚ್ಛಿಕ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡಲ್ಲಿ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕಡಿಮೆ ಭಾರವಾಗುವುದೆಂದು ನಾವು ಸಲಹೆಯನ್ನಿತ್ತಿದ್ದೇವೆ. ಈ ಕ್ರಮವನ್ನು ಕೆಳಗೆ ಕಂಡಂತೆ ತ್ರಿಭಾಷಾ ಸೂತ್ರಕ್ಕೆ ಅನ್ವಯಿಸಬಹುದು.

i) ಮಾತೃಭಾಷೆ ಇಲ್ಲವೆ ಪ್ರಾದೇಶಿಕ ಭಾಷೆ.

ii) ರಾಷ್ಟ್ರದ ಆಡಳಿತ ಭಾಷೆ ಅಥವಾ ಅಸೋಸಿಯೇಟೆಡ್ ಆಡಳಿತ ಭಾಷೆ.

iii) ಪ್ರಾಚೀನ ಅಥವಾ ಅಂತರಾಷ್ಟ್ರೀಯ ಭಾಷೆ (ಶೈಕ್ಷಣಿಕ ಮಾಧ್ಯಮವಾಗಿ ಉಪಯೋಗಿಸದ) ಗಳನ್ನು ತ್ರಿಭಾಷಾ ಸೂತ್ರದನ್ವಯ ಅಳವಡಿಸಿಕೊಳ್ಳಬಹುದೆಂದು ನಾವು ಕೇಂದ್ರಸರಕಾರಕ್ಕೆ ಸೂಚಿಸಿದ್ದೇವೆ.

ಈ ಸಲಹೆಯು ಈ ವರೆಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಅಂಗೀಕರಿಸಲ್ಪಟ್ಟಿದೆಯೋ ಇಲ್ಲವೋ ತಿಳಿದು ಬಂದಿಲ್ಲ.

ಮಾಧ್ಯಮಿಕ ಶಿಕ್ಷಣರ ಭಾಷಾ ಮಾಧ್ಯಮದ ವಿಷಯದಲ್ಲಿ ತ್ರಿಭಾಷಾ ಸೂತ್ರವನ್ನು ಸಕ್ರಮವಾಗಿ ಅಳವಡಿಸಿಕೊಳ್ಳಲು ಒಟ್ಟಾಭಿಪ್ರಾಯವನ್ನು ಆದಷ್ಟು ಬೇಗ ರೂಪಿಸಿಕೊಳ್ಳುವುದು ವಿಹಿತವೆಂದು ಸೂಚಿಸ ಬಯಸುತ್ತೇವೆ.

ತಮಿಳು ನಾಡಿನಲ್ಲಿ ಮಾತೃಭಾಷೆಯನ್ನು ತೆಗೆದುಕೊಂಡ ಭಾಷಾಅಲ್ಪಸಂಖ್ಯಾತ ವಿದ್ಯಾರ್ಥಿಗಳು ರಾಜ್ಯಭಾಷೆಯನ್ನು ಕಲಿಯಲು ಸಾಧ್ಯವಾಗುತ್ತಿಲ್ಲ. ಆ ಕಾರಣಕ್ಕಾಗಿಯೇ ಈ ವಿದ್ಯಾರ್ಥಿಗಳು ದ್ವಿಭಾಷಾ ಸೂತ್ರದಲ್ಲಿಯೇ ತಮ್ಮ ಅಭ್ಯಾಸ ಕ್ರಮವನ್ನು ಮುಂದುವರಿಸುತ್ತಿದ್ದಾರೆ. ಶಾಲಾ ಶಿಕ್ಷಣದ ಅವಧಿ ಮುಗಿದನಂತರ ಪ್ರತ್ಯೇಕ ಸಮಯದಲ್ಲಿ ಅಂಥ ವಿದ್ಯಾರ್ಥಿಗಳು ರಾಜ್ಯಭಾಷೆಯನ್ನು ಕಲಿಯುತ್ತಿದ್ದಾರೆ. ಈ ಕ್ರಮವು ಅಷ್ಟೊಂದು ಸಮಾಧಾನಕರವಾಗಿಲ್ಲ. ತಮಿಳುನಾಡು ಸರಕಾರವು ಭಾರತದ ತೀರ್ಮಾನಕ್ಕನುಗುಣವಾಗಿ ತಮ್ಮ ವಿಚಾರವನ್ನು ಬದಲಿಸಿಕೊಳ್ಳಬೇಕು. ಭಾಷಾ ಅಲ್ಪಸಂಖ್ಯಾತರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶೈಕ್ಷಣಿಕ ಪ್ರಗತಿಯನ್ನು ಅವಲೋಕಿಸಬೇಕಾದರೆ ಆಯಾ ರಾಜ್ಯಗಳಿಂದ ದೊರೆಯಬಹುದಾದ ಅಂಕಿ-ಅಂಶಗಳನ್ನೇ ನಾವು ಅವಲಂಭಿಸಬೇಕಾಗುತ್ತದೆ.

ಸಕಾಲಿಕವಾಗಿ ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಈ ಅಂಕಿ-ಅಂಶಗಳು ದೊರೆಯದೇ ಇರುವ ಪ್ರಯುಕ್ತ, ಭಾಷಾಅಲ್ಪಸಂಖ್ಯಾತರ ಹಿತ ರಕ್ಷಣೆ ಯಾವ ಯಾವ ರಾಜ್ಯದಲ್ಲಿ ಎಷ್ಟರಮಟ್ಟಿಗೆ ದೊರೆಯುತ್ತಿದೆ ಎಂಬ ನಿರ್ಧಾರಕ್ಕೆ ಬರುವುದು ಕಷ್ಟದಾಯಕವಾಗಿದೆ. ಆ ಕಾರಣಕ್ಕಾಗಿ ನಿರ್ದಿಷ್ಟಪಡಿಸಿದ ಪ್ರೊಫಾರ್ಮವೊಂದನ್ನು ಸಿದ್ಧಪಡಿಸಿ ಸವಿಸ್ತಾರವಾದ ಮಾಹಿತಿಯನ್ನು ಒದಗಿಸಬೇಕೆಂದು ಸೂಚಿಸಲಾಗಿದೆ. ಅದೂ ಕೂಡ ಸಮರ್ಪಕವಾಗಿ ನಮಗೆ ದೊರೆಯುತ್ತಿಲ್ಲ. ಇದೂ ಸಾಧ್ಯವಾಗದಿದ್ದರೆ ಬೇರೆ ಹೊಸ ವಿಧಾನವೊಂದನ್ನು ಕಲ್ಪಿಸಿ, ಅಂಕಿ-ಅಂಶಗಳನ್ನು ಆ ರಾಜ್ಯಗಳು ನಮಗೆ ಒದಗಿಸಬಹುದೆಂಬ ಸೂಚನೆ ನೀಡಿದ್ದೇವೆ.

ಪಠ್ಯಪುಸ್ತಕಗಳು

ಪಠ್ಯಪುಸ್ತಗಳ ಬೇಡಿಕೆಯ ವಿಷಯದಲ್ಲಿ ಅನೇಕ ರಾಜ್ಯಗಳ ಭಾಷಾಅಲ್ಪಸಂಖ್ಯಾತರಿಂದ ನಮಗೆ ತಕರಾರುಗಳು ಬಂದೇ ಬರುತ್ತವೆ. ಮುಖ್ಯವಾಗಿ ಆಂಧ್ರಪ್ರದೇಶ, ಬಿಹಾರ, ಮಹಾರಾಷ್ಟ್ರ ಮಣಿಪುರ (ಗುಡ್ಡಗಾಡು ಭಾಷೆಗಳ) ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಭಾಷಾಅಲ್ಪಸಂಖ್ಯಾತರ ಮಾತೃಭಾಷೆಗಳ ಪಠ್ಯಪುಸ್ತಕಗಳು ಸಕಾಲದಲ್ಲಿ ಬೇಡಿಕೆಗಳನ್ನು ಪೂರೈಸದಷ್ಟು ಅಲ್ಪ ಪ್ರಮಾಣದಲ್ಲಿ ದೊರೆಯುತ್ತಿರುವುದರಿಂದ ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾರ್ಥಿಗಳು ತೊಂದರೆಗೊಳಗಾಗಿದ್ದಾರೆ. ೧೯೬೧ ರ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಈ ಬಗ್ಗೆ ಸಾಕಷ್ಟು ಒತ್ತಾಯಪಡಿಸಲಾಗಿದೆ.

ಇಂಥ ಪಠ್ಯಪುಸ್ತಕಗಳನ್ನು ಸರಕಾರವೇ ಒದಗಿಸಬೇಕಲ್ಲದೆ, ಖಾಸಗಿ ಸಂಸ್ಥೆಗಳಿಗೆ ಬಿಟ್ಟುಕೊಡಬಾರದು. ಇದಲ್ಲದೆ ಈ ಭಾಷೆಗಳಿಗೆ ಹಾಗೂ ಶಿಕ್ಷಣಕ್ಕೆ ಸರಿಹೋಗುವಂಥ

ಪಠ್ಯಕ್ರಮಗಳಿರುವ ಬೇರೆ ರಾಜ್ಯಗಳ ಪಠ್ಯಪುಸ್ತಕಗಳನ್ನು ಸಹ ಎರವಲು ಪಡೆಯ ಬಹುದೆಂದು ಸೂಚಿಸಿದ್ದೆವು. ಕೆಲವು ರಾಜ್ಯಗಳು ಇದನ್ನು ಪ್ರಾಯೋಗಿಕವಾಗಿ ನಡೆಸಿದರಲ್ಲದೆ, ಕೆಲವು ರಾಜ್ಯಗಳು ರಾಷ್ಟ್ರೀಕರಣ ಗೊಳಿಸಿದವು, ಕೆಲವು ಮಾದರಿಯ ಪುಸ್ತಕಗಳನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಸಂಸ್ಥೆಯವರೂ ಪ್ರಕಟ ಗೊಳಿಸಿ ದರು. ಅವುಗಳಲ್ಲಿ ಕೆಲವನ್ನು ಅನೇಕ ರಾಜ್ಯಗಳು ಪಠ್ಯಕ್ರಮಕ್ಕೆ ಅಳವಡಿಸಿಕೊಂಡವು. ಅದೇನೇ ಇದ್ದರೂ ಭಾಷಾಅಲ್ಪಸಂಖ್ಯಾತರ ಮಾತೃಭಾಷೆಗಳ ಪಠ್ಯಪುಸ್ತಕಗಳನ್ನು ಪೂರೈಸುವುದು ಅತ್ಯಂತ ತ್ವರಿತ ಗತಿಯಿಂದ ಸಾಗಬೇಕಾಗಿದೆ. ಭಾಷಾಅಲ್ಪ ಸಂಖ್ಯಾತರ ಖಾಸಗಿ ಸಂಸ್ಥೆಗಳು ಮುಂದೆ ಬಂದರೆ, ಅವರ ಸಹಾಯವನ್ನು ಸರಕಾರ ಪಡೆಯಬೇಕೆಂದು ಸೂಚಿಸಿದ್ದೇವೆ. ರಾಜ್ಯಸರಕಾರಗಳಿಗೆ ಭಾಷಾಅಲ್ಪಸಂಖ್ಯಾತರ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಅತಿ ವೆಚ್ಚದ ಕ್ರಮವೆಂದು ಪರಿಗಣಿಸಿದರೆ ಮೇಲೆ ತಿಳಿಸಿದ ಮಾರ್ಗಗಳನ್ನು ಅನುಸರಿಸಬಹುದು. ಪಠ್ಯಪುಸ್ತಕಗಳೇ ದೊರೆಯ ದಿದ್ದರೆ ಅಭ್ಯಾಸಮಾಡುವುದಾದರೂ ಹೇಗೆ ?

ಶಿಕ್ಷಕರು ಹಾಗೂ ತರಬೇತಿ ಕೇಂದ್ರಗಳು :

ವಿದ್ಯಾರ್ಥಿಗಳ ಸಂಖ್ಯಾಗುಣಕ್ಕನುಗುಣವಾಗಿ ಶಿಕ್ಷಕರು ಹಾಗೂ ತರಬೇತಿ ಪಡೆದ ಶಿಕ್ಷಕರು ಮತ್ತು ತರಬೇತಿ ಕೇಂದ್ರಗಳು ಸಾಕಾಗುವಷ್ಟು ಪ್ರಮಾಣದಲ್ಲಿ ದೊರೆ ಯದೇ ಹೋದರೆ, ವಿದ್ಯಾರ್ಥಿಗಳು ಅಭ್ಯಾಸ ಮಾಡುವುದೇ ಕಷ್ಟವಾಗುತ್ತದೆ. ಈ ಬಗ್ಗೆ ರಾಜ್ಯಸರ್ಕಾರಗಳಿಗೆ ನಾವು ಈ ರೀತಿ ಸೂಚಿಸಿದ್ದೇವೆ. (i) ಭಾಷಾಅಲ್ಪ ಸಂಖ್ಯಾತರಿಗೆ ಶಿಕ್ಷಣನೀಡಲು ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅನುಕೂಲತೆ ದೊರೆ ಯದೇ ಹೋದರೆ ಆಯಾ ಭಾಷೆಗಳಿಗೆ ಸಂಬಂಧ ಪಟ್ಟ ನೆರೆಯ ರಾಜ್ಯಗಳಿಂದ ಶಿಕ್ಷಕರನ್ನು ನೇಮಿಸಿಕೊಳ್ಳಬೇಕು, (ii) ಶಿಕ್ಷಕರಿಗಾಗಿ ತರಬೇತಿ ನೀಡುವ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಬೇಕು. ಇಲ್ಲವೆ ಈಗಿರುವ ತರಬೇತಿ ಕೇಂದ್ರಗಳಿಗೆ ಭಾಷಾಅಲ್ಪಸಂಖ್ಯಾತರ ಶಿಕ್ಷಕರಿಗಾಗಿ ಕೆಲವು ಸ್ಥಳಗಳನ್ನು ಮೀಸಲಾಗಿಡಬೇಕು, (iii) ಉಭಯ ರಾಜ್ಯಗಳು ಪರಸ್ಪರ ಸಮನ್ವಯ ದೃಷ್ಟಿಯಿಂದ, ಇಂಥ ಶಿಕ್ಷಕರಿಗೆ ತರಬೇತಿ ನೀಡುವ ಒಪ್ಪಂದಗಳನ್ನು ಮಾಡಿಕೊಂಡು, ಭಾಷಾಅಲ್ಪಸಂಖ್ಯಾತರಿಗೆ ಸೌಲಭ್ಯವನ್ನು ಒದಗಿಸಬಹುದು. ಈ ರೀತಿ ಮಾಡುವುದರಿಂದ ಈ ಪ್ರಶ್ನೆಯನ್ನು ಸುಲಭಗೊಳಿಸಬಹುದೆಂದು ನಾವು ಸೂಚಿಸಿದ್ದೇವೆ. ಆದರೆ ಯಾವ ಯಾವ ರಾಜ್ಯಗಳು ಈ ಕ್ರಮಗಳನ್ನು ಅನುಸರಿಸಿವೆ ಎಂಬ ಬಗ್ಗೆ ಮಾಹಿತಿ ದೊರೆತಿಲ್ಲ.

ರಾಜ್ಯದ ಯಾವ ಭಾಗಗಳಲ್ಲಿ ಭಾಷಾಅಲ್ಪಸಂಖ್ಯಾತರು ಭಾಗಶಃ ೦೫ ಪ್ರಮಾಣಕ್ಕಿಂತ ಹೆಚ್ಚಿಗೆ ವಾಸಿಸುವರೋ, ಅಲ್ಲಿನ ಜನಾಂಗಕ್ಕೆ ಅವರವರ ಮಾತೃ ಭಾಷೆಗಳಲ್ಲಿಯೇ ಸರಕಾರದ ಕಾನೂನು ಹಾಗೂ ಮಹತ್ವದ ತಿಳುವಳಿಕೆಗಳನ್ನು ನೀಡ ಬೇಕೆಂದು ಅಖಿಲ ಭಾರತ ಮುಖ್ಯ ಮಂತ್ರಿಗಳ ೧೯೬೧ರ ತೀರ್ಮಾನಕ್ಕೆ ಅನುಗುಣ ವಾಗಿ ಯಾವ ರಾಜ್ಯಗಳಲ್ಲಿಯೂ ಸಾಮಾನ್ಯವಾಗಿ ಪ್ರಗತಿ ಕಂಡು ಬರುತ್ತಿಲ್ಲ. ಕೆಲವು

ರಾಜ್ಯಗಳಲ್ಲಿ ಭಾಷಾಂತರಕಾರರ ಅಭಾವದಿಂದಾಗಿ ಈ ಕ್ರಮವನ್ನು ಅನುಸರಿಸುತ್ತಿಲ್ಲ. ಇನ್ನು ಕೆಲವು ರಾಜ್ಯಗಳಿಂದ ನಮಗೆ ವರದಿಗಳೇ ಬಂದಿಲ್ಲ. ೧೯೭೧ ಜನಗಣತಿಯನ್ನು ಗಮನದಲ್ಲಿಟ್ಟುಕೊಂಡು, ಭಾಗಶಃ ೧೫ಕ್ಕೆ ಮೇಲ್ಪಟ್ಟು ಭಾಷಾಅಲ್ಪಸಂಖ್ಯಾತರು ರಾಜ್ಯದ ಯಾವ ಯಾವ ಭಾಗಗಳಲ್ಲಿ ವಾಸಿಸಿದ್ದಾರೆಂಬುದನ್ನು ಗುರುತಿಸಿದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಅನೇಕ ರಾಜ್ಯಗಳು ತಿಳಿಸಿವೆ. ೧೯೭೧ರ ಜನಗಣತಿಯ ರೀತ್ಯ ಭಾಷಾಅಲ್ಪಸಂಖ್ಯಾಂತರು ೧೫ ಪ್ರಮಾಣಕ್ಕಿಂತ ಹೆಚ್ಚಾಗಿ ವಾಸಿಸುವ ಸ್ಥಳಗಳನ್ನು ಗುರುತಿಸಿ ಅವರಿಗೆ ತಿಳುವಳಿಕೆಯ ಮಹತ್ವದ ಪ್ರಕಟನೆಗಳನ್ನು ನೀಡಿ, ತದನಂತರ ೧೯೭೧ರ ಜನಗಣತಿಗನುಗುಣವಾಗಿ ಆಯಾ ಸ್ಥಳಗಳನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದೇನೆ. ಆ ಬಗ್ಗೆ ಈವರೆಗೆ ಉತ್ತರವೇಇಲ್ಲ.

ಪಂಜಾಬ ರಾಜ್ಯವು ೧೫ ಪ್ರಮಾಣಕ್ಕಿಂತ ಹೆಚ್ಚಿಗೆ ವಾಸಿಸಿರುವ ಮುಸಲ್ಮಾನರ ರಾಜ್ಯದ ಯಾವ ಭಾಗದಲ್ಲಿ ವಾಸಿಸಿರುವರೋ ಅಲ್ಲಿ ಸರಕಾರದ ಕಾನೂನು ಮತ್ತು ಮಹತ್ವದ ತಿಳುವಳಿಕೆಗಳನ್ನು ಉರ್ದು ಭಾಷೆಯಲ್ಲಿ ಪ್ರಕಟಿಸಬೇಕೆಂದು ಆದೇಶವನ್ನಿತ್ತಿತ್ತು, ಆದರೆ ೧೯೬೬ರಲ್ಲಿ ರಾಜ್ಯ ಪುನರ್‌ವಿಂಗಡಣೆಯಾದನಂತರ ರಾಜ್ಯದಲ್ಲಿ ೧೫ ಪ್ರಮಾಣದಲ್ಲಿ ಯಾವ ಭಾಷಾಅಲ್ಪಸಂಖ್ಯಾತರೂ ವಾಸಿಸಿಲ್ಲವೆಂಬ ಕಾರಣದಿಂದ ಭಾಷಾಅಲ್ಪಸಖ್ಯಾತರಿಗೆ ಅವರವರ ಭಾಷೆಗಳಲ್ಲಿ ಸರಕಾರೀ ಮಹತ್ವದ ಪ್ರಕಟನೆಗಳನ್ನು ನೀಡುತ್ತಿಲ್ಲ.

೧೯೭೧ರ ಜನಗಣತಿಯ ಆಧಾರದ ಮೇಲಿಂದಲಾದರೂ ಹಿಮಾಚಲ ಪ್ರದೇಶವು ಈವರೆಗೆ ರಾಜ್ಯದಲ್ಲಿ ೧೫ ಪ್ರಮಾಣಕ್ಕಿಂತ ಹೆಚ್ಚಿಗೆ ಭಾಷಾಅಲ್ಪಸಂಖ್ಯಾತರು ವಾಸಿಸಿರುವ ಪ್ರದೇಶಗಳನ್ನು ಗುರುತಿಸಿಲ್ಲ.

ಆಸಾಮು, ಜಮ್ಮು ಕಾಶ್ಮೀರ ಮಣಿಪುರ ರಾಜ್ಯಗಳು ರಾಜ್ಯದಲ್ಲಿ ೧೫ ಪ್ರಮಾಣಕ್ಕಿಂತ ಹೆಚ್ಚಿಗೆ ವಾಸಿಸಿರುವ ಭಾಷಾಅಲ್ಪಸಂಖ್ಯಾತರ ಪ್ರದೇಶಗಳನ್ನು ಗುರುತಿಸಿದ್ದರೂ, ಈವರೆಗೆ ಅವರ ತಿಳುವಳಿಕೆಗಾಗಿ ಸರಕಾರದ ಕಾನೂನು ಹಾಗೂ ಮಹತ್ವದ ತಿಳುವಳಿಕೆಗಳನ್ನು ಅವರವರ ಮಾತೃಭಾಷೆಗಳಲ್ಲಿ ಪ್ರಕಟಿಸುತ್ತಿಲ್ಲ.

ಉರ್ದು ಯಾವ ರಾಜ್ಯದಲ್ಲಿಯೂ ಎರಡನೆಯ ಆಡಳಿತ ಭಾಷೆಯಾಗುವುದಿಲ್ಲ.

ರಾಜ್ಯ ಪುನರ್ ವಿಂಗಡನಾ ಆಯೋಗದ ಶಿಫಾರಸುಗಳನ್ನು ಆಧರಿಸಿ, ೧೯೫೬ರಲ್ಲಿ ಕೇಂದ್ರ ಸರಕಾರವು ಅಳವಡಿಸಿಕೊಂಡ ನಿಯಮಾವಳಿಯ ರೀತ್ಯ ಯಾವುದೇ ರಾಜ್ಯದಲ್ಲಿ ಭಾಗಶಃ ೩೦ ಪ್ರಮಾಣದಲ್ಲಿ ಯಾವುದೇ ಭಾಷೆಯನ್ನು ಆಡುವ ಜನಸಂಖ್ಯೆ ಇದ್ದರೆ, ಆ ರಾಜ್ಯದ ಆಡಳಿತ ಭಾಷೆಯೊಂದಿಗೆ ಈ ಭಾಷೆಯನ್ನು ಎರಡನೆಯ ಆಡಳಿತ ಭಾಷೆಯೆಂದು ಪರಿಗಣಿಸಬೇಕಲ್ಲದೆ, ದ್ವಿಭಾಷಾ ರಾಜ್ಯಗಳೆಂದು ಸಾರಬೇಕು. ಈ ನಿಯಮವನ್ನು ಆಧಾರವಾಗಿಟ್ಟುಕೊಂಡು ಉತ್ತರ ಪ್ರದೇಶ, ಬಿಹಾರ ರಾಜ್ಯಗಳಲ್ಲಿ

ಉರ್ದು ಭಾಷೆಯನ್ನು ಆ ಎರಡೂ ರಾಜ್ಯಗಳಲ್ಲಿ ಎರಡನೆಯ ಆಡಳಿತ ಭಾಷೆ ಎಂದು ಅಂಗೀಕರಿಸಬೇಕೆಂಬ ಅಲ್ಲಿಯ ಮುಸಲ್ಮಾನರು ಬೇಡಿಕೆಯನ್ನು ಸಲ್ಲಿಸಿದ್ದಾರೆ. ಆದರೆ ಭಾರತದಲ್ಲಿ ಯಾವುದೇ ರಾಜ್ಯಗಳು ದ್ವಿಭಾಷಾ ರಾಜ್ಯಗಳ ಅರ್ಹತೆಯನ್ನು ಹೊಂದಿಲ್ಲ.

೧೯೭೧ ರ ಜನಗಣತಿಯ ರೀತ್ಯ ಉತ್ತರ ಪ್ರದೇಶದ ಜನಸಂಖ್ಯೆಯ ಶೇಖಡಾ ೧೦.೫೦ ಪ್ರಮಾಣದಲ್ಲಿ ಮುಸಲ್ಮಾನರಿದ್ದಾರೆ. ಇಲ್ಲಿಯೂ ಕೂಡಾ ಉರ್ದು ಭಾಷೆಯು ಈ ರಾಜ್ಯದ ಎರಡನೆಯ ಆಡಳಿತ ಭಾಷೆಯಾಗಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಭಾರತದ ಯಾವುದೇ ರಾಜ್ಯಗಳಲ್ಲಾಗಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಾಗಲಿ ಉರ್ದು ಅಥವಾ ಯಾವುದೇ ಭಾಷಾಅಲ್ಪಸಂಖ್ಯಾತರ ಭಾಷೆಯು ಎರಡನೆಯ ಆಡಳಿತ ಭಾಷೆಯಾಗುವ ಸಾಧ್ಯತೆಯಿಲ್ಲ. ಉರ್ದು ಭಾಷೆಯನ್ನು ಜಮ್ಮು ಕಾಶ್ಮೀರದಲ್ಲಿ ಈಗಾಗಲೇ ಆಡಳಿತ ಭಾಷೆಯನ್ನಾಗಿ ಮಾನ್ಯತೆ ನೀಡಲಾಗಿದೆ.

ಸಂವಿಧಾನದ ಎಂಟನೇ ಸೆಡ್ಯೂಲಿನಲ್ಲಿ ಕೊಂಕಣಿ, ನೇಪಾಳಿ, ಮಣಿಪುರಿ ಭಾಷೆಗಳನ್ನು ಸೇರಿಸುವಂತೆ ಒತ್ತಾಯಿಸಿ, ಅನೇಕ ಬೇಡಿಕೆಗಳು ನಮಗೆ ಬರುತ್ತಲೇ ಇವೆ. ಎಂಟನೆಯ ಶೆಡ್ಯೂಲಿನಲ್ಲಿ ಸೇರ್ಪಡೆಯಾಗಿರುವ ೧೫ ಭಾಷೆಗಳನ್ನು ಹೊರತು ಪಡಿಸಿ, ಬೇರೆ ಭಾಷಾಅಲ್ಪಸಂಖ್ಯಾತ ಭಾಷೆಗಳಿಗೆ ಯಾವ ಮಾನ್ಯತೆಯೂ ಇಲ್ಲವೆಂದು ಸಂವಿಧಾನದಲ್ಲಿ ನಮೂದಿಸಿಲ್ಲ ಎಂಬ ವಿಷಯವನ್ನು ಮೊದಲನೆಯ ವರದಿಯಲ್ಲಿಯೇ ಸ್ಪಷ್ಟಪಡಿಸಿದ್ದೇವೆ. ೧೯೭೧ ರ ಜನಗಣತಿಯ ರೀತ್ಯ ೧೭೯ ಭಾಷೆಗಳು, ೫೪೪ ನಾಡ ಭಾಷೆಗಳು ೩೦೦೦ ಮಾತೃ ಭಾಷೆಗಳು ಇರುವುದಾಗಿ ತಿಳಿದು ಬಂದಿದೆ. ಈ ಎಲ್ಲ ಭಾಷೆಗಳಿಗೂ ಎಂಟನೆಯ ಶೆಡ್ಯೂಲಿನಲ್ಲ ಅವಕಾಶವನ್ನು ಒದಗಿಸುವುದು ಸಾಧುವಲ್ಲ. ಎಂಟನೆಯ ಷೆಡ್ಯೂಲಿನಲ್ಲಿ ಮಾನ್ಯತೆ ಪಡೆಯದೆ ಇದ್ದ ಭಾಷೆಗಳ ರಕ್ಷಣೆಗೂ ಸಂವಿಧಾನದಲ್ಲಿ ಅವಕಾಶವಿದೆ.

ಸರಕಾರಿ ಹುದ್ದೆಗಳು, ಸೇವಾವಕಾಶ, ಭಾಷಾ ಪರೀಕ್ಷೆ, ಎದುರಿಸಬೇಕಾದ ತೊಡಕುಗಳು

೧೯೬೧ ರ ಮುಖ್ಯ ಮಂತ್ರಿಗಳ ಸಭೆಯ ತಿರ್ಮಾನದಂತೆ ರಾಜ್ಯಗಳಲ್ಲಿ ನೌಕರಿ ದೊರಕಿಸಿಕೊಳ್ಳಬೇಕೆನ್ನುವವರಿಗೆ ಭಾಷೆಯ ನಿಬಂಧನೆ ಇರಬಾರದು. ಲೋಕ ಸೇವಾ ಆಯೋಗದ ಪರೀಕ್ಷೆಗಳಲ್ಲಿ ಇಂಗ್ಲೀಷ, ಹಿಂದೀ ಭಾಷೆಗಳನ್ನು ಮಾಧ್ಯಮವಾಗಿ ಬಳಸಬಹುದು. ರಾಜ್ಯಗಳ ಆಡಳಿತ ಭಾಷೆಗಳಲ್ಲಿಯ ಪರಿಣತೆಯನ್ನು ಹೊಂದಲು ನೌಕರಿ ಸೇರಿದವರು ಭಡ್ತಿ ಪಡೆಯುವ ಪೂರ್ವದಲ್ಲಿಯೇ ಆಯಾ ರಾಜ್ಯಗಳ ಆಡಳಿತ ಭಾಷೆಯಲ್ಲಿ ಪರೀಕ್ಷೆಯನ್ನು ನೀಡಬೇಕು.

ಬಿಹಾರ, ಹರಿಯಾಣ, ಹಿಮಾಚಲ ಪ್ರದೇಶ, ಮಧ್ಯ ಪ್ರದೇಶ, ಮಣಿಪುರಿ, ಓರಿಸಾ, ಪಂಜಾಬ. ರಾಜಸ್ತಾನ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳಿ

ರಾಜ್ಯಗಳಲ್ಲಿ ಸರಕಾರಿ ನೌಕರಿ ಸೇರಬೇಕೆನ್ನುವವರಿಗೆ ಆಯಾ ರಾಜ್ಯಗಳ ರಾಜ್ಯ ಭಾಷೆಯ ಜ್ಞಾನವು ಇರಲೇಬೇಕೆಂಬ ನಿರ್ಬಂಧವಿದೆ. ಆದರೆ ಜಿಲ್ಲಾಧಿಕಾರಿ ಸಿವಿಲ್ ಜಡ್ಜ ಮತ್ತು ತಹಶೀಲದಾರರಾಗ ಬೇಕೆನ್ನುವವರಿಗೆ ಮಾತ್ರ ರಾಜ್ಯ ಭಾಷೆಯ ಜ್ಞಾನವಿರಲೇಬೇಕೆಂದು ಮಹಾರಾಷ್ಟ್ರ ಸರಕಾರವು ನಿಬಂಧನೆಯನ್ನ ಹಾಕಿಕೊಂಡಿದೆ. ಮೇಲೆ ಕಾಣಿಸಿದ ನಿಬಂಧನೆಯಿಂದ ಸರಕಾರಿ ನೌಕರಿ ಸೇರಬೇಕೆನ್ನುವ ಭಾಷಾಅಲ್ಪ ಸಂಖ್ಯಾತರಿಗೆ ಆ ರಾಜ್ಯಗಳಲ್ಲಿ ಅತ್ಯಂತ ತೊಂದರೆಯಾಗಿದೆ. ಈ ರೀತಿಯ ನಿರ್ಬಂಧವನ್ನು ಭಾಷಾಅಲ್ಪಸಂಖ್ಯಾತರ ತಲೆಯ ಮೇಲೆ ಒತ್ತಾಯವಾಗಿ ಹೇರುವುದು ೧೯೬೧ ರ ಮುಖ್ಯ ಮಂತ್ರಿಗಳ ತೀರ್ಮಾನವನ್ನು ಧಿಕ್ಕರಿಸಿದಂತಾಗುತ್ತದೆ ಹಾಗೂ ಭಾಷಾ ಬಹುಸಂಖ್ಯಾತರಿಗೆ ರಾಜ್ಯದಲ್ಲಿ ಸರಕಾರಿ ಸೇವಾವಕಾಶಗಳು ದೊರೆತು ಭಾಷಾಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿದಂತಾಗುತ್ತದೆಯಲ್ಲದೆ ಅವರಿಗೆ ನಿರಾಶೆಯೂ, ಭಯವೂ ಉಂಟಾಗುತ್ತದೆ.

ಭಾಷಾ ಅಲ್ಪ ಸಂಖ್ಯಾತರಿಗೆ ಸ್ವಾಭಾವಿಕವಾಗಿಯೇ ಈ ರೀತಿ ಭಯ ಉಂಟಾಗುತ್ತಿರುವುದನ್ನು ಅವರ ಮನಸ್ಸಿನಿಂದ ಕಿತ್ತೊಗೆದು, ಅವರೂ ಇತರರಂತೆ ನಿರ್ಭಯವಾಗಿ ಸುಖೀ ಜೀವನ ಸಾಗಿಸಬೇಕಾದರೆ ಪ್ರಾದೇಶ ಭಾಷೆಯ ಜ್ಞಾನವು ಸರಕಾರಿ ಹುದ್ದೆಗಳಿಗೆ ಸೇರುವ ಮೊದಲೇ ಅವಶ್ಯಕವಾಗಿ ಇರಲೇಬೇಕೆಂಬ ನಿರ್ಬಂಧವನ್ನು ತೆಗೆಯಬೇಕು.

ಭಾಷಾ ಅಲ್ಪ ಸಂಖ್ಯಾತರು ತಮಗಾಗುವ ತೊಡಕು–ತೊಂದರೆಗಳ ಬಗ್ಗೆ ಹಾಗೂ ಬೇಕು–ಬೇಡಗಳ ಬಗ್ಗೆ ಪುನಃ ಪುನಃ ತಮ್ಮ ಬೇಡಿಕೆಗಳನ್ನು ಸಲ್ಲಿಸುತ್ತಲೇ ಇರುತ್ತಾರೆ. ಅಂಥ ಸಂದರ್ಭಗಳಲ್ಲಿ ನಾವು ಸಂಬಂಧಪಟ್ಟ ರಾಜ್ಯಗಳೊಡನೆ ಪತ್ರ ವ್ಯವಹಾರ ನಡೆಸಿದಾಗ ನಾವು ನಿರೀಕ್ಷಣೆ ಮಾಡಿದಂತೆ ಉತ್ತರಗಳು ಬಾರದಿರುವುದರಿಂದ ಹಾಗೂ ನಿವಾರಣೋಪಾಯಗಳನ್ನು ಸಂಬಂಧಪಟ್ಟ ರಾಜ್ಯಗಳು ತಕ್ಷಣ ತೆಗೆದುಕೊಳ್ಳದೇ ಹೋಗುವುದರಿಂದ, ಭಾಷಾ ಅಲ್ಪಸಂಖ್ಯಾತರಿಗೆ ಅತೀವ ತೊಂದರೆಯಾಗುತ್ತಲಿದೆ, ಅದಕ್ಕಾಗಿ ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಯನ್ನು ರಾಜ್ಯದ ವಿವಿಧ ಹಂತಗಳಲ್ಲಿ ಪ್ರತ್ಯೇಕ ವ್ಯವಸ್ಥೆಗಳ ಮೂಲಕ ಆಡಳಿತಾಂಗಗಳಿಗೆ ಜೋಡಿಸಬೇಕು. ಈ ರೀತಿ ಮಾಡುವುದರಿಂದ ರಾಜ್ಯಾಡಳಿತಕ್ಕೂ ಹಾಗು ಭಾಷಾ ಅಲ್ಪ ಸಂಖ್ಯಾತರ ಹಿತರಕ್ಷಣೆಯ ಕಾರ್ಯಕ್ರಮಕ್ಕೂ ಕ್ಷೇಮವಾಗುವುದೆಂದು ನಾವು ಎಲ್ಲ ರಾಜ್ಯಗಳಿಗೂ ಸೂಚಿಸಿದ್ದೇವೆ.

ಭಾಷಾ ಅಲ್ಪಸಂಖ್ಯಾತರ ಭಾಷೆಗಳಲ್ಲಿ ಸರಕಾರದ ಕಾನೂನು ಮತ್ತು ಮಹತ್ವದ ಪ್ರಕಟನೆಗಳನ್ನು ಸಂಬಂಧ ಪಟ್ಟ ಜನಸಂಖ್ಯೆಯ ಪ್ರದೇಶಗಳಲ್ಲಿ ವಾಸವಾಗಿರುವವರ ಕ್ಷೇತ್ರಾಭಿವೃದ್ಧಿಯ ದೃಷ್ಟಿಯಿಂದ ಪ್ರಕಟಿಸಬೇಕೆಂದು ನಾವು ಈ ಮೊದಲೇ ಅನೇಕ ಸಾರೆ ಸೂಚಿಸಿದ್ದರೂ, ಆಸಾಮು, ಹರಿಯಾನಾ, ಹಿಮಾಚಲಪ್ರದೇಶ, ಜಮ್ಮು-

ಕಾಶ್ಮೀರ, ಮಣಿಪುರ, ಮೇಘಾಲಯ, ಮಧ್ಯಪ್ರದೇಶ ನಾಗಾಲ್ಯಾಂಡ, ಪಂಜಾಬ, ರಾಜಸ್ತಾನ, ತ್ರಿಪುರಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಾಗಿರುವ ಅರುಣಾಚಲ ಪ್ರದೇಶ, ಅಂದವಾನ ನಿಕೋಬಾರ ದ್ವೀಪಗಳು, ಚಂದೀಘರ್, ಲಕ್ಷದ್ವೀಪ, ಮಿಝೋರಾಮ ರಾಜ್ಯಗಳು ಈವರೆಗೆ ಭಾಷಾ ಅಲ್ಪ ಸಂಖ್ಯಾತರ ಭಾಷೆಗಳಲ್ಲಿ ಯಾವುದೇ ಪ್ರಕಟನೆಗಳನ್ನು ಪ್ರಕಟಿಸುತ್ತಿಲ್ಲ, ಈ ಕ್ರಮವನ್ನು ಕೈಕೊಳ್ಳುವುದರಿಂದ ಭಾಷಾಅಲ್ಪ ಸಂಖ್ಯಾತರಿಗಷ್ಟೇ ರಕ್ಷಣ ನೀಡಿದಂತಾಗುವುದಿಲ್ಲ, ರಾಜ್ಯಗಳು ತಮ್ಮ ಹೊಣೆಗಾರಿಕೆಯ ಕರ್ತವ್ಯವನ್ನೂ ಪಾಲಿಸಿದಂತಾಗುತ್ತದೆ.

ಭಾಷಾ ಅಲ್ಪ ಸಂಖ್ಯಾತರಿಗೆ ಸಂಬಂಧ ಪಟ್ಟ ಸಭೆ-ಸಮ್ಮೇಳನಗಳು

- ೧೯೪೯ ರಲ್ಲಿ ಪ್ರಾಂತೀಯ ಶಿಕ್ಷಣ ಸಚಿವರ ಸಮ್ಮೇಳನ (ಭಾರತ ಸರ್ಕಾರದ ಕೇಂದ್ರ ಶೈಕ್ಷಣಿಕ ಸಲಹಾ ಸಮಿತಿಯು ಈ ಸಮ್ಮೇಳನ ತೀರ್ಮಾನಗಳಿಗೆ ಒಪ್ಪಿಗೆ ನೀಡಿದೆ.)

- ೧೯೫೬ ರಲ್ಲಿ ಕೇಂದ್ರ ಸರಕಾರವು ಒಂದು ನಿವೇದನ ಪತ್ರವನ್ನು ಅಂಗೀಕರಿಸಿದೆ. ೧೯೫೮ ಜುಲೈ ೧೪ ರಂದು ಕೇಂದ್ರ ಸರಕಾರದ ಒಳಾಡಳಿತ ಇಲಾಖೆಯು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದೆ.

- ೧೯೬೦ ರಲ್ಲಿ ದಕ್ಷಿಣ ವಲಯದ ಆಲೋಚನಾ ಸಭೆ ಜರುಗಿತು.

- ೧೯೬೧ ರಲ್ಲಿ ಮುಖ್ಯಮಂತ್ರಿಗಳ ಹಾಗೂ ಕೇಂದ್ರ ಸಚಿವರ ಸಮಾಲೋಚನಾ ಸಭೆ ಹಲವು ತೀರ್ಮಾನಗಳನ್ನು ತೆಗೆದುಕೊಂಡಿತು.

ಮಹದೇವ ಬಣಕಾರರ ವಚನಗಳು ಇಂದಿನ ಜನಜೀವನವನ್ನು ಪ್ರತಿಬಿಂಬಿಸುವ ರನ್ನಗನ್ನಡಿಯಂತಿವೆ. ಇವುಗಳ ಚಲುವು ಚರ್ಯೆಗಳ ಬಗೆಗೆ ಒಂದು ಉದ್ಗ್ರಂಥದ ಅಗತ್ಯತೆ ಇದೆ.

—ಎಚ್. ದೇವೀರಪ್ಪ ಎಂ.ಎ.

......ಮಹದೇವರನ್ನು ಎಷ್ಟೋ ವರ್ಷಗಳಿಂದ ಬಲ್ಲವನು ನಾನು ಎಂಬ ಭಾವನೆ ಇತ್ತು. ಇಲ್ಲವಪ್ಪ! ನಿಮ್ಮ ಬೃಹತ್ ಕೃತಿ ಆ ಭಾವನೆಯನ್ನು ತೊಡೆದಿದೆ. ನಿಮ್ಮ ಸಾಧನೆಯ (ಅಥವಾ 'ಸಿದ್ಧಿ'ಯ ಎನ್ನಲೇ?) ಈ ಶಲೆಯನ್ನು ನಾನು ಅರಿತೇ ಇರಲಿಲ್ಲ!

'ಮ.ಬ.ವ.' ಸಿರಿಗೆರೆಯನ್ನು ಸಿರಿಸಾಗರವಾಗಿ ಮಾಡಿದೆ.

— ನಿರಂಜನ

ಮಹದೇವ ಬಣಕಾರ ವಚನಗಳು ಸಾರ್ವಕಾಲಿಕ ಮೌಲ್ಯಗಳಾದ ಸರ್ವಸಮಾನತೆ, ಜಾತಿ ವಿನಾಶ, ಕುಲಮದ ನಿರಶನ, ಸ್ತ್ರೀ-ಪುರುಷರ ಸಮಾನದೃಷ್ಟಿ, ಕಾಯಕ ನಿಷ್ಠೆ, ಈ ಮೊದಲಾದವುಗಳು ಶ್ರೀ ಬಣಕಾರರ ಆಧುನಿಕ ವಿಚಾರದ ಮೂಸೆಯಲ್ಲಿ ಕರಗಿ ಹೊಸ ಕ್ರಾಂತಿಯಿಂದ ವ್ಯೈವೆತ್ತಿವೆ.

—ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಧರ್ಮ ಪಿಪಾಸುಗಳಿಗೆ ಮಹದೇವ ಬಣಕಾರ ವಚನಗಳು ಶಾಂತಿ, ಶಾಂತಿಯನ್ನು ನೀಡಬಲ್ಲವು ಎಂದು ಧಾರಾಳವಾಗಿ ಹೇಳಬಹುದು. ಆಧುನಿಕ ವಚನಕಾರರಲ್ಲಿ ಮದೇವ ಬಣಕಾರರ ಹೆಸರು ಬಹುಕಾಲ ನಿಲ್ಲುವಂತಹದು.

—ಎನ್. ಬಸವಾರಾಧ್ಯ ಎಂ.ಎ.

....ಆಧುನಿಕ ವಚನಕಾರರಲ್ಲಿ ಮಹದೇವ ಬಣಕಾರರು ತಮ್ಮ ಕಮ್ಮಟದ ಕರ್ಮಾಗಾರದಿಂದ ಸುಂದರ ವಚನನಾಣ್ಯಗಳನ್ನು ಚಲಾವಣೆಗೆ ತಂದು, ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾರೆ.

—ಹಂ. ಎರೇಸೀಮಿ ಚನ್ನಪ್ಪ

ಶರಣ ಧರ್ಮಕ್ಕೆ ಮಾರುಹೋದ ಬಣಕಾರರು ವಚನಕಾರರ ಬದುಕು ಬರಹ, ಬೋಧೆ ಇವುಗಳ ಯಥಾರ್ಥ, ಸುಂದರ ಮೌಲಿಕ ಚಿತ್ರಣ ಒದಗಿಸಲು ಸಮರ್ಥರಾಗಿದ್ದಾರೆ.

— ಪ್ರೊ. ಸ. ಸ. ಮಾಳವಾಡ

ಹೊಸಗನ್ನಡಕ್ಕೆ ನೀವು ಕೊಟ್ಟಿರುವ ಈ ಬಹುಮೂಲ್ಯ ಕಾಣಿಕೆಗಾಗಿ ನಿಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

—ಡಾ|| ರಂ. ಶ್ರೀ. ಮುಗಳಿ

ಪರಂಪರಾನುಗತವಾಗಿ ಬಂದ ವಚನಗಳ ಚೌಕಟ್ಟಿನಲ್ಲಿ ಸಮಕಾಲೀನ ಪ್ರಜ್ಞೆಯಿಂದ ಈಗಿನ ಸಮಾಜಕ್ಕೆ ಅನ್ವಯಿಸುವಂತೆ ಮನನಾಟುವ ನುಡಿಗಳಲ್ಲಿ ವಚನಗಳು ಹೃದಯದಿಂದ ಹೊರಬಂದಿವೆ.

—ಡಾ|| ಎಂ. ಶಿವರಾಂ

ಇದು ಅನುಭಾವಿಗಳ ಕೈಪಿಡಿ, ಆಧ್ಯಾತ್ಮಿಗಳ ಭಾಷ್ಯ, ಇಲ್ಲಿನ ಭಾವಕತೆ, ಪ್ರೌಢಿಮೆ, ಗಾಂಭೀರ್ಯ, ಭಾಷಾಪ್ರಭುತ್ವ ಜೀವನಾನುಭವ ಬಹುಪ್ರಜ್ಞೆ, ಲೋಕಧರ್ಮ ಮತ್ತು ಕಾವ್ಯಧರ್ಮಗಳ ಸಮನ್ವಯ ಸಿದ್ಧಿ ಇವುಗಳನ್ನು ಕಂಡು ಬೆರಗಾಗಿದ್ದೇನೆ.

— ಡಾ|| ಸಾ. ಶಿ. ಮರುಳಯ್ಯ

ವಿವರಗಳಿಗೆ :

ಅನುಭವ ಮಂಟಪ ಪ್ರಕಾಶನ

೫ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು–೧೦

ದೂರವಾಣಿ : ೮೧೨೫೩

ಇದೇ ಲೇಖಕರ ಇತರ ಕೃತಿಗಳು



ಕಾವ್ಯೋದಯ (ಕವನ ಸಂಕಲನ)
ಬಣ್ಣದ ಕಾರಂಜಿ ,,
ಅಪರಂಜಿ ,,
ಹೊಸಹುಟ್ಟು ,,
ತಿಂದೋಡಿ (ನಾಟಕ)
ಕಲ್ಯಾಣ ಕ್ರಾಂತಿ ,,
ಎ.ಬಿ.ಸಿ.ಡಿ. ,,
ಯಾರು ಹೊಣೆ ? ,,
ಲೋಕದ ಕಣ್ಣು (ಕಥಾ ಸಂಕಲನ)
ಕರ್ನಾಟಕ ಸಮಗ್ರತೆ
ಕರ್ನಾಟಕ–ಮಹಾರಾಷ್ಟ್ರ
(ಮಹಾಜನ ವರದಿ ವಿಶ್ಲೇಷಣೆ)
ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗದು
ಮತ್ತು
ಕಾಸರಗೋಡು ಕೇರಳದಲ್ಲಿ ಉಳಿಯದು.
(ವಿಶ್ಲೇಷಣೆ)
ಕರ್ನಾಟಕ ಉಜ್ವಲ ಪರಂಪರೆ (ಸಂಪಾದನೆ)
ಮಾದನ ಮಗ ಮತ್ತು ಇತರ ಕಥೆಗಳು
(ಕಥಾ ಸಂಕಲನ)

ಭಾರತದಲ್ಲಿ–ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆ. (ವಿಶ್ಲೇಷಣೆ)
(ಕರ್ನಾಟಕದ ಮೇಲ್ಮೆ)
Safeguards for
Linguistic minorities in India.

ವಚನ ಸಾಹಿತ್ಯ :

ಮಹದೇವ ಬಣಕಾರ ವಚನಗಳು (೧೧೦೮ ವಚನಗಳ ಬೃಹತ್ ಗ್ರಂಥ)
ಅಜ್ಞಾನ ನಿರಶನ ಸ್ಥಲ ವಚನಗಳು
ಜ್ಞಾನ ಪ್ರತಿಪಾದನ ಸ್ಥಲ ವಚನಗಳು
ಆಚಾರ ನಿರ್ದೇಶನ ಸ್ಥಲ ವಚನಗಳು
ಅನುಭಾವ ನಿಷ್ಪತ್ತಿ ಸ್ಥಲ ಮತ್ತು ನಿರವಯ ಸ್ಥಲ ವಚನಗಳು
ವಚನ ದೀಪ್ತಿ (ಕರ್ನಾಟಕ ವಿ. ವಿ. ಎರಡನೇ ಬಿ. ಎಸ್. ಸಿ., ಪಠ್ಯಪುಸ್ತಕ)